ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯ

ವಿವಿಧ ಲೇಖಕರು

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

KANNADADALLI VAIDYAKEEYA SAHITHYA—A collection of articles, written by various writers and published by Karnataka Sahithya Academy, Nrupathunga Road, Bangalore-560 002

Pages : 104+VI Price : Rs 8/-

First Impression : 1992

ಮೊದಲ ಮುದ್ರಣ : ೧೯೯೨

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು–ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ಬಿ. ಎನ್. ಸತ್ಯನಾರಾಯಣ ರಾವ್
ರಿಜಿಸ್ಟ್ರಾರ್–ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨

ಬೆಲೆ : ಎಂಟು ರೂಪಾಯಿಗಳು

ಮುದ್ರಕರು :

ನೇತ್ರಾ ಪ್ರಿಂಟರ್ಸ್
ಆರನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು–560 018

ಅಧ್ಯಕ್ಷರ ಮಾತು

ಸಾಹಿತ್ಯೇತರ ಕ್ಷೇತ್ರಗಳಲ್ಲಿ ಕನ್ನಡದ ಬಳಕೆ ಹೆಚ್ಚಾದಂತೆ ಭಾಷೆಗೂ ಹದ ಬರುತ್ತದೆ; ಭಾಷೆಯನ್ನು ಬಳಸುವ ಮನಸ್ಸಿಗೂ ಮೊನಚು ಮೂಡುತ್ತದೆ. ಆದ್ದರಿಂದ, ಕನ್ನಡದ ಉಪಯೋಗವು ನಮ್ಮ ಭಾವ-ಬುದ್ಧಿಗಳನ್ನು ಬೆರಗುಗೊಳಿಸುವ ಒಂದು ವಿಶಿಷ್ಟ ಪ್ರಕ್ರಿಯೆ. ಕನ್ನಡದ ಮೂಲಕ ನಾವು ವಿವಿಧ ವಿಷಯಗಳನ್ನು ವ್ಯಕ್ತಪಡಿಸುತ್ತ, ಅಭಿವ್ಯಕ್ತ ಪಡಿಸುತ್ತ ಹೋದಂತೆ ಭಾಷೆಯೂ ಬದಲಾಗುತ್ತದೆ; ನಾವೂ ಬದಲಾಗುತ್ತೇವೆ. ವಿಜ್ಞಾನದ ವಿವಿಧ ನೆಲೆಗಳು ಕನ್ನಡದ ಮೂಲಕ ಮಾತು ಪಡೆಯುವುದು ಈ ದೃಷ್ಟಿಯಿಂದ ಮುಖ್ಯವಾದುದು. 'ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯ'ವೆಂಬ ಈ ಕೃತಿಯ ಮಹತ್ವವನ್ನು ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ತಿಳಿಯಬಹುದು.

ದಿನಾಂಕ ೧೧-೧೦-೧೯೯೨ರಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಶಿವಮೊಗ್ಗೆಯ ಕರ್ನಾಟಕ ಸಂಘ—ಸಂಯುಕ್ತವಾಗಿ ಸಂಘಟಿಸಿದ ವಿಚಾರ ಸಂಕಿರಣದ ಪ್ರಬಂಧಗಳು ಈ ಪುಸ್ತಕದಲ್ಲಿ ಸಂಕಲಿತವಾಗಿವೆ. ಸಂಯುಕ್ತ ಕಾರ್ಯಕ್ರಮಗಳಲ್ಲಿ ಆಯ್ದ ಕೃತಿಗಳನ್ನು ಪ್ರಕಟಿಸಲು ಅಕಾಡೆಮಿಯು ತೀರ್ಮಾನಿಸಿದ್ದು, ಅದಕ್ಕನುಗುಣವಾಗಿ ಈ ಪುಸ್ತಕ ಪ್ರಕಟವಾಗುತ್ತಿದೆ. ಮೊದಲು ಅಕಾಡೆಮಿಯ ಸ್ವತಂತ್ರ ವಿಚಾರ ಸಂಕಿರಣಗಳ ಪುಸ್ತಕಗಳನ್ನು ಮಾತ್ರ ಪ್ರಕಟಿಸುವ ಪರಿಪಾಠವಿದ್ದು ಈಗ ಅದನ್ನು ಸಂಯುಕ್ತ ಕಾರ್ಯಕ್ರಮಗಳಿಗೂ ವಿಸ್ತರಿಸಲಾಗಿದೆ.

ಈ ಸಂದರ್ಭದಲ್ಲಿ ಶಿವಮೊಗ್ಗೆಯ ಕರ್ನಾಟಕ ಸಂಘದ ಎಲ್ಲ ಪದಾಧಿಕಾರಿಗಳನ್ನೂ ವಿಶೇಷವಾಗಿ ಡಾ॥ ಹೆಚ್. ಡಿ. ಚಂದ್ರಪ್ಪಗೌಡರನ್ನೂ ನೆನೆಯಬೇಕು.

ಅಕಾಡೆಮಿಗೆ ಸದಾ ಒಳಿತನ್ನು ಬಯಸುವ ಹಿತೈಷಿಗಳಿಗೆ ಕೃತಜ್ಞತೆಗಳು.

ನವೆಂಬರ್ ೧೯೯೨
ಬೆಂಗಳೂರು

ಬರಗೂರು ರಾಮಚಂದ್ರಪ್ಪ

ಲೇಖನಗಳು

ಕನ್ನಡದ ವೈದ್ಯಕೀಯ ಸಾಹಿತ್ಯವನ್ನು ಕುರಿತು

—ಡಾ॥ ದೊಡ್ಡೇರಿ ವೆಂಕಟಗಿರಿರಾವ್

ಕನ್ನಡ ಸಾಹಿತ್ಯದಲ್ಲಿ ವೈದ್ಯಕೀಯ ಸಾಹಿತ್ಯವು ನೂರಾರು ವರ್ಷಗಳಿಗಿಂತ ಹಿಂದಿನದು. ಭಾರತೀಯ ವೈದ್ಯಶಾಸ್ತ್ರ ಪ್ರವರ್ತಕರಾದ ಧನ್ವಂತರಿ, ಚರಕ, ಶುಶ್ರುತ, ವಾಗ್ಭಟ ಮೊದಲಾದವರೂ, ಈ ವೈದ್ಯಕೀಯ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದ ಮಾಡಿದ, ಸಂಗ್ರಹಿಸಿದ ಹಲವು ಮಹನೀಯರೂ ತಮ್ಮ ಅಮೋಘ ವಾದ ಕೊಡುಗೆ ಮತ್ತು ಕೃತಿಗಳ ಮೂಲಕ ಕನ್ನಡ ಸಾಹಿತ್ಯ ಸಂಪತ್ತನ್ನು ಹೆಚ್ಚಿಸಿದ್ದಾರೆ. ಅವರು ಹಾಕಿಕೊಟ್ಟ ತಳಹದಿಯ ಮೇಲೆ ಕನ್ನಡ ವೈದ್ಯಕೀಯ ಶಾಸ್ತ್ರ ಸಾಹಿತ್ಯಗಳು ದಿನದಿನಕ್ಕೆ ಸಂಪದ್ಭರಿತವಾಗುತ್ತಿವೆ ಎನ್ನಬಹುದು.

ಗಮನಿಸಬೇಕಾದ ವಿಚಾರವೆಂದರೆ ಇಂದು ವೈದ್ಯಕೀಯ ಶಾಸ್ತ್ರವು ಒಂದಾಗಿ ಉಳಿಯದೆ ಹಲವಾಗಿ ಬೆಳೆದು ಪ್ರಚಲಿತವಾಗಿದೆ. ಅಲೋಪತಿ, ಹೋಮಿಯೊಪತಿ, ಶೂಸ್ಲರನ ಬಯೊಕೆಮಿಸ್ಟ್ರಿ, ಆಯುರ್ವೇದ, ಯುನಾನಿ, ಸಿದ್ಧ ಹೀಗೆ ಸಮಾಜದ ಮಾನ್ಯತೆ ಪಡೆದ ಆರು ಪ್ರಕಾರಗಳು ಬಳಕೆಯಲ್ಲಿವೆ. ಜನಪ್ರಿಯ ವೈದ್ಯಕೀಯ ಸಾಹಿತ್ಯದ ಒಂದು ಸಂಕಿರಣದಲ್ಲಿ ಈ ಎಲ್ಲ ಪ್ರಕಾರ ಪದ್ಧತಿಗಳಿಗೂ ಮಾನ್ಯತೆ ಮತ್ತು ಸ್ಥಾನಗಳು ದೊರೆಯಬೇಕಾದುದು ಅವಶ್ಯಕ ಮತ್ತು ಯೋಗ್ಯ. ಆದರೂ ವ್ಯಾವಹಾರಿಕ ಮತ್ತು ಅನುಕೂಲ ದೃಷ್ಟಿಯಿಂದ ಸಾಧ್ಯ ಆಗಲಾರದು ಎಂಬುದು ಒಪ್ಪತಕ್ಕ ಮಾತು. ಪ್ರಾಯಶಃ ಇಂದು ಇಲ್ಲಿ

ನೆರೆದಿರುವ ನಾವು ಕೇವಲ ಜನಪ್ರಿಯ ವೈದ್ಯಕೀಯ ಸಾಹಿತ್ಯದ ಲಭ್ಯ ಮತ್ತು ವಿಶೇಷ ಪ್ರಚಲಿತ ಇರುವ ಪ್ರಕಾರ ಪದ್ಧತಿಗಳ ಸಮೀಕ್ಷೆ ಮಾತ್ರ ಮಾಡಲಾದೀತೇನೊ. ಯಾಕೆಂದರೆ ವೈದ್ಯಕೀಯ ಸಾಹಿತ್ಯದ ವೈಜ್ಞಾನಿಕ, ತಾಂತ್ರಿಕ, ಪ್ರಾಯೋಗಿಕ ಮತ್ತು ಅನುಭಾವಿಕ ವಿಚಾರಗಳ ವಿವರ ಮತ್ತು ವಿಮರ್ಶೆಗಳು ಸಾರ್ವಜನಿಕರ ತಿಳಿವಳಿಕೆಯ ಮತ್ತು ಗ್ರಹಿಕೆಯ ಮಟ್ಟಕ್ಕೆ ಮೀರಿದವು ಎಂದರೆ ತಪ್ಪಾಗಲಾರದು.

ಭಾಷಣದ ಮಾತುಗಳಲ್ಲಿ ಸಾಹಿತ್ಯ ಎಂಬ ಶಬ್ದದ ವ್ಯಾಖ್ಯೆಯನ್ನು ಮಾಡುವುದು ಕಷ್ಟಸಾಧ್ಯ. ಯಾವ ಸಾಹಿತ್ಯವೇ ಆಗಲಿ ಅದು ಮಾನವೀಯ ಜೀವನದಷ್ಟೇ ವಿಶಾಲವಾದುದು, ಆಳವಾದುದು, ಸಾಹಿತ್ಯದ ಒಂದು ಭಾಗದ ಒಂದು ಪ್ರಕಾರದ ಸಮಿಾಕ್ಷೆಯನ್ನು ಈದಿನ ಮಾಡಲಿದ್ದೇವೆ. ಸಮಿಾಕ್ಷೆಯು ವಿಶಾಲವಾಗಿರದೆ ಸಂಕ್ಷಿಪ್ತವಾಗಿರಬೇಕಾದುದು ಸಮಯಾವಕಾಶಗಳ ದೃಷ್ಟಿಯಿಂದ ಅವಶ್ಯಕವೂ ಹೌದು.

ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯವು ಒಂದು ಹೊಸ ಮಾರ್ಗದ ಆವಿಷ್ಕಾರ. ಮಾನವೀಯ ಭಾವಾನುಭವಗಳನ್ನೂ ಕಲ್ಪನಾವಿಲಾಸಗಳನ್ನೂ ವಿವರಿಸಿ ಬರೆಯುವ ಕಾವ್ಯ, ಕತೆ, ಕಾದಂಬರಿ ಮತ್ತು ಪ್ರಬಂಧಗಳ ಪ್ರಕಾರಗಳಂತಲ್ಲ. ಅದರ ಗುರಿ ಬೇರೆ, ರೀತಿ ಬೇರೆ, ಪರಿಣಾಮ ಬೇರೆ. ಯಾವುದೇ ರೀತಿಯ ಸಾಹಿತ್ಯವಾಗಲೀ, ಅದು ಯಾವುದು, ಹೇಗಿರಬೇಕು ಎಂದು ಖಚಿತವಾಗಿ ನಿಶ್ಚಿತವಾಗಿ ಯಾರೂ ಹೇಳಲಾಗುವುದಿಲ್ಲ. ಸಾಹಿತ್ಯ ಎಂಬ ಶಬ್ದದ ವ್ಯಾಖ್ಯೆಯೇ ಸಂಕೀರ್ಣವಾದುದು. ಅನೇಕ ಬಾರಿ ಅದರ ವ್ಯಾಖ್ಯೆ ಮಾಡಿದವರಿಗೇ ಅದರ ವ್ಯಾಖ್ಯೆ ಸಮಾಧಾನ ತಂದಿರಲಾರದು ! ಸಾಹಿತ್ಯ ಎಂದರೆ "ಚಿರಸ್ಮರಣೀಯ ಶಬ್ದಗಳ ಗುಂಪು" ಎಂದು ಹೇಳಬಹುದು. ಯಾವ ಶಬ್ದಗಳ ಮತ್ತು ವಾಕ್ಯಗಳ ಸಮೂಹವು ಅದನ್ನು ಬರೆದ ಅಥವ ಬಾಯಿಂದ ಹೇಳಿದವರ ಪ್ರಯೋಜನಕ್ಕೆ ಮಾತ್ರವೇ ಅಲ್ಲದೆ–ಸಮಾಜದ ಬಹುಜನರಿಗೆ ಸ್ವಲ್ಪ ಕಾಲವಾದರೂ ಸ್ವಲ್ಪ ಮಟ್ಟಿಗಾದರೂ ಪ್ರಯೋಜನಕಾರಿಯಾಗಿ, ಅವರು ಅದನ್ನು ಮನಸ್ಸಿಟ್ಟು ಶ್ರದ್ಧೆಯಿಂದ ಓದಿ ವಿಚಾರ ಮಾಡಲು, ಚಿಂತಿಸಲು, ಅರ್ಹವೆನಿಸುವುದೋ ಅಂತಹುದನ್ನು ಮಾತ್ರ ಸಾಹಿತ್ಯ ಎನ್ನಬಹುದು. ಜನಪ್ರಿಯ

ವೈದ್ಯಕೀಯ ಸಾಹಿತ್ಯವೂ ಈ ಮಾತಿಗೆ ಹೊರತಾಗಿರಬಾರದು. ಯಾವ ಪ್ರಕಾರದ ಸಾಹಿತ್ಯವೇ ಆಗಲಿ, ಅದು ಮಾನವೀಯ ಜೀವನದ ಉನ್ನತಿ, ವಿಕಾಸ ಮತ್ತು ಸಫಲತೆಗಳಿಗೆ ಸಹಾಯಕ ಆಗದಿದ್ದರೆ ಅದನ್ನು ಹೀನ ಸಾಹಿತ್ಯದ ಸಾಲಿಗೆ ಸೇರಿಸಬಹುದು. ಎಲ್ಲ ಪ್ರಕಾರಗಳ ಸಾಹಿತ್ಯದ ಉದ್ದೇಶವು ಆನಂದ ನೀಡುವುದೊಂದೇ ಅಲ್ಲದೆ "ಜಗದ್ಧಿತಾಯ ಆತ್ಮನೋಮೋಕ್ಷಾಯ" ಎಂಬ ಧ್ಯೇಯವನ್ನು ಒಳಗೊಂಡಿದ್ದರೆ ಒಳಿತು.

ಮಾನವನು ತನ್ನ ಜೀವನವು ಸುಖಮಯವಾಗಲು ಭೌತಿಕ ವಿಷಯಗಳಿಗೋಸ್ಕರ ಹೋರಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅದು ಸಹಜ ಸಂಭವನೀಯ ವಿಚಾರವೇ ಹೀಗೆ ಹೋರಾಡುವಾಗ ಅವನು ಸಮಾನಧ್ಯೇಯ, ಸಮಾನ ಧೋರಣೆಗಳಿರುವವರೊಡನೆ ತನ್ನ ಹೋರಾಟಕ್ಕೆ ನೆರವಾಗುವವರ ಸಂಬಂಧಗಳನ್ನು ಬಳಸಿಕೊಳ್ಳುವುದು ಸಹಜ. ಇದು ಸಮಾಜ ನಿರ್ಮಾಣದ ಒಂದು ರೀತಿ. ಆದುದರಿಂದ ಸಂತೃಪ್ತ ಮತ್ತು ಸುಖೀ ಸಮಾಜದ ನಿರ್ಮಾಣಕ್ಕೆ ಜನಪ್ರಿಯ ವೈದ್ಯಕೀಯ ಸಾಹಿತ್ಯ ಮತ್ತು ಸಾಹಿತಿಗಳೂ ಸಹಾಯಕ ಎಂದರೆ ತಪ್ಪಾಗಲಾರದು.

ಜನಪ್ರಿಯ ವೈದ್ಯಕೀಯ ಸಾಹಿತ್ಯ ಎಂದು ಹೇಳಿದಾಗ ಅದು ಯಾವ ಮತ್ತು ಎಂಥಹ ಜನರಿಗೆ ಎಂಬ ಪ್ರಶ್ನೆ ಏಳುತ್ತದೆ. ಯಾಕೆಂದರೆ, ನಮ್ಮ ನಾಡಿನ ಬಹು ಸಂಖ್ಯಾತರಾದ ಗ್ರಾಮೀಣ ಜನರಲ್ಲಿ ಇನ್ನೂ ಸಂಪೂರ್ಣವಾಗಿ ಅಕ್ಷರಜ್ಞಾನವೂ ಉಂಟಾಗಿಲ್ಲ. ಸರ್ಕಾರದ ಅಕ್ಷರ ತುಂಗಾ ಕಾರ್ಯಕ್ರಮದ ಜಾಹೀರಾತಿನ ಅಬ್ಬರ ಹೆಚ್ಚೇವಿನಹ ಪರಿಣಾಮವು ವೆಚ್ಚಕ್ಕೆ ಸರಿತೂಗುವುದಿಲ್ಲ. ಕಡತಗಳ ಅಂಶ ಅಂಕಿ (ಸ್ಟಾಟಿಸ್ಟಿಕ್) ಹೆಚ್ಚುತ್ತದೆ ಮಾತ್ರ. ವಾಸ್ತವವಾಗಿ ದೇಹ ವಿಜ್ಞಾನ ಆರೋಗ್ಯ ವಿಜ್ಞಾನಗಳ ಜ್ಞಾನಪ್ರಸಾರ ಗ್ರಾಮೀಣ ಜನರಲ್ಲಿಯೇ ಹೆಚ್ಚಾಗಬೇಕು.

ವೈದ್ಯಕೀಯ ಸಾಹಿತ್ಯವನ್ನು ನಿರ್ಮಿಸಲು ಪ್ರಯತ್ನಿಸುವ ಲೇಖಕರು ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರುವುದು ಅವಶ್ಯಕ ವೈದ್ಯಕೀಯ ಸಾಹಿತ್ಯದ ಯಾವುದೇ ಭಾಗವನ್ನು ಆರಿಸಿಕೊಂಡು ಬರೆಯುವುದಾದರೂ

ಮೊದಲು ಶಬ್ದ ಪ್ರಯೋಗ ಮತ್ತು ಶೈಲಿಯ ಕಡೆ ಹೆಚ್ಚು ಗಮನ ಕೊಡಬೇಕಾಗುವುದು. ಓದುವವರಿಗೆ ಹೆಚ್ಚು ಶ್ರಮವಿಲ್ಲದೆ ಅರ್ಥ ಆಗುವಂತಿರಬೇಕು. ಅದಷ್ಟು ಸರಳವಾದ ಶಬ್ದ ಪ್ರಯೋಗವಾಗಿರಬೇಕು. ಈ ಮಾತನ್ನು ಹೇಳುವಾಗ ನನಗೆ ಅವರ ಕಷ್ಟ ತಿಳಿದಿದೆ. ಇಂಗ್ಲಿಷ್ ಮತ್ತು ಸಂಸ್ಕೃತ ಪದಗಳಿಗೆ ಸಮಾನಾಂತರ ಅರ್ಥಕೊಡುವ ಕನ್ನಡ ಶಬ್ದದ ಆಯ್ಕೆ ಸುಲಭವಲ್ಲ. ಶಬ್ದಜ್ಞಾನ, ವಿಚಾರಜ್ಞಾನ ಹೆಚ್ಚಾಗಿಲ್ಲದ ಜನ ಸಾಮಾನ್ಯರಿಗೆ ಅರ್ಥ ಆಗುವಂತೆ ರುಚಿಸುವಂತೆ ವಿಚಾರ ಸಾಹಿತ್ಯ ನಿರ್ಮಿಸುವುದು ತುಂಬಾ ಕಷ್ಟ. ಆದರೂ ನಮ್ಮ ವೈದ್ಯಸಾಹಿತಿಗಳು ತಮ್ಮ ತಾಳ್ಮೆ ಮತ್ತು ವಿಚಾರ ಶಕ್ತಿಯನ್ನು ವಿನಿಯೋಗಿಸಿ ವೈದ್ಯಕೀಯ ಸಾಹಿತ್ಯವು ಜನಪ್ರಿಯ ಆಗುವಂತೆ ಶ್ರಮಿಸಬೇಕಾಗುವುದು ಅತ್ಯಗತ್ಯ.

ವೈದ್ಯಕೀಯ ಸಾಹಿತ್ಯ ನಿರ್ಮಾಣ ಕಾರ್ಯದಲ್ಲಿ ಕೆಲವು ಬಾರಿ ಲೇಖಕರು ತೀವ್ರವಾದ ವಿರೋಧವನ್ನು ಎದುರಿಸಬೇಕಾದ ಸಂದರ್ಭಗಳು ಒದಗುತ್ತದೆ. ಅದರಲ್ಲಿ ಸಾಮಾಜಿಕ ದೃಷ್ಟಿಯಿಂದ ಮುಖ್ಯವಾದುದು ಎರಡಕ್ಷರದ ಒಂದು ಪದ "ನೀತಿ" ನಮ್ಮಲ್ಲಿ ಕೆಲವರು ವೈದ್ಯಕೀಯ ಸಾಹಿತ್ಯದ–ಅದರಲ್ಲಿಯೂ ಲೈಂಗಿಕಪರ ಸಾಹಿತ್ಯಕ್ಕೆ ನೀತಿಯನ್ನು ಬೆರೆಸಲು ಪ್ರಯತ್ನಿಸುತ್ತಾರೆ. ಕಾಮ ಮತ್ತು ಲೈಂಗಿಕ ಜೀವನಕ್ಕೆ ಸಂಬಂಧಿಸಿದ ಸಾಹಿತ್ಯ ಅನೀತಿ ಮಯವಾಗಿರುತ್ತದೆ ಎಂಬ ಒಂದು ಅಭಿಪ್ರಾಯವನ್ನು ತುಲನೆ ಮಾಡಿ ನೋಡುವಾಗ ಅಮೆರಿಕದ ಒಬ್ಬ ಖ್ಯಾತ ವಿಮರ್ಶಕ ಜಿ. ಇ. ಸ್ಪಿಂಗಾರ್ನ್ ಹೇಳಿದ ಮಾತು ನನಗೆ ನೆನಪಾಗುತ್ತದೆ.

"ಈ ಸಾಹಿತ್ಯ ಭಾಗ ಅಥವ ಕಲೆಯು ನೀತಿಮಯವಾಗಿದೆ ಅಥವ ಅನೀತಿ ಮಯವಾಗಿದೆ ಎನ್ನುವುದು ಈಕ್ವಿಲೇಟರಲ್ ತ್ರಿಕೋಣ ನೀತಿಮಯವಾಗಿದೆ, ಐಸಾಸಿಲೆಸ್ ತ್ರಿಕೋಣ ಅನೀತಿಮಯವಾಗಿದೆ ಎಂದು ಹೇಳಿದಂತಾಗುವುದು."

"ಒಂದು ವಸ್ತು ಮತ್ತು ವಿಷಯಕ್ಕೆ ಅನುಗುಣ ಆಗದ ಮಾನದಂಡದಿಂದ ಅಳೆಯುವುದು ಅವಿವೇಕ. ಎಂಜನೀರ್ ಕಟ್ಟಡ ಸೇತುವೆಯನ್ನಾಗಲೀ, ವಿಜ್ಞಾನಿಗಳ ಸಂಶೋಧನೆಗಳನ್ನಾಗಲೀ ನಾವು ಪರೀಕ್ಷಿಸುವಾಗ ಅವರ ನೀತಿಯನ್ನು ಕುರಿತು ನಾವು ವಿಚಾರ ಮಾಡುವುದಿಲ್ಲ. ಅದಕ್ಕೆ ಪ್ರತಿಷೇದವಾಗಿ ಸತ್ಯಶೋಧನಾ ಕಾರ್ಯದಲ್ಲಿ ನೀತಿಯನ್ನು ನಿರ್ಲಕ್ಷಿಸುವುದು ವಿಜ್ಞಾನಿಯ ನೈತಿಕಧರ್ಮ ಎಂದು

ಹೇಳುತ್ತೇವೆ. ಅವರನ್ನು ವೈಯುಕ್ತಿಕವಾಗಿ ಬೇರ್ಪಡಿಸಿ ನೈತಿಕ ಮಾನದಂಡ ದಿಂದ ಅಳೆಯಬಹುದು. ಆದರೆ ಅವರ ವೈಜ್ಞಾನಿಕ ನಿರ್ಣಯಗಳನ್ನು ವಿಜ್ಞಾನದ ಮಾನ ದಂಡದಿಂದಲೇ ಅಳೆಯಬೇಕಾಗುವುದು........

ಕಾಮ ಮತ್ತು ಲೈಂಗಿಕ ಸಾಹಿತ್ಯ ಎಂಬ ಪದಗಳು ವೈದ್ಯಪ್ರಪಂಚಕ್ಕೆ ಸೇರಿದ್ದು. ಆದರೆ ಅವು ಅಶ್ಲೀಲ ಮತ್ತು ಅನೈತಿಕ ಎಂಬ ಪದಗಳು ನೀತಿ ಶಾಸ್ತ್ರಕ್ಕೆ ಸಂಬಂಧಿಸಿದುದು. ಒಂದು ಶಾಸ್ತ್ರದ ಪಾರಿಭಾಷಿಕ ಶಬ್ಧಗಳನ್ನು ಇನ್ನೊಂದು ಶಾಸ್ತ್ರದ ವಿಚಾರದಲ್ಲಿ ಬಳಸಿದರೆ ಅನರ್ಥವಾಗುವುದು."

ಕನ್ನಡ ಸಾಹಿತ್ಯದಲ್ಲಿರುವ ಲೈಂಗಿಕ ವಿಜ್ಞಾನ ಮತ್ತು ದಾಂಪತ್ಯ ವಿಜ್ಞಾನ ಗಳ ವಿಷಯಗಳನ್ನು ಕುರಿತ ಸಯುಕ್ತಿಕ ಜ್ಞಾನ ಸಂಪತ್ತೂ ಮನೋವಿಕಾಸವೂ ನಮ್ಮಲ್ಲಿ ಪುಷ್ಟವಾಗಿ ಬೆಳೆದು ಬಂದಿಲ್ಲ ಎನ್ನಬಹುದು. ಕಾಮವಿಜ್ಞಾನವನ್ನು ಕುರಿತು ಶತಮಾನಗಳ ಹಿಂದೆ ಹಳೆಗನ್ನಡ ಮತ್ತು ನಡುಗನ್ನಡ ಕಾಲದಲ್ಲಿ ಕನ್ನಡ ಕವಿಗಳು ಶೃಂಗಾರಭಾವ ಸೂಚಕವಾಗಿ ತಮ್ಮ ಕಾವ್ಯಗಳಲ್ಲಿ ಅಷ್ಟಿಷ್ಟು ಲೇಖಿಸಿ ದ್ದಾರೆ. ಬಹುಶಃ ವಾತ್ಸಾಯನನ ಕಾಮ ಸೂತ್ರವು ಈ ವಿಚಾರದಲ್ಲಿ ಮೊದಲ ಗ್ರಂಥವಿರಬೇಕು. ಶೃಂಗಾರಭಾವದ ವರ್ಣನೆಗಳಿಗೂ ವೈಜ್ಞಾನಿಕವಾಗಿ ವಸ್ತು ನಿಷ್ಠವಾಗಿ ಬರೆದ ಗ್ರಂಥಗಳಿಗೂ ಸಹಜವಾಗಿಯೇ ಬಹಳ ವ್ಯತ್ಯಾಸಗಳಿವೆ. ಇಂದು ಸುಗಮ ಮತ್ತು ಸುಖಜೀವನಕ್ಕೆ ಆಹಾರ ನಿದ್ರಾದಿ ಸೌಕರ್ಯ ಒಂದೇ ಅಲ್ಲದೆ ಸಂತೃಪ್ತ ಕಾಮಜೀವನವೂ ಅವಶ್ಯಕ ಎಂಬುದು ನಿಸ್ಸಂದೇಹ. ಈ ದೃಷ್ಟಿಯಿಂದ ಯೋಚಿಸಿದಾಗ ಕಾಮವಿಜ್ಞಾನ, ದಾಂಪತ್ಯ ವಿಜ್ಞಾನಗಳನ್ನು ಕುರಿತ ಸಾಹಿತ್ಯಗಳನ್ನು ಅಧ್ಯಯನ ಮಾಡಿ ಸುಯೋಗ್ಯ ತಿಳಿವಳಿಕೆಯನ್ನು ಪಡೆಯಬೇಕಾದುದು ತೀರ ಅವಶ್ಯಕ. ಹಾಗೆ ಓದಿ ತಿಳಿಯ ಬಯಸುವವರಿಗೆ ಯೋಗ್ಯಪುಸ್ತಕಗಳು ಕನ್ನಡ ಸಾಹಿತ್ಯದಲ್ಲಿ ಕಡಿಮೆ ಎನ್ನಬಹುದು. ಪರಿಣಾಮ ವಾಗಿ ಲೈಂಗಿಕ ಮತ್ತು ದಾಂಪತ್ಯ ವಿಜ್ಞಾನದ ತಿಳಿವಳಿಕೆಯು ನಮ್ಮ ಜನತೆಯಲ್ಲಿ ಅರ್ಧಮರ್ಧ ಆಗಿವೆ. ಅಜ್ಞಾನದ ಪರಿಣಾಮವಾಗಿ ಅವಿವೇಕವೂ, ಅವಿವೇಕ ಕೃತಿಗಳ ಫಲವಾಗಿ ಅನಾಹುತಗಳೂ ಸಹಜವಾಗಿ ಸಂಭವಿಸುವವು.

ಮಾನವೀಯ ಜೀವನದಲ್ಲಿ ಕಲೆ ಮತ್ತು ಸಾಹಿತ್ಯಗಳ ವಿವಿದೋದ್ಧೇಶ

ಗಳಲ್ಲಿ ಕಾಮಪ್ರಚೋದನೆಯೂ ಒಂದು ಎಂದು ಕಾಮವಿಜ್ಞಾನಿಗಳ ಅಭಿಪ್ರಾಯ. ವಾತ್ಸಾಯನನಿಂದ ಪ್ರಾರಂಭಿಸಿ ಆಧುನಿಕ ಪಾಶ್ಚಾತ್ಯ ಲೈಂಗಿಕ ಶಿಕ್ಷಣವೇತ್ತರರವರೆಗೆ ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ನೂರಾರು ವಿದ್ವಾಂಸರೂ ವೈದ್ಯರೂ ತಮ್ಮ ತಮ್ಮ ಜ್ಞಾನಾನುಭವಗಳ ತಳಹದಿಯ ಮೇಲೆ ಕಾಮ ಮತ್ತು ಲೈಂಗಿಕ ವಿಚಾರವಾದ ಸಾಹಿತ್ಯಗಳನ್ನು ಸೃಷ್ಟಿಸಿದ್ದಾರೆ. ಅವು ಗಳಲ್ಲಿ ಕೆಲವು ವಿಮರ್ಶಾತ್ಮಕ ಮತ್ತು ವಿಶ್ಲೇಷಣಾತ್ಮಕ ಕೃತಿಗಳಾಗಿವೆ. ಮತ್ತೆ ಕೆಲವು ವಿವರಣಾತ್ಮಕ, ಬೋಧನಾತ್ಮಕ ಕೃತಿಗಳಾಗಿವೆ. ಈ ಸಂದರ್ಭ ಮತ್ತು ವಿಚಾರಗಳಲ್ಲಿ ಕೆಲವು ವೈದ್ಯವಿಜ್ಞಾನಿಗಳೂ ಕಲಾವಿದರೂ ವಿಕೃತ ಕಾಮವನ್ನೂ ಸಹ (ಸೆಕ್ಸುಯಲ್ ಪರ್ವರ್ಷನ್ಸ್) ಒಂದು ಗಣನೀಯ ವಿಚಾರ ಎಂದು ಪರಿಗಣಿಸಿ ವಿಚಾರಾತ್ಮಕ ಮತ್ತು ವಿವರಣಾತ್ಮಕ ಗ್ರಂಥಗಳನ್ನು ಬರೆದಿದ್ದಾರೆ. ಸಂತೃಪ್ತ ಕಾಮಜೀವನವು ಮಾನವನ ಎಲ್ಲಾ ಮಾನಸಿಕ, ದೈಹಿಕ ನಡವಳಿಕೆ ಗಳಿಗೂ ಕಡಿವಾಣದಂತಿದೆ ಎಂದು ಪಾಶ್ಚಾತ್ಯ ಮನೋವಿಜ್ಞಾನಿಯೊಬ್ಬರ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು.)

ಶೀಲಾಶ್ಲೀಲಗಳಿಗೆ ಇರುವ ಅಂತರದ ಮಧ್ಯದ ಗೆರೆಯು ತೀರ ನವುರಾದು ದೆಂಬುದು ನಮ್ಮ ಗಮನದಲ್ಲಿರಬೇಕು. ಸಹಜ ಕಾಮ–ಅಥವಾ ಅಸಹಜ ಕಾಮ ಯಾವುದಾದರೂ ಆಗಲಿ, ಅದರ ನಿರೂಪಣೆಗಳು ಬರವಣಿಗೆಯಲ್ಲಿರಲೀ ಅಥವಾ ಚಿತ್ರರೂಪದಲ್ಲಿರಲೀ, ಅವು ಕೀಳುಭಾವನೆಗಳನ್ನು ಪ್ರಚೋದಿಸಿ ಕಾಮೋದ್ದೀಪನ ಗೊಳಿಸುವಂತಿರಬಾರದು. ವೈದ್ಯರು ರೋಗಿಗಳ ರೋಗದ ಲಕ್ಷಣ, ರೀತಿ, ವಿಸ್ತಾರಗಳನ್ನು ನಿರ್ವಿಕಾರ ಭಾವದಿಂದ ವಿವರಿಸುವ ರೀತಿಯಲ್ಲಿ ಲೈಂಗಿಕ, ಕಾಮ ಮತ್ತು ದಾಂಪತ್ಯ ವಿಜ್ಞಾನ ಸಾಹಿತ್ಯಗಳ ಕುರಿತು ಬರವಣಿಗೆಗಳೂ ಇರಬೇಕಾ ದುದು ಅತ್ಯಗತ್ಯ. ನಿರ್ಮಲ ಮತ್ತು ನಿಷ್ಕಳಂಕ ಮನಃಪ್ರವೃತ್ತಿಗೆ ಅದು ಅತ್ಯಾವಶ್ಯಕ.

ಪ್ರತಿಯೊಬ್ಬ ಮಾನವನ ಬಾಳಿನಲ್ಲಿ ಎರಡು ಮುಖಗಳಿರುತ್ತವೆ. ಒಂದು ಒಳಬಾಳು, ಮತ್ತೊಂದು ಹೊರಬಾಳು. ತಾನೇ ತನ್ನೊಡನಾಡುವಾಗ ಒಳ ಬಾಳಿನ ಮನೋಮಂದಿರದ ಬಾಗಿಲ ತೆರೆ ಸರಿದು ಸ್ವಚ್ಛಂದವಾಗಿ ವಿಹರಿಸುವನು. ಹೊರಬಾಳಿಗೊಂದು ಸಾಮಾಜಿಕ ಬಂಧನವಿದೆ. ಅದರ ಲಕ್ಷ್ಮಣ ರೇಖೆಯನ್ನು

ದಾಟುವಂತಿಲ್ಲ. ಮಾನವನ ಈ ದ್ವಿಮುಖ ಬಾಳಿನೊಡನೆ ಬೆರೆತು ಅವನ ಸುಖ ದುಃಖಗಳೊಡನೆ ಸುಖ–ಸಂತೋಷಗಳೊಡನೆ ಮಿಳಿತವಾಗಿ ಒಡನಾಡುವ ಸಂದರ್ಭಾವಕಾಶಗಳು ಕೇವಲ ವೈದ್ಯರಿಗೆ ಮಾತ್ರ ಇವೆ. ಹೇಗೆ ಸಮಾಜದ ಅಂತರಂಗದ ನಾಡಿ ಹಿಡಿದು ನೋಡುವ, ನೋಡಿ ಅವರ ಅಂತರಂಗದ ಅಳಲಿ ನೊಡನೆ ತೊಡಗಿಸಿಕೊಂಡು ಅರ್ಥ ಮಾಡಿಕೊಳ್ಳುವ ತಾಳ್ಮೆ ಮತ್ತು ಅರ್ಹತೆ ಗಳು ಕೇವಲ ಕೆಲವೇ ವೈದ್ಯರಿಗಿವೆ. ಅಂಥವರು ಮಾತ್ರ ಲೈಂಗಿಕ, ಕಾಮ ಮತ್ತು ದಾಂಪತ್ಯ ಜೀವನದಲ್ಲಿ ಅಜ್ಞಾನದಿಂದ ಎಷ್ಟು, ಎಂತಹ ಅನಾಹುತಗಳು ಆಗುತ್ತಿವೆ ಎಂಬುದನ್ನು ಕಾಣಬಲ್ಲರು.

ಮಿತಿಮೀರಿದ ಸಾಮಾಜಿಕ ಸ್ಥಾನ, ಮಾನ, ಭೋಗಲಾಲಸೆಗಳಿಂದ ದೂರ ವಾಗಿ ಜನಸಾಮಾನ್ಯರ ಜೀವನದೊಂದಿಗೆ ಮಿಳಿತರಾಗಿ ಅವರ ಮಾನವೀಯ ದೌರ್ಬಲ್ಯಗಳನ್ನೂ, ಅಜ್ಞಾನದ ಮಟ್ಟ ಆಳಗಳನ್ನೂ, ಅವುಗಳ ಪರಿಣಾಮವಾಗಿ ಬೆಳೆದು ಬಂದ ದೈಹಿಕ ಹಾಗೂ ಮಾನಸಿಕ ರೋಗರುಜಿನಗಳನ್ನೂ ಅನುಕಂಪ, ಕನಿಕರಗಳಿಂದ ಕಂಡು, ಮರುಗಿ, ಮನಮುಟ್ಟಿ ಔಷಧೋಪಚಾರಗಳ ಸಲಹೆ ಹೇಳುವ ವೈದ್ಯರುಗಳ ಸಂಖ್ಯೆಯೂ ಕಡಿಮೆಯೇ. ರಾಷ್ಟ್ರದ ದೌರ್ಭಾಗ್ಯ ಗಳಲ್ಲಿ ಒಂದೋ ಎಂಬಂತೆ ಇಂದು ಪವಿತ್ರವಾದ ವೈದ್ಯಕೀಯ ವೃತ್ತಿಯೂ ಗಣನೀಯವಾಗುವಷ್ಟು ಸಂದರ್ಭಗಳಲ್ಲಿ ವ್ಯಾಪಾರೀ ಉದ್ಯಮವಾಗಿದೆ. ಜನತೆಯಲ್ಲಿ ಕಂಡುಬರಬಹುದಾದ ಕಾಮಜೀವನ ಮತ್ತು ಲೈಂಗಿಕ ಜೀವನಗಳ ಸಿಕ್ಕು, ತೊಂದರೆ, ಕಷ್ಟಗಳ ನಿವಾರಣೆ ಆಗುತ್ತಿಲ್ಲ. ಅವರ ತಿಳಿವಳಿಕೆಯ ಮಟ್ಟ ಹೆಚ್ಚುತ್ತಿಲ್ಲ. ಇಂದೂ ಸಹ ಗ್ರಾಮೀಣ ಪ್ರದೇಶಗಳಲ್ಲಿ ಲೈಂಗಿಕ ಕಾಮ ವಿಚಾರ ಪರ ತಿಳಿವಳಿಕೆಗಳೂ ಇಲ್ಲದೆ ಮೌಢ್ಯ ಮತ್ತು ಮೂಢನಂಬಿಕೆಗಳಿಂದಾಗುವ ಅನಾಹುತಗಳು ಅನಂತ, ಅನಿವಾರ್ಯ ಆಗಿವೆ. ಲೈಂಗಿಕ ವಿಚಾರವಾದ ಮಾತು, ಚರ್ಚೆಗಳು ಅಶ್ಲೀಲವೆಂಬ ದೃಢ ನಂಬಿಕೆಯೊಂದು ಜ್ಞಾನ ಪ್ರಸಾರದ ದೃಷ್ಟಿ ಯಿಂದ ದೊಡ್ಡ ಅಡ್ಡಿಯಾಗಿದೆ, ಆತಂಕವಾಗಿದೆ.

ಈಗಿನ ಅಶ್ಲೀಲ ಎಂಬುದೂ, ಲೈಂಗಿಕ ವಿಷಯವಾಗಿ ಬೇಕು, ಬೇಡ ಎಂಬ ಭಾವನೆಗಳೂ ಹಿಂದಿನ ಧಾರ್ಮಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಂದ

ಬೆಳೆದು ಬಂದಿವೆ. ಮಾನವನ ಲೈಂಗಿಕ ಜೀವನದ ನೀತಿ ನಿಯಮಗಳು ಹಿಂದೂ, ಮುಂದೂ, ಇಂದೂ ಸಹ ಸದಾ ಒಂದೇ ಮಟ್ಟ ಮತ್ತು ಕಟ್ಟಳೆಗೆ ಒಳಪಟ್ಟು ಇರಬೇಕು ಎಂಬ ವಾದ ಒಂದು ಕಡೆ, ಪ್ರಾಚೀನ ಕಾಲದ ಧರ್ಮ ಮತ್ತು ಸಮಾಜದ ದೃಷ್ಟಿಯಿಂದ ಈ ಶ್ಲೀಲಾಶ್ಲೀಲಗಳೂ ಬೇಕು, ಬೇಡಗಳೂ ಸಹಜ ಇದ್ದಿರಬಹುದು, ಹಿತಕರವೂ ಆಗಿದ್ದಿರಬಹುದು. ಆದರೆ ಇಂದು ಮಾನವನ ವೈಯಕ್ತಿಕ ಮತ್ತು ಸಾಂಘಿಕ ಜೀವನವು ಹಿಂದಿನಂತೆ ಇಲ್ಲ, ಹಾಗೆ ಇರಲು ಸಾಧ್ಯವೂ ಇಲ್ಲ, ಜೀವನದ ರೀತಿ, ನೀತಿ, ನಿಯಮ, ಮನೋಭಾವಗಳಲ್ಲಿ ಬದಲಾವಣೆಗಳೂ ಯುಗಧರ್ಮದ ಒಂದು ಅಂಶ. ಯುಗಧರ್ಮದ ಕಾಲ ಗತಿಯು ಬದಲಾವಣೆಗಳು ದೇಶದಿಂದ ದೇಶಕ್ಕೆ ವ್ಯತ್ಯಾಸವೂ ಆಗುವುದು. ಆದರೆ ನಿಸರ್ಗಬೋಧ (ನ್ಯಾಚುರಲ್ ಇನ್‌ಸ್ಟಿಂಕ್ಟ್) ವಾದ ಕಾಮವೂ ಅದರ ವ್ಯಾಪಕತ್ವವೂ ಪ್ರಪಂಚದ ಎಲ್ಲ ಭಾಗಗಳಲ್ಲೂ ಒಂದೇ.

ಲೈಂಗಿಕ ಜೀವನದ ಶೀಲಾಶ್ಲೀಲಗಳ ಬೇಕು, ಬೇಡಗಳ ಹಿಂದೆ ಒಂದು ನೀತಿ ನಿಯಮಗಳ ಸೂತ್ರ ಇದೆ, ಇರಬೇಕು ಎಂಬ ಮಾತು ನಿಜ. ಆದರೆ ಜೀವನವೇ ಬದಲಾಯಿಸುವಾಗ ಆದರೊಡನೆ ರೂಢಿಮೂಲದ ನೀತಿನಿಯಮ ಗಳೂ ಬದಲಾಯಿಸಬೇಕಾದುದು ಅವಶ್ಯಕ ಮತ್ತು ಸಹಜ ಎಂಬುದು ಯೋಚಿಸಬೇಕಾದ, ವಿವೇಚಿಸಬೇಕಾದ 'ವಾದ' ; ನೀತಿ ನಿಯಮಗಳ ಮೌಲ್ಯ ಗಳು ಸಮಾಜದಿಂದ ಸಮಾಜಕ್ಕೆ ವ್ಯತ್ಯಸ್ಥವಾಗಿರುತ್ತವೆ. ಒಂದು ಸಮಾಜ ಒಪ್ಪಿದುದನ್ನು ಇನ್ನೊಂದು ಸಮಾಜ ಒಪ್ಪಿದರೆ ತಪ್ಪೇನು, ಅಹಿತ ವೇನು ಎಂದು ತರ್ಕಿಸುವ ವಾದವನ್ನೂ ಗಣಿಸಬೇಕು. (ಹಿಂದೆ ಒಂದು ಕಾಲ ದಲ್ಲಿ ಜ್ಯೂ ಜನಾಂಗದಲ್ಲಿ ಮತ್ತು ಭಾರತೀಯರಲ್ಲಿ ಲೈಂಗಿಕ ಜೀವನದ ನೀತಿ ಬರೀ ಪ್ರಜೋತ್ಪಾದನೆ ಮಾತ್ರ ಎಂದಿತ್ತು. ಕಾಮ ತೃಪ್ತಿಯ ಬೇರೆ ಆಚಾರ ಮಾರ್ಗಗಳು 'ಅನೀತಿ' ಎಂದು ಪರಿಗಣಿಸಲಾಗಿತ್ತು. ಆದರೆ ಅದೇ ಕಾಲದ ಗ್ರೀಕ್ ಜನಾಂಗದಲ್ಲಿ ಪ್ರಜೋತ್ಪಾದನೆಯು ಅವರಿರುವ ದೇಶ, ಸ್ಥಿತಿಗಳಿಗನು ಗುಣವಾಗಿ ಕಡಿಮೆಯಾಗಿರಬೇಕೆಂಬ ತೀರ್ಮಾನದಿಂದ ಸಾಮಾಜಿಕವಾಗಿ ಸಲಿಂಗ ರತಿ ಮತ್ತು ವ್ಯಭಿಚಾರಗಳನ್ನು 'ಅನೀತಿ' ಎಂದು ಗಣಿಸುತ್ತಿರಲಿಲ್ಲವೆಂದು ಉಲ್ಲೇಖವಿದೆ.)

ಒಂದು ಸಮಾಜದ, ವ್ಯಕ್ತಿಯ ಲೈಂಗಿಕ ಜೀವನದ ಸಮಸ್ಯೆ ಮತ್ತು ತೊಡಕುಗಳನ್ನು ಅವರಿರುವ ಕಾಲ, ದೇಶ, ಪರಿಸ್ಥಿತಿಗಳಿಗೆ ಹೊಂದಿಸಿಕೊಂಡು ವಿಚಾರಿಸಬೇಕಾದುದು ಅಗತ್ಯ. ರೂಢಿಮೂಲದ ಬೇಕು, ಬೇಡಗಳ, ನೀತಿ ನಿಯಮಗಳ ಹಿನ್ನೆಲೆ, ಆಧಾರಗಳಿಂದ ಲೈಂಗಿಕ ಜೀವನದ ತೊಡಕು, ಸಮಸ್ಯೆ, ಸಿಕ್ಕುಗಳನ್ನು ಪರಿಹರಿಸಲಾಗುವುದಿಲ್ಲ. ಕಾಮ ಮತ್ತು ಲೈಂಗಿಕ ವಿಜ್ಞಾನದ ಬಗ್ಗೆ ಸರಿಯಾದ, ಯೋಗ್ಯವಾದ ತಿಳಿವಳಿಕೆ ಇಲ್ಲದೆ ಅದರಿಂದ ಪ್ರತ್ಯಕ್ಷ ಆಗಿಯೋ ಪರೋಕ್ಷ ಆಗಿಯೋ ಕಷ್ಟಕ್ಕೆ ಸಿಕ್ಕಿ ಬಳಲುವವರನ್ನು ನೀತಿಗೇಡಿ ಎಂದು ಹಳಿದು ದೂರದೆ–ರೋಗಿಯನ್ನು ತಕ್ಕ ಚಿಕಿತ್ಸೆಯಿಂದ ಗುಣ ಮಾಡುವಂತೆ–ಅವರ ಮಾನಸಿಕ ಸಿಕ್ಕುಗಳನ್ನು ಬಿಡಿಸಿ ತಿಳಿವಳಿಕೆ ಹೇಳಿ ಅವಶ್ಯಕವಾದರೆ ಔಷಧೋಪಚಾರಗಳಿಂದ ಉಪಚರಿಸಿ ಸ್ವಸ್ಥರನ್ನಾಗಿ ಮಾಡುವುದು ಯೋಗ್ಯ ಮಾರ್ಗ, ಲೈಂಗಿಕ ಜೀವನದ ಸ್ವಚ್ಛ ಸಯುಕ್ತಿಕ ವೈಜ್ಞಾನಿಕ ಜ್ಞಾನ ಪ್ರಸಾರದಿಂದ ಈ ಕಾರ್ಯದಲ್ಲಿ ಯಶಸ್ಸು ದೊರೆಯುತ್ತದೆ ಎಂಬುದು ನಿರ್ವಿವಾದ.

ಸಮಾಜದ ಸುಖ ಜೀವನಕ್ಕೆ ಅವಶ್ಯಕವಾದ ಪ್ರಾಗತಿಕ ವಿಚಾರಗಳನ್ನು ಸ್ವಾಗತಿಸುವ ಸತ್ಯಪ್ರಿಯತೆ ಮತ್ತು ಔದಾರ್ಯ ಮನೋಭಾವಗಳೂ ನಮ್ಮಲ್ಲಿ ಬೆಳೆಯಬೇಕಾದುದು ಅಗತ್ಯ. ಒಂದೇ ಅಲ್ಲ, ಅವಶ್ಯಕವೂ ಹೌದು. ಹಾಗೆಯೇ ಪ್ರಾಗತಿಕ ವಿಚಾರಗಳ ಯೋಗ್ಯಾಯೋಗ್ಯ, ಅವಶ್ಯಾನವಶ್ಯಕತೆಗಳನ್ನೂ, ವಿಚಾರಿಸಿ, ವಿಮರ್ಶಿಸಿ ಒಪ್ಪಿಕೊಳ್ಳಬೇಕಾದ ಸಂದರ್ಭಗಳಲ್ಲಿ ನಿಸ್ಸಂಕೋಚದಿಂದ ಒಪ್ಪಿಕೊಳ್ಳುವ ಮನೋಭಾವವೂ ಬೆಳೆದು ಬರಬೇಕು. ಅರ್ಥವಿಹೀನವಾದ ಮತ್ತು ಅನರ್ಥಕಾರಕವಾದ ಅನೇಕ ನಂಬಿಕೆಗಳೂ ಧ್ಯೇಯ ಧೋರಣೆಗಳೂ ಪ್ರಪಂಚದ ಎಲ್ಲಾ ಸಮಾಜಗಳಲ್ಲೂ ಇವೆ. ಆದರೆ ಸಾಮಾಜಿಕ ಸುಖಜೀವನಕ್ಕೆ ಯಾವ ವಿಚಾರಗಳು ಅವಶ್ಯಕವೊ ಅವುಗಳನ್ನು ತಿಳಿದುಕೊಳ್ಳುವುದಕ್ಕೂ, ಇತರರಿಗೆ ತಿಳಿಯಹೇಳುವುದಕ್ಕೂ ಹಿಂಜರಿಯಬಾರದು. ವೈವಾಹಿಕ ಜೀವನಕ್ಕೆ ಪ್ರವೇಶಿಸುವುದಕ್ಕೆ ಮೊದಲು ದಾಂಪತ್ಯ ಜೀವನಕ್ಕೆ ಸಂಬಂಧಿಸಿದ ಅವಶ್ಯಕವಾದ, ಯೋಗ್ಯವಾದ ತಿಳಿವಳಿಕೆಯನ್ನು ಪಡೆಯಲು ವಿವಾಹೇಚ್ಛುಗಳು ಹಿಂಜರಿಯಬಾರದು. ನಾವು ಮೊದಲು ಮಾನವ ಜನಾಂಗಗಳಿಗೆ ಕಾಮವಿಜ್ಞಾನ,

ದಾಂಪತ್ಯವಿಜ್ಞಾನ ಮತ್ತು ಸಂತಾನ ವಿಜ್ಞಾನ ಪರಿಚಯ ಮಾಡಿಕೊಟ್ಟರೆ ಆಗ ಈ ಜಗತ್ತನ್ನು ಸುಪುಷ್ಟವನ್ನಾಗಿ ಮಾಡಿದಂತಾಗುವುದು.

ಇಂತಹ ಅವಶ್ಯಕ ಮತ್ತು ಯೋಗ್ಯ ಕಾರ್ಯದಲ್ಲಿ ಬರಹಗಾರರ, ಸಾಹಿತಿಗಳ, ಕಲಾವಿದರ ವ್ಯಕ್ತ್ಯೋದ್ದೇಶಗಳಷ್ಟೇ ಅವ್ಯಕ್ತ್ಯೋದ್ದೇಶಗಳೂ ಸೌಶೀಲ್ಯದಿಂದ ಕೂಡಿರಬೇಕಾದುದು ಅವಶ್ಯಕ. ಕಾಮಶಿಕ್ಷಣವನ್ನು ನೀಡುತ್ತಿದ್ದೇವೆಂಬ ನೆಪದಲ್ಲಿ ಕೀಳು ಅಭಿರುಚಿ, ಅಭಿಲಾಷೆಗಳನ್ನು ಕೆರಳಿಸಿ, ಚುರುಕುಗೊಳಿಸಿ ಕಾಮೋದ್ದೀಪನ ಉಂಟುಮಾಡುವ ಲೇಖನ, ಪುಸ್ತಕಾದಿಗಳು ಸಮಾಜ ಘಾತುಕವಾದವುಗಳು. ಅಂತಹ ಕೃತಿಗಳನ್ನು ಖಂಡಿತ ನಿಷೇಧಿಸಬೇಕು. ಸತ್ಯವನ್ನು ಹೇಳುವುದಾದರೂ ಅದು ಅಪ್ರಿಯವಾಗದಂತೆ ಹೇಳಬೇಕು ಎಂಬ ನಾಣ್ಣುಡಿಯು ಒಂದು ನಿಕಷದಂತೆ. ಅದು ನೆನಪಿನಲ್ಲಿರಬೇಕು.

ಲೈಂಗಿಕ ಮತ್ತು ವೈದ್ಯ ವಿಜ್ಞಾನಗಳನ್ನು ಕುರಿತ ಉತ್ತಮ ಗ್ರಂಥಗಳು, ಗ್ರಂಥಕರ್ತರೂ ಪಾಶ್ಚಾತ್ಯ ಭಾಷೆಗಳಲ್ಲಿ ವಿಪುಲ. ಜನಸಾಮಾನ್ಯರಿಗೆ ತಿಳಿಯುವಂಥ ವೈದ್ಯಕೀಯ ಬರಹ ಮತ್ತು ಪುಸ್ತಕಗಳೂ ಅಗಣಿತವಾಗಿವೆ.

ಕಳೆದ ಎರಡು ದಶಕಗಳಿಂದ ಕನ್ನಡ ಭಾಷೆಯಲ್ಲಿ ಹಲವಾರು ವೈದ್ಯವಿದ್ಯಾಪಾರಂಗತರು ಜನಪ್ರಿಯ ವೈದ್ಯಕೀಯ ಲೇಖನಗಳನ್ನೂ ಪುಸ್ತಕಗಳನ್ನೂ ಬರೆಯುತ್ತಿದ್ದಾರೆ, ನಿಯತಕಾಲಿಕ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದಲ್ಲದೆ ಪುಸ್ತಕ ರೂಪದಲ್ಲೂ ಪ್ರಕಟವಾಗಿವೆ.

ಜನಪ್ರಿಯ ಸಾಹಿತ್ಯ ರಚನೆಯಲ್ಲಿ ನಾವು ನೀತಿ, ನಿಯಮ, ಸೌಶೀಲ್ಯಗಳಿಗೆ ಅನಿವಾರ್ಯ ಮೌಲ್ಯಗಳನ್ನು ನೀಡುವ ಕಾರಣವೆಂದರೆ, ಅವು ಮಾನವ ವರ್ಗದ ಪರಿಶ್ರಮವನ್ನೂ, ದೂರದರ್ಶಿತ್ವವನ್ನೂ ಪಡೆದಿವೆ. ನೀತಿ ನಿಯಮಗಳಿಗೆ ಬದ್ಧವಾದ ರೂಢಿಮೂಲಗಳು ಮಾನವನ ಮನೋ ದೈಹಿಕ ಬೆಳವಣಿಗೆಗಳಿಗೆ ತಳಹದಿಯಾಗಿವೆ. ಯಾವುವು ನೀತಿ, ನಿಯಮಗಳೆಂದು ನಿರ್ಧಾರ ಆಗಿವೆಯೋ ಅವುಗಳ ಅರ್ಥವು ದಿನಗಳೆದಂತೆ ವಿಸ್ತಾರವಾಗುತ್ತಾ ಹೋಗುವುದನ್ನು ಕಾಣುತ್ತೇವೆ. ಮೊದಲಿನ ಬಿಗಿಯು ಸಡಿಲವಾಗುವಂತೆ ತೋರುತ್ತದೆ.

ಕಾಮ ಮತ್ತು ವೈದ್ಯವಿಜ್ಞಾನ ಪರ ಸಾಹಿತ್ಯ ಮತ್ತು ಪ್ರಾಯೋಗಿಕ ವಿಜ್ಞಾನ ಗಳಲ್ಲಿ ಯಾವುದು ಅಭಿವೃದ್ಧಿಗಾಗಿ ವಿಸ್ತರಣೆಯಾದರೂ ಅವು ಮನುಕುಲದ ಮೈಮನಸ್ಸುಗಳ ಒಳ್ಳೆಯದಕ್ಕಾಗಿ ಆಗಬೇಕಲ್ಲದೆ ಅವನತಿಗಾಗಿ ಆಗಬಾರದು. ಹಾಗಾಗದಂತೆ ನೋಡಿಕೊಳ್ಳುವ ಒಂದು ಹೊಣೆ ಮತ್ತು ಜವಾಬ್ದಾರಿಗಳು ವೈದ್ಯಕೀಯ ಸಾಹಿತ್ಯ ರಚನಕಾರರ ತಲೆಯ ಮೇಲಿವೆ.

ಈ ಶತಮಾನದ ಮೂರನೆಯ ದಶಕದಿಂದ ಪ್ರಾರಂಭವಾದ ಆಧುನಿಕ ಕಾಲದ ಕನ್ನಡ ಬರಹಗಾರರಲ್ಲಿ ಲೈಂಗಿಕ ವಿಜ್ಞಾನ, ದಾಂಪತ್ಯ ವಿಜ್ಞಾನ, ವೈದ್ಯ ವಿಜ್ಞಾನಗಳನ್ನು ಕುರಿತು ವೈಜ್ಞಾನಿಕವಾಗಿ ಸೌಶೀಲ್ಯಕ್ಕೆ ಭಂಗ ಬಾರದಂತೆ ಬರೆಯುವವರೂ, ಬರೆದವರೂ ಗಣನೀಯ ಮಟ್ಟದಲ್ಲಿ ಇದ್ದಾರೆ. ೧೯೨೮ ರಲ್ಲಿಯೇ ದಾಂಪತ್ಯ ವಿಜ್ಞಾನ, ಸಂತಾನ ವಿಜ್ಞಾನ ಮತ್ತು ಜನನ ನಿಯಂತ್ರಣ, ಆಹಾರ ವಿಜ್ಞಾನ ಎಂಬ ಪುಸ್ತಕಗಳನ್ನು ಬರೆದ ದಿವಂಗತ ದ. ಕೃ. ಭಾರದ್ವಾಜರು ಈ ದಿಸೆಯಲ್ಲಿ ಯುಗ ಪ್ರವರ್ತಕರೆನ್ನಬಹುದು. ಇದೇ ಕಾಲದಲ್ಲಿದ್ದ ಉದ್ದಾಮ ವಾಗ್ಮಿಗಳೂ, ಪ್ರಖ್ಯಾತ ವೈದ್ಯರೂ, ಬರಹಗಾರರೂ ಆಗಿದ್ದ ಪಂಡಿತ ತಾರಾನಾಥರು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದ 'ಪ್ರೇಮ' ಎಂಬ ಮಾಸ ಪತ್ರಿಕೆಯಲ್ಲಿ ಹಲವು ಉದ್ಬೋಧಕ ಲೇಖನಗಳನ್ನು ಬರೆದಿದ್ದರು. ಅವರ "ತಾಯಂದಿರಿಗಾಗಿ" ಎಂಬ ಗ್ರಂಥವು ಅಪೂರ್ವ ವೈಶಿಷ್ಟ್ಯದಿಂದ ಕೂಡಿದುದು. ಈ ಮಹನೀಯರಿಬ್ಬರ ಭಾವ, ನಿರೂಪಣೆ, ಮತ್ತು ಭಾಷೆಯ ಪ್ರೌಢಿಮೆಗಳಲ್ಲಿ ಕ್ರಾಂತಿಕಾರಕ ಭಾವಗಳ ಬೆಳಕಿತ್ತು. ೧೯೩೬ ರಿಂದ ೧೯೪೨ರ ವರೆಗಿನ ವರ್ಷಗಳಲ್ಲಿ ಧಾರವಾಡದಲ್ಲಿದ್ದ ದಿವಂಗತ ಡಾ। ಎಂ. ಗೋಪಾಲಕೃಷ್ಣರಾಯರು ಪ್ರೇಮಕಲಾ, ಪೌರುಷ, ಗರ್ಭ ನಿರೋಧ, ಕಾಮದ ಗುಟ್ಟು, ಆಯುರ್ವೇದ ಪ್ರಕೃತಿ ಚಿಕಿತ್ಸೆ ಎಂಬ ಗ್ರಂಥಗಳನ್ನು ಪ್ರಕಟಿಸಿದರು. ಹೇಳುವ ವಿಷಯಗಳ ವಿವರಣೆಗಳಲ್ಲಿಯೂ, ನಿರೂಪಣೆಯಲ್ಲಿಯೂ ರಾಯರ ನಿಲುವು, ಭಾವ, ಅಭಿಪ್ರಾಯಗಳ ಖಚಿತತೆ ಮತ್ತು ಸ್ಪಷ್ಟತೆಗಳು ಶ್ಲಾಘನೀಯ ವಾದವು. ೧೯೩೬ರಿಂದಲೂ ಅವರು ಸುಮಾರು ೨೦ ವರ್ಷಕಾಲ ಕಾಮ ವಿಜ್ಞಾನ, ವೈದ್ಯ ವಿಜ್ಞಾನ ಶಿಕ್ಷಣಗಳ ವಿಚಾರ ಕುರಿತು ಪ್ರಕಟಿಸುತ್ತಿದ್ದ

"ಕಲಿಯುಗ" ಎಂಬ ಮಾಸ ಪತ್ರಿಕೆಯು ಸೌಶೀಲ್ಯದ ಪರಿಧಿಯೊಳಗಿದ್ದು ಸಂಗ್ರಾಹ್ಯವಾಗಿತ್ತು.

ಸುಮಾರು ೧೯೬೫ರಿಂದಲೂ ಜನಪ್ರಿಯ ವೈದ್ಯಕೀಯ ಲೇಖನ ಮತ್ತು ಪುಸ್ತಕಗಳನ್ನು ಬರೆಯುತ್ತಿದ್ದ ದಿವಂಗತ ಡಾ। ಎಂ. ಶಿವರಾಂ (ರಾ. ಶಿ.) ಅವರ ಕೊಡುಗೆಯಲ್ಲಿ ಮನ ಮಂಥನ ಮತ್ತು ಮನೋನಂದನ ಮುಖ್ಯವಾದವುಗಳು.

ದಿವಂಗತ ಅನುಪಮಾ ನಿರಂಜನರ ಹೆಸರನ್ನು ಸ್ಮರಿಸಬೇಕಾದುದೂ ಅಗತ್ಯ. ಜನಪ್ರಿಯ ವೈದ್ಯಕೀಯ ಸಾಹಿತ್ಯ ರಚನಾಕಾರರಲ್ಲಿ ಅವರ ಹೆಸರು ಮೊದಲು ನಿಲ್ಲುವಂಥದು. ಡಾ॥ ಸಿ. ಆರ್. ಚಂದ್ರಶೇಖರ ಅವರ ಕೊಡುಗೆ ಗಣನೀಯವಾದುದು. ಮಾನಸಿಕ ಸಿಕ್ಕು, ಸಮಸ್ಯೆ, ಮೂಢನಂಬಿಕೆಗಳಿಂದಾದ ಅನಾಹುತ ಮೊದಲಾದವುಗಳನ್ನು ಕುರಿತು ಬರೆದ ಅವರ ಕೃತಿಗಳ ಸಂಖ್ಯೆ ನಗಣ್ಯವಲ್ಲ.

ಡಾ॥ ಡಿ. ಶಿವಪ್ಪನವರ ಹೆಸರೂ ಮುಂಚೂಣಿಯ ಲೇಖಕರ ಹೆಸರ ಸಾಲಿನಲ್ಲಿದೆ. ಡಾ॥ ಪಿ. ಎಸ್. ಶಂಕರ ಅವರ ಕೃತಿಗಳು "ಮಕ್ಕಳ ಆರೋಗ್ಯ–ಜನಾಂಗದ ಭಾಗ್ಯ", "ಆರೋಗ್ಯದ ಅರಿವು", "ಆರೋಗ್ಯ ಸಂಪದ", ವೆಂಕಟಾಚಲಪತಿ ಅವರ ಕೃತಿ "ತಲೆನೋವು", ಶ್ರೀ ಶಿವರಾಮ ಕಾರಂತ ಮತ್ತು ಶ್ರೀ ಪರಭಟ್ಟರು ಬರೆದ ಕೃತಿ "ಮಂಗನ ಕಾಯಿಲೆ", ಶ್ರೀ ಕೆ. ಟಿ. ಕಪ್ಪಗೌಡರ ಕೃತಿ "ರಕ್ತನಿಧಿ ರಕ್ತದಾನ", ಎಸ್. ಪಿ. ಯೋಗಣ್ಣ ಅವರ ಕೃತಿ "ಹೃದಯ ರೋಗ ಮತ್ತು ಅಸ್ತಮಾ", ಶ್ರೀ ಕಪನೀಪತಯ್ಯನವರು ಬರೆದ ಪುಸ್ತಕ "ಪ್ರಾಣಾಂತಕ ಮಹಾ ರೋಗಗಳು", ಶ್ರೀ ಪಿ. ನಟರಾಜ ಅವರ ಕೃತಿ ಮನೋವಿಜ್ಞಾನ", ಡಾ॥ ಡಿ. ರಮೇಶ ಅವರ ಗಣನೀಯ ಕೃತಿ "ಕಿವಿ, ಮೂಗು ಮತ್ತು ಗಂಟಲು ರೋಗಗಳು", ಶ್ರೀ ಜಿ. ನಾಡಿಗೇರರ ಕೃತಿಗಳು "ಶರೀರ ಗುಣ ಧರ್ಮ" ಮತ್ತು "ದೈಹಿಕ ಚಟುವಟಿಕೆ"ಗಳು, ಶ್ರೀ ಮಂದಾಳಕರ್‌ರವರ ಕೃತಿ "ದೃಷ್ಟಿ ನೀಡುವ ಕಣ್ಣು"ಗಳು, ಶ್ರೀ ಶ್ಯಾಮಸುಂದರರವರ ಕೃತಿ "ನೀವು ಮತ್ತು ಕುಟುಂಬ ಯೋಜನೆ", ಡಾ॥ ಎನ್. ಕೆ. ಕುಲಕರ್ಣಿಯವರ "ಹೋಮಿ

ಯೋಪತಿ ಚಿಕಿತ್ಸಾ ರಹಸ್ಯ", ಡಾ|| ಸಿ. ಆರ್. ಹೆಗಡೆಯವರ "ಆರೋಗ್ಯ ಧರ್ಮ ಮತ್ತು ರೂಢಿಯ ಚಿಕಿತ್ಸೆಗಳು", ಡಾ|| ಎಲ್. ಆರ್. ಹೆಗಡೆಯವರ "ದನಗಳ ವೈದ್ಯ", ಭಾರತೀಯ ವೈದ್ಯ ಪದ್ಧತಿ ನಿರ್ದೇಶನಾಲಯದ ಪ್ರಕಟಣೆ, ಡಾ|| ಶ್ರೀನಿವಾಸಯ್ಯನವರ "ಆರೋಗ್ಯ ಶಾಸ್ತ್ರ ಪರಿಚಯ", ನಾ. ಸತ್ಯ ಅವರ "ಹೃದಯ ರೋಗ ಚಿಕಿತ್ಸೆ" ಮತ್ತು "ಆಯುರ್ವೇದ ಬಾಲ ವಿಕಾಸ", ಡಾ|| ಪಟವರ್ಧನ ಅವರ ಉತ್ಕೃಷ್ಟ ಕೃತಿ "ಆಯುರ್ವೇದ ಅನುಭವ ಚಿಕಿತ್ಸೆ" ಡಾ|| ಎಚ್. ಎಸ್. ಮೋಹನ ಅವರ "ಕಣ್ಣಿನ ಸಂರಕ್ಷಣೆ" ಮತ್ತು "ಯಂತ್ರ–ದೇಹ–ಮನಸ್ಸು" ಕೃತಿಗಳೂ, ಡಾ|| ಗಿರಿಜಮ್ಮ ಮತ್ತು ಡಾ|| ಅನ್ನಪೂರ್ಣಮ್ಮ ಮೊದಲಾದವರ ಲೇಖನಗಳು ನನ್ನ ಗಮನಕ್ಕೆ ಬಂದುದರಿಂದ ಇಲ್ಲಿ ಹೆಸರಿಸುತ್ತಿದ್ದೇನೆ. ಇನ್ನೂ ನನ್ನ ಗಮನಕ್ಕೆ ಬಾರದ ಲೇಖಕರೂ ಸಾಕಷ್ಟಿದ್ದಾರೆ. ಉತ್ತಮ ಕೃತಿಗಳೂ ಇವೆ.*

ಇಂದು ಈ ಸಂಕಿರಣದಲ್ಲಿ, ಕನ್ನಡದಲ್ಲಿ ಈ ತನಕ ನಿರ್ಮಾಣವಾದ ಜನಪ್ರಿಯ ವೈದ್ಯಕೀಯ ಸಾಹಿತ್ಯ ಮತ್ತು ಜನಪ್ರಿಯ ವೈದ್ಯಕೀಯ ಸಾಹಿತ್ಯ ಪ್ರಕಾರಗಳ ಬೆಳವಣಿಗೆ ಎಂಬ ವಿಚಾರಗಳಲ್ಲಿ ಬೇರೆಯವರು ಮಾತನಾಡಲಿರುವುದರಿಂದ ನಾನು ಲಂಬಿಸುವುದಿಲ್ಲ.

ಕಳೆದ ನಾಲ್ಕಾರು ವರ್ಷಗಳಿಂದೀಚೆಗೆ ಸಯುಕ್ತಿಕ ಮತ್ತು ವೈಜ್ಞಾನಿಕವಾದ ಕಾಮವಿಜ್ಞಾನ, ದಾಂಪತ್ಯ ವಿಜ್ಞಾನಗಳ ವಿಚಾರವಾಗಿ ಸಾರ್ವಜನಿಕರಿಗೆ ತಿಳಿವಳಿಕೆ ನೀಡುತ್ತೇವೆಂದು ಹೇಳಿಕೊಂಡು ಪ್ರಕಟವಾಗುತ್ತಿರುವ ಕೆಲವು ಮಾಸ ಪತ್ರಿಕೆಗಳು ಸೌಶೀಲ್ಯದ ಗಡಿಮೀರಿ ವಿಪ್ರಲಂಭ ಶೃಂಗಾರದಿಂದ ಕೂಡಿದ ವರ್ಣನೆಗಳೊಡನೆ ಅವೈಜ್ಞಾನಿಕ ಕಾಮೋದ್ದೀಪಕ ವಿಚಾರಗಳನ್ನು ವರ್ಣಿಸಿ ಕೀಳು ಅಭಿರುಚಿ ಲಾಲಸೆಗಳನ್ನು ಕೆರಳಿಸಿ ಮಾನಸಿಕ ವಿಷಯ ಲಾಲಸೆಯ ತೃಪ್ತಿಪಡಿಸಿ ಹಣ ಗಳಿಸುವ ವ್ಯವಹಾರದಲ್ಲಿ ತೊಡಗಿದ್ದಾರೆ. ಇದು ಶೋಚನೀಯವಲ್ಲದೆ ಖಂಡನೀಯವೂ ಹೌದು. ಕೆಲವು ತಿಂಗಳುಗಳ ಹಿಂದೆ ಸರಕಾರವು ಈ ಪತ್ರಿಕೆ

*ಇತ್ತೀಚೆಗೆ ದಿನಪತ್ರಿಕೆಯೊಂದರಲ್ಲಿ ಡಾ|| ದೇಶಿಕಾಚಾರ್ ಮತ್ತು ಡಾ|| ಎನ್. ಅನಂತರಾವ್ ಜನಪ್ರಿಯ ವೈದ್ಯಕೀಯ ಲೇಖನಗಳನ್ನೂ ಬರೆಯುತ್ತಿದ್ದಾರೆ.

ಗಳನ್ನು ಬಹಿಷ್ಕರಿಸಿ ಅವುಗಳ ಪ್ರಕಟಣೆಗಳನ್ನು ನಿಲ್ಲಿಸಿರುವುದು ಸ್ವಾಗತಾರ್ಹ. ಆದರೂ ಅವೇ ಮಾದರಿಯ ಬೇರೆ ಹೆಸರಿನ ಪತ್ರಿಕೆಗಳು ಪ್ರಕಟವಾಗಬಹುದು. ಈ ಮಾದರಿಯ ಸಾಹಿತ್ಯದ ಪ್ರಕಟಣೆಗಳು ನಿಲ್ಲಬೇಕೆಂದರೆ ಜನತೆಯು ದೃಢ ಮನಸ್ಸಿನಿಂದ ಪ್ರತಿರೋಧಿಸಬೇಕು, ಪ್ರೋತ್ಸಾಹಿಸಬಾರದು.

ಕೊನೆಯದಾಗಿ, ಕಾಮ ಮತ್ತು ದಾಂಪತ್ಯ ವಿಜ್ಞಾನ ಕುರಿತ ಪ್ರಸಿದ್ಧ ಪಾಶ್ಚಾತ್ಯ ಲೇಖಕರಾದ ಡಾ॥ ಹ್ಯಾಮಲ್ಟನ್‌ರ ಮಾತುಗಳನ್ನು ಉಲ್ಲೇಖಿಸುವುದು ಅಗತ್ಯವೂ ಯೋಗ್ಯವೂ ಹೌದು.

ಪ್ರತಿಯೊಂದು ಪ್ರಾಥಮಿಕ ಹಾಗೂ ಉಚ್ಚ ವರ್ಗದ ಶಿಕ್ಷಣ ಸಂಸ್ಥೆಗಳಲ್ಲಿ ನಮ್ಮ ದೇಶದ ಮನುಷ್ಯ ಜನಾಂಗದ ಮೂಲಭೂತ ಸುಧಾರಣೆಗೆ ಸಾಧಕ ವಾಗುವ ಸುಪ್ರಜನನ ಶಾಸ್ತ್ರದ ತಿಳಿವಳಿಕೆ ಕೊಡುವ ಮಾರ್ಗಗಳನ್ನು ಕೂಡಲೇ ವಿವರಿಸಿ ಹೇಳಬೇಕು. ಮನುಷ್ಯನನ್ನು ಅಧೋಗತಿಗೆ ಒಯ್ಯುವ ದುರ್ವೃತ್ತಿಗಳ, ವಿಷಯ ಲಂಪಟತನದ ಪರಿಣಾಮಗಳ, ಸಾಮಾಜಿಕ ಪಿಡುಗುಗಳ, ಗುಹ್ಯರೋಗ ವಿಷಯಗಳ ವಿವರಗಳು ಸಮಾವಿಷ್ಟವಾದ ಒಂದು ಬೋಧನಾಕ್ರಮವನ್ನು ಸಿದ್ಧ ಪಡಿಸಬೇಕು. ಅದರಿಂದ, ಆಧುನಿಕ ಮನುಷ್ಯ ಪೀಳಿಗೆಯ ದೇಹ ಮನಸ್ಸುಗಳ ಕ್ಷೇಮಾಭ್ಯುದಯಕ್ಕಿರುವ ಹೊಣೆಯು ಅರ್ಥವಾಗುವುದು ಮತ್ತು ಭಾವೀ ಮಾತಾಪಿತೃತ್ವದ ಜವಾಬ್ದಾರಿಯ ಅರಿವಾಗುವುದು. ಶಾಲಾ ಶಿಕ್ಷಕರನ್ನು ತರಬೇತು ಮಾಡುವ ಪ್ರತಿಯೊಂದು ಸಂಸ್ಥೆಗಳಲ್ಲಿಯೂ ಕಾಮವಿಜ್ಞಾನ ಮತ್ತು ದಾಂಪತ್ಯ ವಿಜ್ಞಾನ ಪರ ಶಿಕ್ಷಣ ಭಾಗಗಳನ್ನು ಕಡ್ಡಾಯವಾಗಿ ಸೇರಿಸಬೇಕು. ಅದರಿಂದ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಈ ವಿಚಾರಗಳಲ್ಲಿ ಯೋಗ್ಯವಾದ ದಾರಿ ತೋರಲು ಸಮರ್ಥರಾಗುವರು. ಆಗ ಮುಂದಿನ ಪೀಳಿಗೆಗಳು ತಮ್ಮಷ್ಟಕ್ಕೇ ಆರೋಗ್ಯಾಭ್ಯುದಯಗಳ ದಾರಿ ಹಿಡಿಯುತ್ತವೆ.

ಜನಪ್ರಿಯ ವೈದ್ಯಕೀಯ ಸಾಹಿತ್ಯದ ಬೆಳವಣಿಗೆ ಮತ್ತು ಮುನ್ನೋಟ

—ಡಾ|| ಎಚ್. ಡಿ. ಚಂದ್ರಪ್ಪಗೌಡ

ಕನ್ನಡ ಸಾಹಿತ್ಯಕ್ಕೆ ಸುಮಾರು ಒಂದು ಸಾವಿರ ವರ್ಷಗಳಿಗೂ ಹೆಚ್ಚು ಅವಧಿಯ ಇತಿಹಾಸವಿದೆ ಎಂದು ಹೇಳಲಾಗುತ್ತಿದೆ. ಅಂದಿನ 'ಕವಿರಾಜ ಮಾರ್ಗ'ದಿಂದ ಇಂದಿನ 'ರಾಮಾಯಣ ದರ್ಶನಂ'ನವರೆಗೂ ಅದು ವಿವಿಧ ಪ್ರಕಾರಗಳಾಗಿ ಬೆಳೆದುಕೊಂಡು ಬರುತ್ತಿದೆ. ಈ ಶತಮಾನದ ಆದಿಯವರೆಗೂ ಪೌರಾಣಿಕ, ಐತಿಹಾಸಿಕ, ಅಲಂಕಾರಿಕ ಮುಂತಾದ ಪರಂಪರಾನುಗತ ವಿಷಯ ನಮ್ಮ ಸಾಹಿತ್ಯ ರಚನೆಯ ಮೂಲ ಪ್ರೇರಣೆಗಳಾಗಿರುತ್ತಿದ್ದವು. ಪ್ರಸ್ತುತದ ಇಪ್ಪತ್ತನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ವೈವಿಧ್ಯತೆಗಳ ಮಹಾಪೂರವೇ ಉಂಟಾಯಿತೆಂದರೆ ಅತಿಶಯೋಕ್ತಿಯಲ್ಲ. ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಮುಂತಾದ ಹಲವು ಪ್ರಕಾರಗಳು ಈ ಸಮಯದಲ್ಲಿ ಒಂದಾದ ಮೇಲೊಂದರಂತೆ ಮೂಡಿ ಬಂದವು. ಅದೀಗ ವೈಚಾರಿಕ ಮತ್ತು ವೈಜ್ಞಾನಿಕ ವಿಷಯಗಳನ್ನು ತನ್ನ ಮಡಿಲಿಗೆ ಹಾಕಿಕೊಂಡು ಇನ್ನೂ ಸಮೃದ್ಧಿಯಾಗಿ ಬೆಳೆಯಲಾರಂಭಿಸಿದೆ.

ಯಾವುದೇ ಒಂದು ರಾಷ್ಟ್ರ ಅಥವಾ ಪ್ರದೇಶದ ಸಾಹಿತ್ಯ ಆಯಾಕಾಲ, ಪರಿಸರ, ಸಮಯ ಸಂದರ್ಭ ಹಾಗೂ ಜನರ ಆಶೋತ್ತರಗಳ ಪ್ರತಿಬಿಂಬವಾಗಿ

ಸೃಷ್ಟಿಯಾಗುತ್ತದೆನ್ನಬಹುದು. ನಾವೀಗ ಆಧುನಿಕ ವೈಜ್ಞಾನಿಕ ಯುಗದಲ್ಲಿದ್ದೇವಷ್ಟೆ. ವಿಜ್ಞಾನದ ತತ್ವ ಮತ್ತು ಮಾರ್ಗಗಳು ದಿನ ನಿತ್ಯದ ಜೀವನ ಕ್ರಮಗಳಲ್ಲಿ ನಮಗರಿವಿಲ್ಲದಂತೆಯೇ ಬೆರೆತು ಹೋಗಿದೆ. ವೈಚಾರಿಕ ದೃಷ್ಟಿ ಮತ್ತು ವೈಜ್ಞಾನಿಕ ಮನೋಭಾವ ಈ ಕಾಲದ ಯುಗಧರ್ಮವೇ ಆಗಿದೆ. ಇಂತಹ ಕಾಲಧರ್ಮಕ್ಕನುಗುಣವಾಗಿ ಜನಪ್ರಿಯ ವಿಜ್ಞಾನ ಸಾಹಿತ್ಯವೂ ಹೆಚ್ಚು ಹೆಚ್ಚಾಗಿ ನಿರ್ಮಾಣವಾಗುತ್ತಿರುವುದು ಆಶ್ಚರ್ಯವೇನಲ್ಲ.

ಕತೆ, ಕಾದಂಬರಿ, ಕಾವ್ಯ ಮುಂತಾದ ಸೃಜನಶೀಲ ಸಾಹಿತ್ಯ ಪ್ರಕಾರಗಳೇ ನಿಜವಾದ ಸಾಹಿತ್ಯವೆಂಬ ಅನಿಸಿಕೆಯ ಕಾಲವೊಂದಿತ್ತು. ಆದರೆ ಯಾವುದೇ ಒಂದು ಭಾಷೆಯ ಸಾಹಿತ್ಯಕ್ಕೆ ಸಂಪತ್ತು, ಸಮೃದ್ಧಿ ಹಾಗೂ ಶಕ್ತಿಗಳು ಬರುವುದು ಅದು ಜ್ಞಾನದ ಎಲ್ಲಾ ಮುಖಗಳ ಮಾಧ್ಯಮವಾದಾಗ ಮಾತ್ರವೆಂಬುದನ್ನು ಮರೆಯಲಾಗದು. ಮಾನವಿಕ ಹಾಗೂ ಸಮಾಜ-ವಿಜ್ಞಾನಗಳಿಗೆ ಸಂಬಂಧಿಸಿದ ಕನ್ನಡ ಸಾಹಿತ್ಯ ಬಹಳ ಕಾಲದಿಂದಲೂ ಸಮೃದ್ಧಿಯಾಗಿ ಬೆಳವಣಿಗೆಯಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ವಿಜ್ಞಾನದ ವಿಚಾರಗಳನ್ನು ಜನಪ್ರಿಯಗೊಳಿಸುವುದಕ್ಕಾಗಿಯೂ ಅದು ವ್ಯವಸ್ಥಿತ ರೀತಿಯಲ್ಲಿ ವೃದ್ಧಿಯಾಗುತ್ತಿರುವುದನ್ನು ನೋಡಬಹುದು. ಆದರೆ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ, ಜನಪ್ರಿಯ ಸಾಹಿತ್ಯ ರಚನೆಯಲ್ಲಿ ನಿರೀಕ್ಷಿಸಿದಷ್ಟು ಪ್ರಗತಿ ಆಗುತ್ತಿಲ್ಲವೆಂಬ ಕೊರಗು ಇದೆ. ಜನರ ನಿತ್ಯ ಜೀವನದ ಆಗುಹೋಗು, ನೋವು-ನಲಿವುಗಳೊಡನೆ ನಿಕಟ ಸಂಬಂಧವಿರುವ ವೈದ್ಯಕೀಯ ಮತ್ತು ಆರೋಗ್ಯದ ಕ್ಷೇತ್ರದಲ್ಲಿ ಅವರು ಸುಲಭವಾಗಿ ಅರ್ಥ ಮಾಡಿಕೊಳ್ಳುವ ಸರಳ ಭಾಷಾ ಮಾಧ್ಯಮದಲ್ಲಿ ಸಾಹಿತ್ಯ ನಿರ್ಮಾಣವಾಗುವ ಅವಶ್ಯಕತೆ ಎಂದಿಗಿಂತ ಇಂದು ಹೆಚ್ಚಾಗಿದೆ.

ಜನಪ್ರಿಯ ವಿಜ್ಞಾನ ಸಾಹಿತ್ಯದ ಬೆಳವಣಿಗೆ

ಜನಪ್ರಿಯ ವೈದ್ಯಕೀಯ ಸಾಹಿತ್ಯದ ಬೆಳವಣಿಗೆಯನ್ನು ಪ್ರಸ್ತಾಪಿಸುವ ಮೊದಲು ನಮ್ಮ ಭಾಷೆಯಲ್ಲಿ ವಿಜ್ಞಾನ ಬರವಣಿಗೆಯ ಆರಂಭದ ಬಗೆಗೆ ನಾಲ್ಕು ಮಾತುಗಳು ಅಪೇಕ್ಷ್ಯವೆನಿಸುತ್ತದೆ. ವಿಜ್ಞಾನದ ವಿಷಯಗಳು ಜನ ಜೀವನಕ್ಕೆ ನೇರವಾಗಿ ಸಂಬಂಧಪಟ್ಟವಲ್ಲ ; ಅವು ಕೇವಲ ವಿಶೇಷ ತಜ್ಞರಿಗೆ

ಮಾತ್ರವೆಂಬ ಕಲ್ಪನೆಯಿದ್ದ ಈ ಶತಮಾನದ ಆದಿಯಲ್ಲಿ ಈ ದಿಸೆಯಲ್ಲಿ ಕೆಲವು ಪ್ರಯತ್ನಗಳಾದವು. ಬೆಂಗಳೂರಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ದಿ॥ ಬೆಳ್ಳಾವೆ ವೆಂಕಟ ನಾರಾಯಣಪ್ಪ ಮತ್ತು ಪವನಶಾಸ್ತ್ರ ಪರಿವೀಕ್ಷಕರಾಗಿದ್ದ ದಿ॥ ಸುಂಗಪುರಂ ವೆಂಕಟೇಶ ಅಯ್ಯಂಗಾರರು ೧೯೨೦ರ ಸಮಯದಲ್ಲೇ "ವಿಜ್ಞಾನ ಪ್ರಚಾರಣೀ ಸಮಿತಿ" ಎಂಬ ಸಂಘವನ್ನು ಸ್ಥಾಪನೆ ಮಾಡಿದ್ದರು. ಕನ್ನಡದಲ್ಲಿ "ವಿಜ್ಞಾನ"ವೆಂಬ ಮಾಸಪತ್ರಿಕೆಯನ್ನು ಸಹಾ ಪ್ರಕಟಿಸುತ್ತಿದ್ದರು. ವಿಜ್ಞಾನದ ವಿಷಯಗಳನ್ನು ಕನ್ನಡದಲ್ಲಿ ಸರಳವಾಗಿ ಬರೆಯುವವರು ತೀರಾ ವಿರಳವಾಗಿದ್ದ ಕಾಲವದು. ಆದುದರಿಂದ ಅವರ ಪ್ರಯತ್ನ ಬಹಳ ಕಾಲ ಮುಂದುವರೆಯಲಿಲ್ಲ. ನಂತರದ ಕೆಲವು ವರ್ಷಗಳಲ್ಲಿ ಬಹುಮುಖ ಪ್ರತಿಭೆಯ ಕೋಟ ಶಿವರಾಮಕಾರಂತರು ಸ್ವತಃ ವಿಜ್ಞಾನಿಗಳಾಗಿರದಿದ್ದರೂ ಮಕ್ಕಳಿಗಾಗಿ "ಬಾಲ ಪ್ರಪಂಚ" ಎಂಬ ವೈಜ್ಞಾನಿಕ ವಿಷಯಗಳ ಗ್ರಂಥಮಾಲಿಕೆಯನ್ನು ಆರಂಭಿಸಿದ್ದು ಈ ದಿಸೆಯಲ್ಲಿ ಒಂದು ಮೈಲಿಗಲ್ಲು. ಇತ್ತೀಚಿನ ವರ್ಷಗಳಲ್ಲಿ ಅವರು "ವಿಜ್ಞಾನ ಪ್ರಪಂಚ"ವೆಂಬ ವಿಜ್ಞಾನ ವಿಶ್ವಕೋಶವನ್ನು ಪ್ರಕಟಿಸಿ ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ.

ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಕನ್ನಡವೇ ಶಿಕ್ಷಣದ ಮಾಧ್ಯಮವಾಗ ಬೇಕೆಂಬ ಚಳುವಳಿ ನಡೆಯುತ್ತಿದೆಯಷ್ಟೆ. ಮೈಸೂರು ವಿಶ್ವವಿದ್ಯಾನಿಲಯ ದವರು ಜನಸಾಮಾನ್ಯರಿಗೆ ಜ್ಞಾನದ ವಿವಿಧ ಪ್ರಕಾರಗಳನ್ನು ತಲ್ಪಿಸುವ ಉದ್ದೇಶ ದಿಂದ "ಪ್ರಚಾರ ಪುಸ್ತಕ ಮಾಲಿಕೆ"ಯನ್ನು ಆರಂಭಿಸಿದರು. ಶಾಲಾಕಾಲೇಜು ಗಳಲ್ಲಿ ಆರಂಭಿಸಿದ ಕನ್ನಡ ಮಾಧ್ಯಮದ ಪ್ರಯತ್ನಗಳನ್ನು ಯಶಸ್ವಿಗೊಳಿಸಲು ಬೇಕಾಗಿದ್ದ ವಿಜ್ಞಾನದ ವಿವಿಧ ವಿಷಯಗಳ ಪಠ್ಯಪುಸ್ತಕಗಳನ್ನು ಕನ್ನಡದಲ್ಲಿ ರಚಿಸಲು ನಾನಾ ರೀತಿಯ ಪ್ರೋತ್ಸಾಹಗಳನ್ನು ನೀಡಿದರು. ಪ್ರಸ್ತುತ ಸಮಯ ದಲ್ಲಿ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳೂ ಇದೇ ಉದ್ದೇಶಕ್ಕಾಗಿ ತಮ್ಮ ಪ್ರಸಾರಾಂಗಗಳ ಮೂಲಕ ಕಾರ್ಯೋನ್ಮುಖವಾಗಿವೆ.

ಈಗ ೧೦–೧೨ ವರ್ಷಗಳಿಂದ ಅಸ್ತಿತ್ವದಲ್ಲಿರುವ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನದ ತತ್ವಗಳು ಮತ್ತು ವಿಜ್ಞಾನ ಸಾಹಿತ್ಯವನ್ನು

ಜನಪ್ರಿಯಗೊಳಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ. ಅದು ಪ್ರಕಟಿಸುತ್ತಿರುವ "ಬಾಲ ವಿಜ್ಞಾನ" ಮಾಸಿಕ ಅತ್ಯಂತ ಜನಪ್ರಿಯ ಮಾಧ್ಯಮವಾಗಿ ಪರಿಣಮಿಸಿದೆ. ಜನಪ್ರಿಯ ವಿಜ್ಞಾನದ ಸಾಹಿತ್ಯದ ಬರವಣಿಗೆಯನ್ನು ಪ್ರೋತ್ಸಾಹಿಸಲು ಕ.ರಾ.ವಿ.ಪ. ಪ್ರತಿವರ್ಷ ಜರುಗಿಸುತ್ತಿರುವ "ವಿಜ್ಞಾನ ಲೇಖಕರ ಶಿಬಿರ"ಗಳಿಂದ ಹೊಸಪೀಳಿಗೆಯ ವಿಜ್ಞಾನ ಸಾಹಿತ್ಯ ಬರಹಗಾರರುಗಳ ತಂಡವೇ ಉದಯವಾಗುತ್ತಿದೆ. ಜೊತೆಗೆ ಹಲವು ವೈಜ್ಞಾನಿಕ ಹಾಗೂ ವಿಚಾರ ಪ್ರಚೋದಕ ಪುಸ್ತಕಗಳನ್ನು ಪ್ರಕಟಿಸಿ, ವಿಜ್ಞಾನ ಸಾಹಿತ್ಯದ ಬೆಳವಣಿಗೆಗೆ ಇಂಬು ಕೊಡುತ್ತಿದೆ.

ಜನಪ್ರಿಯ ವೈದ್ಯಕೀಯ ಸಾಹಿತ್ಯ

ವೈದ್ಯಕೀಯ ಮತ್ತು ಆರೋಗ್ಯದ ವಿಷಯಗಳನ್ನು ಜನಪ್ರಿಯಗೊಳಿಸುವಲ್ಲಿ ಖ್ಯಾತ ವೈದ್ಯರೂ, ಹೆಸರಾಂತ ಹಾಸ್ಯಪತ್ರಿಕೆ "ಕೊರವಂಜಿ"ಯ ಸಂಪಾದಕರೂ ಆಗಿ "ರಾಶಿ" ಎಂದೇ ಪ್ರಖ್ಯಾತರಾಗಿದ್ದ ಡಾ॥ ಎಂ. ಶಿವರಾಂ ಅವರು ಆದ್ಯಪ್ರವರ್ತಕರೆನ್ನಬಹುದು. ತಮಗೆ ಅರಿವಿಲ್ಲದೇ ಬಹುಪಾಲು ಜನರು ನಾನಾ ವಿಧಗಳ ಮಾನಸಿಕ ರೋಗಗಳಿಂದ ಬಳಲುತ್ತಿರುವ ರೀತಿನೀತಿಗಳನ್ನು ಸರಳವಾದ ರೋಗಿ–ಚರಿತ್ರೆಗಳ ಕಥಾರೂಪಕ ನಿರೂಪಣೆಯ ತಂತ್ರದ ಬರಹಗಳು ಅವರ ಲೇಖನಿಯಿಂದ ಹೊರಬಂದು, ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದುಕೊಟ್ಟವು. ಅವರು ರಚಿಸಿದ "ಮನೋನಂದನ", "ಮನಮಂಥನ"ದಂತಹ ಕೃತಿಗಳೂ ಇಂದಿಗೂ ಜನಪ್ರಿಯವಾಗಿದ್ದು ಹಲವು ಆವೃತ್ತಿಗಳನ್ನು ಕಂಡಿವೆ.* ಅವರಂತೆಯೇ ವೈದ್ಯಕೀಯದ ಇನ್ನೊಂದು ಪ್ರಕಾರವಾದ ದಾಂಪತ್ಯ ವಿಜ್ಞಾನ, ಪ್ರಸೂತಿ ಶಾಸ್ತ್ರ, ಕಾಮವಿಜ್ಞಾನದ ವಿಷಯಗಳನ್ನು ಅತ್ಯಂತ ಗಾಂಭೀರ್ಯತೆ ಹಾಗೂ ಶಾಸ್ತ್ರೀಯವಾಗಿ ಬರೆದು ಪ್ರಕಟಿಸಿದ ಕೀರ್ತಿ ದಿ॥ ಡಾ॥ ಗೋಪಾಲಕೃಷ್ಣರಾವ್ ಮತ್ತು ಡಾ॥ ದೊಡ್ಡೇರಿ ವೆಂಕಟಗಿರಿರಾವ್* ಅವರಿಗೆ ಸಲ್ಲುತ್ತದೆ. ಇತ್ತೀಚಿನ ವರ್ಷಗಳಲ್ಲಿ ಡಾ॥ ಡಿ. ಎಸ್. ಶಿವಪ್ಪ ದಿ॥ಡಾ॥ ಅನುಪಮಾ ನಿರಂಜನ, ದಿ॥ಡಾ॥ಎ. ನಾರಾಯಣಪ್ಪ, ಡಾ॥ ಸಿ. ಆರ್. ಚಂದ್ರಶೇಖರ್, ಡಾ॥ ಪಿ. ಎಸ್. ಶಂಕರ್, ಡಾ: ಎಸ್. ಜಿ. ನಾಗಲೋಟಿಮಠ ಮುಂತಾದವರು ವೈದ್ಯಕೀಯ ವಿಷಯಗಳಲ್ಲಿ ವಿಪುಲ ಸಾಹಿತ್ಯ ಪ್ರಕಾರಗಳನ್ನು

ರಚಿಸಿದ್ದಾರೆ. ವೈದ್ಯಕೀಯ ಮತ್ತು ಆರೋಗ್ಯದ ವಿಷಯಗಳಲ್ಲಿ ಶ್ರೇಷ್ಠ ಕೃತಿಗಳನ್ನು ಪ್ರಕಟಿಸಿ ಜನಪ್ರಿಯತೆ ಗಳಿಸಿದ್ದಾರೆ. ಸಾಹಿತ್ಯ ಅಕಾಡಮಿ ಹಾಗೂ ಮತ್ತಿತರ ಸಂಘ ಸಂಸ್ಥೆಗಳಿಂದ ಪುರಸ್ಕೃತರಾಗಿದ್ದಾರೆ. ಕೆಲವರ ಕೃತಿಗಳು ಮಲೆಯಾಳ, ತೆಲುಗು ಮತ್ತು ಇಂಗ್ಲೀಷ್ ಭಾಷೆಗಳಿಗೂ ತರ್ಜುಮೆಯಾಗಿವೆ. ಸೃಜನಶೀಲವೆನ್ನಬಹುದಾದ ಕತೆ, ಕಾದಂಬರಿ ಜೀವನ ಚರಿತ್ರೆಗಳ ರಚನೆಯೂ ಆಗಿವೆ. ಇಲ್ಲಿಯವರೇ ಆದ ಡಾ॥ ಅಶೋಕ್ ಪೈಯವರು ಸಿನೆಮಾ ದೂರ ದರ್ಶನ ಮಾಧ್ಯಮಗಳಲ್ಲಿ ವೈದ್ಯಕೀಯ ವಿಷಯಗಳನ್ನು ಯಶಸ್ವಿಯಾಗಿ ಬಳಸಿ ಕೊಂಡ ನಿದರ್ಶನಗಳಿವೆ. ವೈದ್ಯಕೀಯ ಮತ್ತು ಆರೋಗ್ಯದ ವಿಷಯಗಳಲ್ಲಿ ಜನಪ್ರಿಯ ಸಾಹಿತ್ಯ ರಚನೆಯಲ್ಲಿ ತೊಡಗಿರುವ ಹೊಸ ಬರಹಗಾರರ ತಂಡ ತಯಾರಾಗುತ್ತಿರುವುದು ಆಶಾದಾಯಕ ಸಂಗತಿ.

ವೈದ್ಯ ವಿಜ್ಞಾನವು, ಸಾಮಾನ್ಯ ವಿಜ್ಞಾನದ ಒಂದು ಅವಿಭಾಜ್ಯ ಅಂಗ ವಷ್ಟೆ. ಅದರಿಂದಲೇ ಜನಪ್ರಿಯ ವೈದ್ಯಕೀಯ ಸಾಹಿತ್ಯ ಟಿಸಿಲೊಡೆದು ಬೆಳೆಯುತ್ತಿದೆ. ಜನರ ಆರೋಗ್ಯ–ಅನಾರೋಗ್ಯಗಳಿಗೆ ತೀರ ಹತ್ತಿರದ ನಂಟು ಇರುವ ವೈದ್ಯಕೀಯ ವಿಷಯಗಳ ಸಾಹಿತ್ಯ ಈಗ ಮೂಲ ವಿಜ್ಞಾನ ಸಾಹಿತ್ಯ ಪ್ರಕಾರಗಳಿಗಿಂತಲೂ ಹೆಚ್ಚು ಬಿರುಸಿನಿಂದ ಪ್ರಚಾರಕ್ಕೆ ಬರುತ್ತಿದೆಯೆಂದರೆ ಅತಿಶಯೋಕ್ತಿಯಲ್ಲ.

ಜನಪ್ರಿಯ ವೈದ್ಯಕೀಯ ಸಾಹಿತ್ಯದ ಅವಶ್ಯಕತೆ

ಮತಧರ್ಮ, ತತ್ವಯೋಗ, ಮೀಮಾಂಶೆಯಂತಹ ವಿಷಯಗಳು ನಮ್ಮ ಸಾಹಿತ್ಯ ಮತ್ತು ಜೀವನ ಕ್ರಮಗಳಲ್ಲಿ ಹಾಸುಹೊಕ್ಕಾಗಿ ಬೆರೆತುಹೋಗಿರುವಷ್ಟು ವೈಜ್ಞಾನಿಕ ವಿಚಾರಗಳು ಬೆರೆಯಲು ಇನ್ನೂ ಸಾಧ್ಯವಾಗಿಲ್ಲವೆಂದೇ ಹೇಳ ಬಹುದು, ಆಧ್ಯಾತ್ಮಿಕ ವಿಷಯಗಳಲ್ಲಿ ನಾವು ಪಾಶ್ಚಾತ್ಯರಿಗಿಂತಲೂ ಮುಂದಿ ರುವಿವೆವಾದರೂ ವೈಜ್ಞಾನಿಕ ವಿಚಾರಗಳಲ್ಲಿ ಅವರಿಂದ ಕಲಿತುಕೊಳ್ಳಬೇಕಾದುದು ಬಹಳಷ್ಟಿವೆ. ವಿಜ್ಞಾನ ಮತ್ತು ವೈದ್ಯಕೀಯ ವಿಷಯಗಳ ಜನಪ್ರಿಯ ಸಾಹಿತ್ಯ ಇಂಗ್ಲಿಷ್‌ನಂತಹ ಭಾಷೆಯಲ್ಲಿ ಹಿಂದಿನಿಂದಲೂ ಬೆಳೆದುಕೊಂಡಿವೆ. ನಮ್ಮಲ್ಲಿ ಈ ಪ್ರಕಾರದ ಸಾಹಿತ್ಯದ ಸೃಷ್ಟಿಯು ಹವ್ಯಾಸ ಹುಟ್ಟಿಕೊಂಡು ಬರುತ್ತಿರುವುದು

ಹೆಚ್ಚೆಂದರೆ ಮುಕ್ಕಾಲು ಶತಮಾನದಿಂದೀಚೆಗೆ. ನಮ್ಮ ದೇಶದಲ್ಲಿ ಈ ತರಹೆಯ ಪರಿಸ್ಥಿತಿ ಇರುವುದಕ್ಕೆ ಕಾರಣಗಳು ಹಲವು. ದೇಶದ ಬಹುಪಾಲು ಜನರು ಅನಕ್ಷರಸ್ಥರಾಗಿರುವುದು ಒಂದು ಕಡೆಯಾದರೆ ಶಾಲಾಕಾಲೇಜುಗಳಲ್ಲಿ ವಿಜ್ಞಾನದ ವಿಷಯಗಳ ಬೋಧನೆ ಇತ್ತೀಚಿನವರೆಗೂ ಇಂಗ್ಲಿಷ್‌ನಲ್ಲೇ ಆಗುತ್ತಿದ್ದುದು ಇನ್ನೊಂದು ಅಡಚಣೆಯಾಗಿತ್ತು. ಅಪಾರಕವೂ ಅವಾಹಕವೂ ಆದ ಪರಭಾಷಾ ಮಾಧ್ಯಮದ ಶಿಕ್ಷಣ ನಮ್ಮ ಅಂತರಂಗದಲ್ಲಿ ವೈಜ್ಞಾನಿಕ ವಾತಾವರಣವನ್ನು ಮೂಡಿಸುವುದರಲ್ಲಿ ವಿಫಲವಾಗಿದೆಯೆಂದೇ ಹೇಳಬಹುದು. ಕಲಿಸಿಕೊಟ್ಟದ್ದನ್ನೇ ಪುನರುಚ್ಚಾರ ಮಾಡುವ ಗಿಣಿಗಳಂತೆರವರನ್ನು ಅದು ತಯಾರು ಮಾಡಿತೇ ಹೊರತು ಚಿಂತನಶೀಲ ಮನುಷ್ಯರನ್ನು ಸೃಷ್ಟಿಸಲಾಗಲಿಲ್ಲ ; ವೈಜ್ಞಾನಿಕ ಭಾವನೆಗಳು ನೆನಪಿನ ಹೊಂಡದಲ್ಲಿ ಸಂಗ್ರಹವಾಗಿ ಉಳಿದುಕೊಂಡವೇ ಹೊರತು ಅವು ಬುದ್ಧಿಗೆ ನಿಲುಕಲಿಲ್ಲ ; ರಕ್ತಗತವಾಗಿ ಬದುಕಿನ ಭಾಗವಾಗಲಿಲ್ಲ ; ನಮ್ಮ ಶಿಕ್ಷಣ ಮತ್ತು ವ್ಯವಹಾರಗಳಿಗೆ ಪರಭಾಷೆಯೇ ಇನ್ನೂ ಮಾಧ್ಯಮವಾಗಿ ಉಳಿದುಕೊಂಡಿರುವುದರಿಂದ ವೈಜ್ಞಾನಿಕ ಭಾವನೆಗಳಿಗೂ ಮತ್ತು ನಾವಾಡುವ ಭಾಷೆಗಳಿಗೂ ನಡುವೆ ದೈತ್ಯಕಂದಕವೇ ಏರ್ಪಟ್ಟಿದೆಯೆಂದು ದೇ.ಜ.ಗೌ ಹೇಳುವ ಮಾತುಗಳಲ್ಲಿ ಅಪಾರ ಸತ್ಯವಿದೆ. ಹೀಗಾಗಿ ವೈದ್ಯರಾದವರು ಅದೆಷ್ಟೇ ದಕ್ಷರಾಗಿ ಜನಪ್ರಿಯತೆ ಗಳಿಸಿದ್ದರೂ ವೈದ್ಯಕೀಯ ಮತ್ತು ಆರೋಗ್ಯದ ನಿಯಮಗಳನ್ನು ಜನರಾಡುವ ಭಾಷೆಯಲ್ಲಿ ಅವರಿಗೆ ಅರ್ಥವಾಗುವ ಹಾಗೆ ತಿಳಿಯಹೇಳುವುದರಲ್ಲಿ ವಿಫಲರಾಗುವುದನ್ನು ನೋಡಬಹುದು. ಈ ಸಂದರ್ಭದಲ್ಲಿ ಇತ್ತೀಚೆಗೆ ಶಿವಮೊಗ್ಗದಲ್ಲೇ ಜರುಗಿದ ವೈದ್ಯರು, ಲಾಯರು, ಪೋಲೀಸರುಗಳ ಸಂಘಗಳ ವತಿಯಿಂದ ಜರುಗಿದ "ವೈದ್ಯಕೀಯ–ನ್ಯಾಯ" ವಿಷಯಗಳ ವಿಚಾರ ಸಂಕಿರಣದಲ್ಲಿ ಕೇರಳದ ತಜ್ಞರೊಬ್ಬರು ಹೇಳಿದ ವಿಚಾರ ಗಮನಾರ್ಹ. ಅವರೊಂದು ಸಾರಿ ಅಲ್ಲಿ ಅತ್ಯಂತ ಜನಪ್ರಿಯ ವೈದ್ಯರೊಬ್ಬರ ಯಶಸ್ಸಿನ ಗುಟ್ಟೇನೆಂದು ವಿಚಾರಿಸಿದಾಗ ಆ ವೈದ್ಯರು ನೀಡಿದ ಉತ್ತರ ನಮ್ಮೆಲ್ಲರ ಕಣ್ಣು ತೆರಸುವಂತಾಗಬೇಕು. ಅವರು ರೋಗಿಗಳೊಡನೆ ಅಚ್ಚ ಮಲೆಯಾಳಂ ಭಾಷೆಯಲ್ಲೇ ಸಂಭಾಷಣೆ ನಡೆಸುವುದಲ್ಲದೇ, ಅವರು ನೀಡುವ ಔಷಧ–ಸೂಚಿ–ಚೀಟಿಗಳಲ್ಲಿ ಮದ್ದುಗಳ ಹೆಸರು, ಅವುಗಳನ್ನು ತೆಗೆದುಕೊಳ್ಳುವ ರೀತಿ ನೀತಿಗಳನ್ನೆಲ್ಲಾ ಮಲೆಯಾಳಂನಲ್ಲಿ ಬರೆದುಕೊಡುವುದೇ ಆಗಿದೆಯಂತೆ, ಅಂದರೆ ವೈದ್ಯಕೀಯ

ವಿಷಯಗಳ ಸರಳೀಕರಣ ರೋಗಿಗಳ ದೃಷ್ಟಿಯಿಂದಲೇ ಅಲ್ಲದೆ ವೈದ್ಯರ ಹಿತ ದೃಷ್ಟಿಯಿಂದಲೂ ಜನರಾಡುವ ಭಾಷೆಯತ್ತ ಹೊರಳಬೇಕಾಗುತ್ತದೆ. ಈ ದೃಷ್ಟಿಯಿಂದಲೂ ವೈದ್ಯಕೀಯ ವಿಷಯಗಳ ಜನಪ್ರಿಯ ಸಾಹಿತ್ಯ ರಚನೆ ಈಗ ಅತ್ಯಂತ ತುರ್ತಾಗಿ ಜರುಗಬೇಕಾಗಿದೆ.

ಕನ್ನಡದಲ್ಲಿ ವೈದ್ಯಕೀಯ ವಿಷಯಗಳ ಸಾಹಿತ್ಯದ ನಿರ್ಮಾಣಕ್ಕೆ ಪ್ರಮುಖ ವಾದ ಇನ್ನೊಂದು ಉದ್ದೇಶವಿದೆ. ರಾಜ್ಯದ ಇತರ ಎಲ್ಲಾ ಇಲಾಖೆಗಳಂತೆ, ಸಾರ್ವಜನಿಕ ಆರೋಗ್ಯ ಇಲಾಖೆಯ ವ್ಯವಹಾರಗಳೂ ಕನ್ನಡದಲ್ಲೇ ಜರುಗ ಬೇಕೆಂಬ ನಿಯಮವಿದೆಯಷ್ಟೆ. ಆ ನಿಯಮಗಳು ಅದೆಷ್ಟು ಪರಿಣಾಮಕಾರಿ ಯಾಗಿ ಜಾರಿಗೆ ಬರುತ್ತಿವೆಯೆಂಬುದು ಅದಕ್ಕಾಗಿಯೇ ನೇಮಕವಾಗಿರುವ ಕಾವಲು ಸಮಿತಿಗಳಿಗೆ ಮಾತ್ರ ವೇದ್ಯವಿರಬಹುದು. ಆದರೆ ಜನರ ಕಾಯಿಲೆ ಕಸಾಲೆ, ಅವುಗಳ ಚಿಕಿತ್ಸೆಗಳ ಜವಾಬ್ದಾರಿ ಹೊತ್ತಿರುವ ಹಳ್ಳಿಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು, ಜಿಲ್ಲಾ ಹಾಗೂ ನಗರಗಳ ದೊಡ್ಡ ಆಸ್ಪತ್ರೆಗಳ ದಿನನಿತ್ಯದ ವ್ಯವಹಾರ ದಾಖಲಾತಿ, ಮಾತುಕತೆಗಳೆಲ್ಲಾ ಇನ್ನೂ ಇಂಗ್ಲಿಷ್‌ಮಯವಾಗಿಯೇ ಇವೆ. ಅಲ್ಲೋ ಇಲ್ಲೋ ಕೆಲವು ಚೀಟಿ, ಫಾರಂ ಗಳನ್ನು ಕನ್ನಡದಲ್ಲಿ ಮುದ್ರಿಸಿರಬಹುದಷ್ಟೆ. ಆದರೆ ಅವುಗಳಲ್ಲಿರುವ ಮಾಹಿತಿ, ಸೂಚನೆ, ಸಲಹೆಗಳೆಲ್ಲಾ ಇಂಗ್ಲಿಷ್‌ನಲ್ಲೇ ಇರುವುದನ್ನು ಈಗಲೂ ನೋಡಬಹುದು. ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಜನರನ್ನು ಸಾಕ್ಷರಿಗಳನ್ನಾಗಿ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಅದರ ಉದ್ದೇಶ ಕೋರ್ಟು, ಕಛೇರಿ, ಆಸ್ಪತ್ರೆಗಳಲ್ಲಿ ಜರುಗುವ ವ್ಯವಹಾರಗಳು ಜನರಿಗೆ ತಿಳಿಯಬೇಕೆಂಬುದೇ ಆಗಿದೆ. ಮಿಕ್ಕೆಲ್ಲಾ ಇಲಾಖೆಗಳ ಆಗುಹೋಗುಗಳಿಗಿಂತಲೂ ಜನರ ಜೀವನ್ಮರಣದ ವಿಷಯಗಳ ವ್ಯವಹಾರಗಳು ನಡೆಯುವ ಆಸ್ಪತ್ರೆಗಳಲ್ಲಿ ಅವರಾಡುವ ಭಾಷೆಯ ಬಳಕೆಯಾಗಬೇಕಾದುದು ನ್ಯಾಯಸಮ್ಮತ. ಕಾಯಿಲೆ ಮತ್ತಿತರ ಆರೋಗ್ಯದ ವಿಷಯಗಳ ಸಾಹಿತ್ಯ ಕನ್ನಡದಲ್ಲಿ ಹೇರಳವಾಗಿ ಮೂಡಿಬರುವಂತಾದರೆ ಈ ಕಾರ್ಯ ಸುಗಮವಾಗುತ್ತದೆಂಬುದರಲ್ಲಿ ಅನುಮಾನವಿಲ್ಲ. ಇಂತಹ ಪರಿಸ್ಥಿತಿ ಏರ್ಪಡುವವರೆಗೂ ಅದೆಷ್ಟೇ ವೈದ್ಯರು, ಆರೋಗ್ಯ ಕಾರ್ಯಕರ್ತರು ಇಲ್ಲವೇ

ಆರೋಗ್ಯ ಸೇವಾ ಸೌಲಭ್ಯಗಳನ್ನೊದಗಿಸಿದ್ದರೂ, ಸಹಾ ಅವುಗಳ ಪರಿಪೂರ್ಣ ಉಪಯೋಗ ಸಾಮಾನ್ಯ ಜನರಿಗಾಗಲಾರದು.

ಮುಂದುವರಿದ ರಾಷ್ಟ್ರಗಳ ಜನರು ಹೆಚ್ಚು ಕಾಯಿಲೆ–ಕಸಾಲೆಗಳಿಂದ ನರಳದೇ ಆರೋಗ್ಯಕರ ಜೀವನ ನಡೆಸುವುದಕ್ಕೆ ಅವರಿಗೆ ಅಲ್ಲಿ ಲಭ್ಯವಿರುವ ವಿಶೇಷ ತರಹೆಯ ವೈದ್ಯರು, ಆಸ್ಪತ್ರೆಯ ಸೌಕರ್ಯ, ಮದ್ದು, ಯಂತ್ರೋಪ ಕರಣಗಳೇ ಕಾರಣವೆಂಬ ಭಾವನೆ ನಮ್ಮಲ್ಲನೇಕರಿಗಿರುವಂತಿದೆ. ಬಹುಪಾಲು ಅವನ್ನು ಅಲ್ಲಗಳೆಯುವಂತಿಲ್ಲ. ಆದರೆ ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವಲ್ಲಿ ಜನರ ಅರಿವು, ಸಹಕಾರಗಳಿರದಿದ್ದರೆ ಸಾಧನೆ ಅಷ್ಟರ ಮಟ್ಟಿಗೆ ಯಶಸ್ಸುಗಳಿಸುತ್ತಿರಲಿಲ್ಲವೆಂಬುದರಲ್ಲಿ ಸಂದೇಹವಿಲ್ಲ.

ಕನ್ನಡದಂಥ ನಮ್ಮ ದೇಶೀಯ ಭಾಷೆಗಳಲ್ಲಿ ವೈದ್ಯಕೀಯ ವಿಷಯಗಳನ್ನು ಸರಳಗೊಳಿಸಿ ಬರೆಯುವವರ ಅಭಾವವಿರುವುದು ಸರ್ವವೇದ್ಯ. ಕನ್ನಡದಲ್ಲಿ ಅಂತಹ ಕೃಷಿಯಲ್ಲಿ ತೊಡಗಿರುವ ಕೆಲವುಹೆಸರುಗಳನ್ನು ಈಗಾಗಲೇ ತಿಳಿಸಲಾಗಿದೆ. ವೈದ್ಯಕೀಯ ವಿಷಯಗಳ ಸಾಹಿತ್ಯವನ್ನು ರಚಿಸುವ ಆಸಕ್ತಿಯಿರುವ ಹಲವಾರು ವೈದ್ಯರು ಹಾಗೂ ವೈದ್ಯೇತರರ ಸಾಹಿತಿಗಳ ಲೇಖನ, ಪುಸ್ತಕಗಳು ಪ್ರಕಟವಾಗು ತ್ತಿರುವುದನ್ನು ಆಗಾಗ್ಗೆ ನೋಡುತ್ತಿರುತ್ತೇವೆ. ಆದರೆ ನಮ್ಮ ನಿರೀಕ್ಷೆ ಹಾಗೂ ಅವಶ್ಯಕತೆಗಳನ್ನು ಪೂರೈಸಲು ಅವು ಸಾಲದೆಂದೇ ಹೇಳಬಹುದು. ಹೀಗೆ ಬರೆಯುವವರ ಕೊರತೆಯ ಜೊತೆಗೆ, ಆ ಕೃಷಿಯಲ್ಲಿ ತೊಡಗಿರುವವರು, ಹಲವಾರು ಅಡಚಣೆಗಳನ್ನು ಎದುರಿಸುವ ಪರಿಸ್ಥಿತಿ ಇದೆ.

ಅವರು ಮೊಟ್ಟ ಮೊದಲು ಎದುರಿಸುವ ಸಮಸ್ಯೆಯೆಂದರೆ ವೈದ್ಯಕೀಯ ವಿಷಯಗಳ ತಾಂತ್ರಿಕ ಪದಗಳಿಗೆ ಸೂಕ್ತ ಕನ್ನಡದ ಪದಗಳ ಆಯ್ಕೆ. ವೈದ್ಯ ವಿಜ್ಞಾನದ ಪರಿಭಾಷೆ ಕನ್ನಡದಂತಹ ಪ್ರಾದೇಶಿಕ ಭಾಷೆಗಳಲ್ಲಿ ಇನ್ನೂ ಸ್ಪಷ್ಟವಾಗಿ ಮೂಡಿಬಂದಿಲ್ಲವೆನ್ನಬಹುದಾದರೂ ಆ ದಿಸೆಯಲ್ಲಿ ಸಾಕಷ್ಟು ಸಾಧನೆಗಳಾಗಿವೆ. ಈಗ್ಗೆ ಸುಮಾರು ಎರಡು ದಶಕಗಳಷ್ಟು ಹಿಂದೆಯೇ ಭಾರತದ ಇನ್ನಾವುದೇ ಭಾಷೆಯಲ್ಲಿ ನಿರ್ಮಾಣವಾಗದಂತಹ ಇಂಗ್ಲಿಷ್-ಕನ್ನಡ 'ವೈದ್ಯಪದ ಕೋಶ' ಪ್ರಕಟವಾಯಿತೆಂಬುದು ಕನ್ನಡಿಗರಿಗೆಲ್ಲಾ ಹೆಮ್ಮೆಯ ವಿಷಯ. ಅದರ

ನಿರ್ಮಾತೃ ಡಾ॥ ಶಿವಪ್ಪನವರು (ಈ ದಿನ ವೇದಿಕೆಯ ಮೇಲಿದ್ದು) ಜನಪ್ರಿಯ ವೈದ್ಯಕೀಯ ಸಾಹಿತ್ಯಕೃಷಿ ಇನ್ನೂ ಅವ್ಯಾಹತವಾಗಿ ನಡೆಯುತ್ತಲಿದೆ. ಪ್ರತಿಯೊಂದು ತಾಂತ್ರಿಕ ಪದಕ್ಕೂ ಪರ್ಯಾಯವಾಗಿ ಅಚ್ಚಕನ್ನಡ ಪದವನ್ನು ಟಂಕಿಸಬೇಕೆಂಬ ಡಾ॥ ಶಿವಪ್ಪನವರ ಉದ್ದೇಶ ಶ್ಲಾಘನೀಯವಾದರೂ ಅದೆಷ್ಟು ಸಮಂಜಸವೆನ್ನುವುದು ಈಗ ಪ್ರಶ್ನಾರ್ಹವಾಗಿದೆ. ವೈದ್ಯಕೀಯ ಸಾಹಿತ್ಯ ಬರಹಗಾರರು ಅವರು ಸೂಚಿಸಿದ ಎಲ್ಲಾ ಪರ್ಯಾಯ ಪದಗಳನ್ನು ಈಗ ಬಳಸಿಕೊಳ್ಳುತ್ತಿಲ್ಲವಾದರೂ ಅದೊಂದು ಅವರ ಉಪಯುಕ್ತ ಸಂಗಾತಿಯಾಗಿದೆಯೆಂಬುದರಲ್ಲಿ ಅನುಮಾನವಿಲ್ಲ. ಹಾಗೆ ನೋಡಿದರೆ ಇಂಗ್ಲೀಷನಲ್ಲಿರುವ ವೈದ್ಯಕೀಯ ತಾಂತ್ರಿಕ ಪದಗಳೆಲ್ಲವೂ ಇಂಗ್ಲೀಷ ಪದಗಳೇ ಆಗಿಲ್ಲ. ಅವುಗಳಲ್ಲಿ ಬಹುಪಾಲು ಲ್ಯಾಟಿನ್, ಗ್ರೀಕ್‌ನಂತಹ ಭಾಷೆಗಳಿಂದ ಬಂದಂತವು. ಅದೇ ರೀತಿ ಈಗ ಕನ್ನಡಕ್ಕೂ ಇಂಗ್ಲೀಷನಲ್ಲಿರುವ ನೂರಾರು ವೈದ್ಯಕೀಯ ತಾಂತ್ರಿಕ ಪದಗಳು ನಮಗರಿವಿಲ್ಲದಂತೆಯೇ ಸೇರಿಹೋಗಿವೆ. ಹರ್ನಿಯ, ಅಲ್ಸರ್, ಅಪೆಂಡಿಸೈಟಿಸ್, ಮಲೇರಿಯಾ, ಟೈಫಾಯಿಡ್ ವೈರಸ್‌ಗಳನ್ನು ಕನ್ನಡೀಕರಿಸಿ ಹೇಳಿದರೆ ಅರ್ಥ ಮಾಡಿಕೊಳ್ಳುವ ಕನ್ನಡಿಗರೂ ಬಹಳಷ್ಟು ಇರಲಾರರು. ಆದರಿಂದ ಅಂತಹ ಪದಗಳನ್ನು ಹಾಗೇ ಬಳಸಿಕೊಳ್ಳುವ ಪ್ರವೃತ್ತಿಯುಂಟಾಗುತ್ತಿರುವುದು ಆಶಾದಾಯಕ.

ಆದರೂ ಈ ದಿಸೆಯಲ್ಲಿ ಇನ್ನೊಂದು ಸಮಸ್ಯೆಯನ್ನು ಪ್ರಸ್ತಾಪಿಸಲೇಬೇಕಾಗಿದೆ. ಸ್ವಾತಂತ್ರಪೂರ್ವದಲ್ಲಿ ನಾಲ್ಕಾರು ಭಾಗಗಳಲ್ಲಿ ಹರಿದುಹಂಚಿಹೋಗಿದ್ದ ಕರ್ನಾಟಕದ ವಿವಿಧ ಪ್ರದೇಶಗಳ ಜನರಾಡುವ ಕನ್ನಡ ಭಾಷೆಯ ಶೈಲಿ, ಅರ್ಥ ನುಡಿಗಟ್ಟುಗಳು ಇನ್ನೂ ವಿಭಿನ್ನವಾಗಿಯೇ ಉಳಿದುಕೊಂಡಿವೆ. ತಾಂತ್ರಿಕ ಕ್ಷೇತ್ರದಲ್ಲೂ ಆ ವ್ಯತ್ಯಾಸವಿದ್ದೇ ಇದೆ. 'ಆಕ್ಸಿಜನ್' ಅನ್ನು ಒಂದು ಕಡೆಯುವರು ಆಮ್ಲಜನಕವೆಂದು ಕರೆದರೆ ಮತ್ತೊಂದು ಭಾಗದವರು ಪ್ರಾಣವಾಯುವೆನ್ನುತ್ತಾರೆ. ಕನ್ನಡಕಗಳಲ್ಲಿ ಬಳಸುವ ಗಾಜನ್ನು ಒಂದು ಕಡೆಯುವರು ದೃಷ್ಟಿಗಾಜಿನ ಬಿಲ್ಲೆ ಎಂದೆನ್ನಬಹುದು. ವಿವಿಧ ಭಾಗಗಳ ಲೇಖಕರೇ ಹೀಗೆ ಒಂದೇ ವಸ್ತುವಿಗೆ ಬೇರೆಬೇರೆ ಪದಗಳನ್ನು ಬಳಸಿದಾಗ ಓದುಗರ ಮನಸ್ಸಿನಲ್ಲೂ ಗೊಂದಲ ಉಂಟುಮಾಡಿದಂತಾಗುತ್ತದೆ. ಆದುದರಿಂದ ಕರ್ನಾಟಕದ ಎಲ್ಲಾ

ಬಾಗದ ಜನರೂ ಅರ್ಥಮಾಡಿಕೊಳ್ಳಬಹುದಾದ ಪರಿಭಾಷೆಯ ಹೊಸದೊಂದು ವೈದ್ಯಪದ ಕೋಶವೊಂದರ ತಯಾರಿ ಆಗಬೇಕಿದೆ.

ವೈದ್ಯಕೀಯ ವಿಷಯಗಳನ್ನು ಇಂಗ್ಲಿಷ್‌ನಲ್ಲೇ ಕಲಿತ ವೈದ್ಯರನೇಕರಿಗೆ ಕನ್ನಡದಲ್ಲಿ ಸಲೀಸಾಗಿ ಮಾತನಾಡುವುದಕ್ಕಾಗಲೀ, ಬರೆಯುವುದಕ್ಕಾಗಲೀ ಕಷ್ಟವಾಗುವುದು ಸ್ವಾಭಾವಿಕ. ಬಹುಶಃ ವಿಷಯಗಳನ್ನು ಇಂಗ್ಲಿಷನಲ್ಲಿ ಗ್ರಹಿಸಿ, ನಂತರ ಕನ್ನಡದಲ್ಲಿ ಬರವಣಿಗೆಗಿಳಿಸಬೇಕಾಗುತ್ತದೆ. ಬರಹಗಾರರು ಕನ್ನಡದಲ್ಲೇ ವಿಷಯಗಳನ್ನು ಗ್ರಹಿಸಿ, ಕನ್ನಡದಲ್ಲಿ ಬರೆಯುವಂತ ವಾತಾವರಣವಿನ್ನೂ ಏರ್ಪಾಡಾಗಬೇಕಾಗಿದೆ. ಬರೆಯುವ ಆಕಾಂಕ್ಷೆ ಇರುವ ವೈದ್ಯರನೇಕರಿಗೆ ಸಾಹಿತ್ಯದ ಭಾಷೆ, ಶೈಲಿ ಮತ್ತು ವ್ಯಾಕರಣ ನಿಯಮಗಳ ಸಾಕಷ್ಟು ಪರಿಚಯವೂ ಇರಲಾರದು. ಹಾಗೆಯೇ ಸೃಜನಶೀಲ ಲೇಖಕರು ವೈದ್ಯಕೀಯ ವಿಷಯಗಳನ್ನು ಬರೆಯಲು ಆ ವಿಷಯಗಳಲ್ಲಿ ಅವರಿಗೆ ಆಳ ಹಾಗೂ ಪರಿಪೂರ್ಣ ಜ್ಞಾನವಿರುವುದು ಅಪರೂಪವೇ. ಈ ಎರಡೂ ಬಗೆಯ ಬರಹಗಾರರೂ ತಮ್ಮ ಕ್ಷೇತ್ರಗಳಿಗೆ ಸಂಬಂಧವಲ್ಲದ ವಿಷಯಗಳನ್ನು ಆಳವಾಗಿ ಅಭ್ಯಾಸಮಾಡುವುದಲ್ಲದೇ, ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವಂತಾದರೆ, ಅವರಿಂದ ಪರಿಪಕ್ವವಾದ ವೈದ್ಯಕೀಯ ಸಾಹಿತ್ಯ ಮೂಡಿ ಬರುವುದರಲ್ಲಿ ಸಂದೇಹವಿಲ್ಲ.

ಬರೆದ ಲೇಖನ ಅಥವಾ ಪುಸ್ತಕಗಳನ್ನು ಪ್ರಕಟಿಸುವ ಸಮಸ್ಯೆ ಎಲ್ಲಾ ಪ್ರಕಾರದ ಸಾಹಿತ್ಯ ಹಾಗೂ ಸಾಹಿತಿಗಳಿಗಿರುವುದಾದರೂ, ವಿಜ್ಞಾನ, ಮತ್ತು ವೈದ್ಯಕೀಯದವರಿಗೆ ಅದೊಂದು ಅತ್ಯಂತ ಪ್ರಮುಖ ಅಡಚಣೆಯೆಂದೇ ಹೇಳಬಹುದು. ಬಿಡಿಲೇಖನಗಳನ್ನು ಕೆಲವೇ ಕೆಲವು ನಿಯತಕಾಲಿಕಗಳು ಮಾತ್ರ ಪ್ರಕಟಿಸುತ್ತಿವೆ. ಇನ್ನು ವಿಷಯಾಧಾರಿತ ಪುಸ್ತಕಗಳ ಪ್ರಕಟಣೆಯ ಸಮಸ್ಯೆಗಳಂತೂ ಹೇಳತೀರದು. ಬಹುಪಾಲು ಖಾಸಗಿ ಪ್ರಕಾಶಕರು ತಮಗೆ ಧಕ್ಕಬಹುದಾದ ಲಾಭಾಂಶಗಳ ಕಡೆ ಗಮನವಿಟ್ಟು ಪ್ರಕಟಣೆಯ ನಿರ್ಧಾರ ಕೈಗೊಳ್ಳುತ್ತಾರೆ. ವಿಶ್ವವಿದ್ಯಾಲಯ, ಪ್ರಸಾರಾಂಗ, ಸಾಹಿತ್ಯ ಪರಿಷತ್ತು, ಸಾಹಿತ್ಯ ಅಕಾಡಮಿಗಳಂತ ಸ್ವಾಯತ್ತ ಸಂಸ್ಥೆಗಳ ಧೋರಣೆ ಏನೆಂಬುದು ಸ್ಪಷ್ಟವಾಗಿ ತಿಳಿಯುತ್ತಿಲ್ಲ. ಇಂಥಾ ಎಲ್ಲಾ ಕಾರಣಗಳಿಂದಾಗಿ ಈ ಕ್ಷೇತ್ರಗಳಲ್ಲಿ ಹೊಸದಾಗಿ

ಬರೆಯಲು ಪ್ರಾರಂಭಿಸಿದವರ ಪಾಡಂತೂ ಹೇಳತೀರದು. ಹಿರಿಯ ಹಾಗೂ ಸಾಹಿತ್ಯ ರಚನೆಯಲ್ಲಿ ಹೆಸರು ಮಾಡಿದ ಕೆಲವರಿಗೆ ಮಾತ್ರ ಈ ದಿಸೆಯಲ್ಲಿ ಒಳ್ಳೆಯ ಅವಕಾಶಗಳು ದೊರೆಯುತ್ತವೆ. ವೈದ್ಯಕೀಯ ಮತ್ತು ಆರೋಗ್ಯ ನಿಯಮಗಳ ಸಾಹಿತ್ಯ ಪ್ರಚಾರ-ಸರ್ಕಾರ, ಸಾರ್ವಜನಿಕ ಆರೋಗ್ಯ, ಹಾಗೂ ಶಿಕ್ಷಣ ಇಲಾಖೆಗಳೇ ಅಲ್ಲದೇ ವಿಶ್ವವಿದ್ಯಾಲಯಗಳು, ತಾವಾಗಿಯೇ, ತೊಡಗಿಸಿಕೊಳ್ಳಬೇಕಾದ ಆರೋಗ್ಯ ಶಿಕ್ಷಣದ ಆದ್ಯ ಕರ್ತವ್ಯವಾಗಿರುವುದನ್ನು ಅವರಾರೂ ಗಣನೆಗೆ ತೆಗೆದುಕೊಂಡಂತಿಲ್ಲ. ಅವರ ಕಾರ್ಯಗಳಿಗೆ ಈ ತರಹೆಯ ಸಾಹಿತ್ಯ ಹೆಚ್ಚಿನ ಇಂಬು ಕೊಡುವುದರಿಂದ ಅವರು ಹೆಚ್ಚು ಹೆಚ್ಚಾಗಿ ಜನಪ್ರಿಯ ವೈದ್ಯಕೀಯ ಸಾಹಿತ್ಯ ರಚನೆಯನ್ನು ಪ್ರೋತ್ಸಾಹಿಸಿ ಪ್ರಕಟಿಸುವಂತೆ ಮಾಡಬೇಕಿದೆ.

ಜನಪ್ರಿಯ ವೈದ್ಯಕೀಯ ಸಾಹಿತ್ಯ ಪ್ರಕಾರಗಳು :

೧. **ಪತ್ರಿಕಾ ಬರಹಗಳು :** ಪತ್ರಿಕಾ ಮಾಧ್ಯಮದಲ್ಲಿ ಪ್ರಕಟವಾದುವ ಬರಹಗಳು ಅತಿ ಹೆಚ್ಚು ಜನಸಮೂಹವನ್ನು ಸುಲಭವಾಗಿ ತಲುಪುತ್ತವೆ. ವೈದ್ಯಕೀಯ ಮತ್ತು ಆರೋಗ್ಯದ ವಿಷಯಗಳನ್ನು ಜನಪ್ರಿಯಗೊಳಿಸುವಲ್ಲಿ ಇವು ಪ್ರಮುಖ ಪಾತ್ರವಹಿಸಬಹುದು. ಕೆಲವು ನಿಯತಕಾಲಿಕ ಪತ್ರಿಕೆಗಳು ಈ ದಿಸೆಯಲ್ಲಿ ಸಹಕರಿಸುತ್ತಿರುವುವಾದರೂ ಬಹುಪಾಲು ಈ ಬಗೆಗೆ ದಿವ್ಯ ನಿರ್ಲಕ್ಷ್ಯವನ್ನು ತಾಳುತ್ತವೆಯೆಂದರೆ ಅತಿಶಯೋಕ್ತಿಯಲ್ಲ. ನಿಜ, ಅವುಗಳಿಗೂ ತಮ್ಮದೇ ಆದ ಧ್ಯೇಯಧೋರಣೆ, ಹಾಗೂ ಸ್ಥಳಾವಕಾಶಗಳ ಇತಿಮಿತಿಗಳಿರುತ್ತವೆ. ಹಾಗೆ ಪ್ರಕಟವಾದ ಲೇಖನಗಳು ಆಯಾ ಕಾಲಕ್ಕೆ ಪ್ರಸ್ತುತವೆನ್ನಬಹುದಾದ ಕೆಲವು ವಿಷಯಗಳ ಬಗೆಗೆ ಆಸಕ್ತರ ಕುತೂಹಲ ಕೆರಳಿಸುವುದರಲ್ಲಿ ಯಶಸ್ವಿಯಾಗುತ್ತವಷ್ಟೆ. ಆದರೆ ಅಂತಹ ವಿಷಯದ ಬಗೆಗೆ ವಿವರವಾದ ಮಾಹಿತಿಗಳನ್ನು ಪಡೆದು, ಅನುಮಾನಗಳನ್ನು ಪರಿಹರಿಸಿಕೊಳ್ಳಲು ಓದುಗರು ಇತರ ಮೂಲಗಳನ್ನರಸಬೇಕಾಗುತ್ತದೆ. ಕನ್ನಡದಲ್ಲಿ ಅಂತಹ ಮೂಲಗಳ ಕೊರತೆಯೂ ಇದೆ. ವೈದ್ಯಕೀಯ ಮತ್ತು ಆರೋಗ್ಯದ ವಿಷಯಗಳ ಪ್ರಕಟಣೆಗೇ ಮೀಸಲಾದ ನಿಯತಕಾಲಿಕ ಪ್ರತಿಕೆಗಳು ಅಂತಹ ಕೊರತೆಗಳನ್ನು ಸ್ವಲ್ಪಮಟ್ಟಿಗೆ ನಿವಾರಿಸಬಹುದು. ಪ್ರಸ್ತುತ ಕನ್ನಡದಲ್ಲಿ ಕೇವಲ ಬೆರಳೆಣಿಕೆಯಷ್ಟು ಅಂತಹ

ನಿಯತಕಾಲಿಕ ಪತ್ರಿಕೆಗಳಿರುವುದಾದರೂ, ಅವುಗಳಿಂದ ನಿರೀಕ್ಷಿಸುವಷ್ಟು ಪ್ರಗತಿಯಾಗುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ವಿಶ್ವವಿದ್ಯಾನಿಲಯಗಳು, ಅದರಲ್ಲೂ ಈಗ ಅಸ್ತಿತ್ವಕ್ಕೆ ಬರುತ್ತದೆಯೆನ್ನಲಾಗಿರುವ ವೈದ್ಯಕೀಯ ವಿಶ್ವವಿದ್ಯಾನಿಲಯ ಈ ದಿಸೆಯಲ್ಲಿ ಪ್ರಮುಖ ಪಾತ್ರವಹಿಸಬೇಕಾಗುತ್ತದೆ. ಅದಕ್ಕೊಂದು ಪ್ರಸಾರಾಂಗದ ಅವಶ್ಯಕತೆ, ಇತರೆ ವಿಶ್ವವಿದ್ಯಾನಿಲಯಗಳಿಗಿಂತಲೂ ಹೆಚ್ಚಾಗಿರುತ್ತದೆ ಎನ್ನಬಹುದು. ಜೊತೆಗೆ ಆರೋಗ್ಯ ಇಲಾಖೆ ಇಂಡಿಯನ್ ಮೆಡಿಕಲ್ ಅಸೋಷಿಯೇಷನ್, ಸಾಹಿತ್ಯ ಪರಿಷತ್ತು ಮತ್ತು ಅಕಾಡಮಿಗಳಂತ ಸಂಸ್ಥೆಗಳೂ ಸಹಾ ಈ ಬಗೆಗೆ ಕಾರ್ಯೋನ್ಮುಖವಾಗಬಹುದು.

೨. **ಆಕಾಶವಾಣಿ, ದೂರದರ್ಶನದ ಬರಹಗಳು :** ಎಲೆಕ್ಟ್ರಾನಿಕ್ ಮಾಧ್ಯಮಗಳೆಂದು ಜನಪ್ರಿಯವಾಗಿರುವ ಇವುಗಳ ಮೂಲಕ ಜ್ಞಾನಪ್ರಸಾರ ತ್ವರಿತಗತಿಯಲ್ಲಿ ಜನರನ್ನು ತಲುಪುತ್ತದೆ. ಜೊತೆಗೆ ಅನಕ್ಷರಸ್ಥರೂ ಸಹಾ ಅವುಗಳಿಂದ ಪ್ರಸಾರವಾಗುವ ಶ್ರವ್ಯ ಮತ್ತು ದೃಶ್ಯಗಳನ್ನು ತಮ್ಮ ಮನಸ್ಸಿನಲ್ಲಿ ಹಿಡಿದಿಟ್ಟುಕೊಳ್ಳುವಲ್ಲಿ ಸಫಲರಾಗುತ್ತಾರೆ. ಅವರ ಕುತೂಹಲವನ್ನು ಕೆರಳಿಸಿ, ಹೆಚ್ಚು ಆಲೋಚಿಸದೆ, ಪ್ರಶ್ನೆಕೇಳದೆ ಒಪ್ಪುವಂತೆ ಮಾಡುವ ಸಾಮರ್ಥ್ಯ ಈ ಮಾಧ್ಯಮಗಳಿಗಿವೆ. ಆದುದರಿಂದ ಇಂತಹ ಸಾಹಿತ್ಯ ನಿರ್ಮಾಣ ಮಾಡುವವರ ಜವಾಬ್ದಾರಿ ಹೆಚ್ಚು ಗುರುತರವಾಗಿರುತ್ತದೆ. ಇಲ್ಲಿ ಅತಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ ಸಮಯದ ಮಿತಿ. ತಮಗೆ ನಿಗದಿಪಡಿಸಿದ ಕಾಲದ ಮಿತಿಯಲ್ಲಿ ಪ್ರತಿಪಾದಿಸಬೇಕಾಗಿರುವ ವಿಷಯದ ಎಲ್ಲಾ ವಿವರಗಳನ್ನು ಅಚ್ಚುಕಟ್ಟಾಗಿ ನಿರೂಪಿಸುವ ಜಾಣ್ಮೆಯನ್ನು ಈ ತರಹ ಬರಹಗಾರ ಹೊಂದಿರಬೇಕಾಗುತ್ತದೆ.

೩. **ಪಠ್ಯಪುಸ್ತಕಗಳು :** ವೈದ್ಯಕೀಯ ಹಾಗೂ ಇಂಜನಿಯರಿಂಗ್ ಗಳಂತಹ ತಾಂತ್ರಿಕ ವಿಷಯಗಳ ಬೋಧನೆಯಲ್ಲಿ ಕನ್ನಡ ಅಥವಾ ಇನ್ನಾವುದೇ ಪ್ರಾಂತೀಯ ಭಾಷೆಯ ಮಾಧ್ಯಮವನ್ನು ಜಾರಿಗೆ ತರುವುದು ಸಾಧ್ಯವೇ ಮತ್ತು ಸರಿಯಾದುದೇ ಎಂಬ ಬಗೆಗೆ ಜಿಜ್ಞಾಸೆಗಳು ನಡೆಯುತ್ತಲೇ ಇವೆ. ಈ ದಿಸೆಯಲ್ಲಿ ವಿವಿಧ ಹಿತಾಸಕ್ತರ ಅಭಿಪ್ರಾಯಗಳೇನೇ ಇರಬಹುದಾದರೂ ತಾಂತ್ರಿಕ

ವಿಷಯಗಳನ್ನು ಹಿಂದಿನಿಂದಲೂ ತಮ್ಮ ತಮ್ಮ ಭಾಷೆಗಳಲ್ಲೇ ಬೋಧಿಸುತ್ತಿರುವ ಮುಂದುವರಿದ ಜಪಾನು, ಜರ್ಮನಿ, ರಷ್ಯಾದಂತ ರಾಷ್ಟ್ರಗಳ ಸಾಧನೆಗಳು ನಮ್ಮ ಕಣ್ಣು ತೆರೆಸುವಂತಿವೆ. ಅಂದರೆ, ನಮ್ಮಲ್ಲೂ ಮೆಡಿಕಲ್ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮವನ್ನು ಕೂಡಲೇ ಜಾರಿಗೆ ತರಬೇಕೆಂಬ ಪ್ರತಿಪಾದನೆ ನನ್ನದಲ್ಲ. ಅದನ್ನು ಕೂಡಲೇ ಜಾರಿಗೆ ತರುವಂತಹ ಅವಶ್ಯಕತೆ ಕೆಲವು ವೈದ್ಯಕೀಯ ಕ್ಷೇತ್ರಗಳಲ್ಲಿದೆ ಎಂಬ ಬಗೆಗೆ ಎಲ್ಲರ ಗಮನ ಸೆಳೆಯುವುದು ನನ್ನ ಉದ್ದೇಶವಾಗಿದೆ. ವಿವಿಧ ಆರೋಗ್ಯ ಸೇವಾ ಸಂಘಟನೆಗಳೂ, ಆಸ್ಪತ್ರೆ ಪ್ರಯೋಗಶಾಲೆ ವೈದ್ಯಕೀಯ ಉಪಕರಣಗಳನ್ನು ಉಪಯೋಗಿಸುವ ಜವಾಬ್ದಾರಿಯ ಸಹಾಯಕ ಸಿಬ್ಬಂದಿಗಳ ತರಬೇತಿ ಕೇಂದ್ರಗಳಲ್ಲಿ ಇದೀಗ ಅತ್ಯಂತ ಜರೂರಾಗಿ ಜಾರಿಗೆ ತರಬೇಕಾಗಿರುವ ಕೆಲಸ. ದಾದಿಯರು, ಸೂಲಗಿತ್ತಿಯರು ; ವಿವಿದೋದ್ದೇಶ, ಆರೋಗ್ಯ ಕಾರ್ಯಕರ್ತರು, ನೇತ್ರಪರೀಕ್ಷಕರು, ಎಕ್ಸ್‌ರೇ ಯಂತ್ರದ ತಾಂತ್ರಿಕ ಸಹಾಯಕರು, ಲ್ಯಾಬೋರೇಟರಿ ಕೆಲಸನಿರತರು, ಫಾರ್ಮಸಿ ತರಬೇತುದಾರರು ; ಇ.ಸಿ.ಜಿ., ಅಲ್ಟ್ರಾಸೌಂಡ್ ಸಿ. ಟಿ. ಸ್ಕ್ಯಾನ್‌ಗಳಂತ ಯಂತ್ರ ಸ್ಥಾವರಗಳಲ್ಲಿನ ಸಹಾಯಕ ಸಿಬ್ಬಂದಿಗಳ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಮಟ್ಟದ್ದಾಗಿರುತ್ತದೆ. ಕರ್ನಾಟಕದ ಅಭ್ಯರ್ಥಿಗಳೆಲ್ಲರಿಗೂ ಈ ಹಂತಗಳವರೆಗೆ ಕನ್ನಡ ಮಾಧ್ಯಮದಲ್ಲೇ ಬೋಧನೆಯಾಗಿರುತ್ತದೆ. ಆದರೆ ಅವರು ಇಂತಹ ಕೋರ್ಸುಗಳಿಗೆ ಸೇರಿದಾಗ ಅವರ ಬೋಧನಾ ಮಾಧ್ಯಮ ಏಕಾಏಕಿ ಇಂಗ್ಲಿಷ್ ಆಗಿ ಬರುವ ವಿಪರ್ಯಾಸವನ್ನು ಅವರು ಎದುರಿಸಬೇಕಾಗುತ್ತದೆ. ಅವರ ಕಲಿಕೆಯ ವಿಷಯಗಳು ಅಂಗರಚನಾಶಾಸ್ತ್ರದಿಂದ ಹಿಡಿದು ಎಕ್ಸ್‌ರೇ ಯಂತ್ರಗಳ ಕಾರ್ಯಭಾರದವರೆಗೂ ವಿಸ್ತರಿಸಿರುತ್ತದೆ. ಈ ಎಲ್ಲಾ ವಿಷಯಗಳಾಧಾರಿತ ಕನ್ನಡ ಪಠ್ಯಪುಸ್ತಕಗಳಿಲ್ಲದಿರುವುದು, ಅವುಗಳನ್ನು ಬೋಧಿಸುವ ಅಧ್ಯಾಪಕರು ಮತ್ತು ಕಲಿಯುವ ವಿದ್ಯಾರ್ಥಿಗಳಿಬ್ಬರಿಗೂ ಪ್ರಯಾಸದ ಕೆಲಸವಾಗಿದೆ. ಕರ್ನಾಟಕದಲ್ಲಿರುವ ಈ ತರಹ ಬಹುಪಾಲು ವಿದ್ಯಾಸಂಸ್ಥೆಗಳಿಗೆ ನಮ್ಮ ನೆರೆಯ ಪ್ರಾಂತಗಳಿಂದಲೇ ಹೆಚ್ಚಿನ ಅಭ್ಯರ್ಥಿಗಳು ಬರುವ ಪರಿಸ್ಥಿತಿ ಇದ್ದು ಕನ್ನಡ ಮಾಧ್ಯಮವನ್ನು ಜಾರಿಗೊಳಿಸುವಲ್ಲಿ ಪಟ್ಟಭದ್ರಹಿತಾಸಕ್ತರ ಕೈವಾಡವನ್ನೂ ಅಲ್ಲಗಳೆಯುವಂತಿಲ್ಲ. ಆದುದರಿಂದ ಇಂತಹ ವಿಷಯಗಳಾಧಾರಿತ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವುದರಲ್ಲಿ ನಾವು ಈಗಿಂದೀಗಲೇ ಕಾರ್ಯ ಪ್ರವೃತ್ತರಾಗ

ಬೇಕಾಗಿದೆ. ಇಲ್ಲೂ ವೈದ್ಯಸಾಹಿತಿಗಳು, ಆರೋಗ್ಯ ಇಲಾಖೆ ಹಾಗೂ ವೈದ್ಯ ವಿಶ್ವವಿದ್ಯಾನಿಯಗಳು ತಮ್ಮ ಕರ್ತವ್ಯಗಳನ್ನು ಈಡೇರಿಸುವಂತೆ ಒತ್ತಾಯ ತರಬೇಕಾಗುತ್ತದೆ. ಇದೇ ರೀತಿಯಲ್ಲಿ ಕನ್ನಡ ಮಾಧ್ಯಮವಿರುವ ಶಾಲಾ ಕಾಲೇಜುಗಳಲ್ಲಿ ವೈದ್ಯಕೀಯ ಆರೋಗ್ಯದ ನಿಯಮಗಳ ಬೋಧನೆಗೆ ಅಗತ್ಯ ವಿರುವ ಲೇಖನಗಳು, ಪಠ್ಯಪುಸ್ತಕಗಳು ಮತ್ತಿತರ ಸಾಹಿತ್ಯ ಪ್ರಕಾರಗಳು ರಚನೆ ಯಾಗಬೇಕಾಗಿದೆ.

೪. **ಮಹಿಳಾ ಮತ್ತು ಶಿಶು ಸಾಹಿತ್ಯ** : ವೈದ್ಯಕೀಯ ಮತ್ತು ಆರೋಗ್ಯದ ಕ್ಷೇತ್ರಗಳಲ್ಲಿ ಮಹಿಳೆಯರ ಮತ್ತು ಮಕ್ಕಳಿಗೆ ಸಂಬಂಧಿಸಿದ ಪ್ರತ್ಯೇಕ ಸಮಸ್ಯೆಗಳಿವೆ. ಅಂತಹ ಸಾಹಿತ್ಯ ರಚನೆಗೆ ಆ ಕ್ಷೇತ್ರದಲ್ಲಿ ಅಪಾರ ಅನುಭವ, ಅನುಕಂಪದ ಹಿನ್ನೆಲೆಯಿರುವುದು ಅವಶ್ಯಕ. ಕನ್ನಡದಲ್ಲಿ ದಿ॥ ಅನುಪಮಾ ನಿರಂಜನ ಮತ್ತು ಡಾ॥ ಸಿ. ಅನ್ನಪೂರ್ಣಮ್ಮ ಅವರುಗಳು ಉತ್ತಮ ಲೇಖನ ಮತ್ತು ಪುಸ್ತಕಗಳನ್ನು ಬರೆದು ಖ್ಯಾತಿ ಗಳಿಸಿದವರೆಂದು ಗುರ್ತಿಸಬಹುದು. ಅನುಪಮಾ ಅವರು ಈ ವಿಷಯುಗಳ ಬಗೆಗೆ ಬರೆದ ಕೆಲವು ಪುಸ್ತಕಗಳು ೧೦–೧೫ ಆವೃತ್ತಿಗಳನ್ನು ಕಂಡಿವೆಯೆಂದರೆ ಈ ಪ್ರಕಾರಗಳಲ್ಲಿ ಬರವಣಿಗೆ ಮಾಡಲು ಇನ್ನೂ ವಿಪುಲ ಅವಕಾಶಗಳಿವೆಯೆನ್ನುವುದರಲ್ಲಿ ಸಂದೇಹವಿಲ್ಲ.

ಬಾಲ್ಯದಲ್ಲಿ ಕಲಿತ ವಿದ್ಯೆ, ರೂಡಿಸಿಕೊಂಡ ಅಭ್ಯಾಸಗಳು ವ್ಯಕ್ತಿಯ ಜೀವನ ಪರ್ಯಂತ ಉಳಿದುಕೊಳ್ಳುವುದನ್ನು ನೋಡುತ್ತೇವೆ. ಎಳೆಯ ವಯಸ್ಸಿನಲ್ಲೇ ಆರೋಗ್ಯ ರಕ್ಷಣೆಯ ಬಗ್ಗೆ ಸರಿಯಾದ ಮಾಹಿತಿ ನೀಡುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ಆ ವಯಸ್ಸಿನವರಿಗೆ ಆಕರ್ಷಣೆಯಾಗುವ ಭಾಷೆ, ಶೈಲಿ ಯಲ್ಲಿ ಸರಳ ಶಿಸುಸಾಹಿತ್ಯದ ರಚನೆ ಮುಂದಿನ ಜನಾಂಗದ ಸ್ವಾಸ್ಥ್ಯವನ್ನು ಕಾಪಾಡುವುದರಲ್ಲಿ ಮಹತ್ತರದ ಪಾತ್ರವಹಿಸಬಹುದು. ಕತೆ, ಕವನ, ಲಾವಣಿ ಕಿರುನಾಟಕ, ಜೀವನಚರಿತ್ರೆಗಳ ರೂಪದಲ್ಲಿ ಇಂತಹ ಸಾಹಿತ್ಯವನ್ನು ನಿರ್ಮಾಣ ಮಾಡಬೇಕಾಗುತ್ತದೆ.

೫. **ನವಸಾಕ್ಷರರಿಗೆ :** ಇತ್ತೀಚಿನ ವರ್ಷಗಳಲ್ಲಿ ವಯಸ್ಕರಿಗೆ ಅಕ್ಷರಾ ಭ್ಯಾಸ ಮಾಡಿಸಿ ಅವರಿಗೆ ಹೊಸದೊಂದು ಪ್ರಪಂಚವನ್ನೇ ಪರಿಚಯಿಸುವ

ಪ್ರಯತ್ನಗಳು ಬಿರುಸಿನಿಂದ ನಡೆಯುತ್ತಿವೆ. ಬಹುಪಾಲು ಜನರ ಅಜ್ಞಾನ, ಅಂದಶ್ರದ್ಧೆ ಅದರಲ್ಲೂ ಕಾಯಿಲೆಗಳ ಬಗೆಗೆ ಇರುವ ಮೂಢನಂಬಿಕೆಗಳಿಂದ ಅವರ ಅವಿದ್ಯಾವಂತ ಪರಿಸ್ಥಿತಿಯೇ ಕಾರಣವೆನ್ನುವುದರಲ್ಲಿ ಸಂದೇಹವಿಲ್ಲ. ಹೀಗೆ ನವಸಾಕ್ಷರಿಗಳಾದವರಿಗೆ ಸರಳ ಶೈಲಿಯಲ್ಲಿ ಕಾಯಿಲೆಗಳು ವಿಪುಲ ಅವಕಾಶಗಳು ಈಗಿವೆ. ವೈದ್ಯಬರಹಗಾರರು ಈ ದಿಸೆಯಲ್ಲಿ ಹೆಚ್ಚಿನ ಪ್ರಯತ್ನಗಳಲ್ಲಿ ತೊಡಗುವುದು ಅತ್ಯವಶ್ಯಕ. ಕಳೆದ ವರ್ಷ ಕನ್ನಡ ಸಾಹಿತ್ಯ ಪರಿಷತ್ತಿನವರು ಆರಂಭಿಸಿದ "ನವಸಾಕ್ಷರ ಪುಸ್ತಕದ ಮಾಲೆ"ಯಲ್ಲಿ ಆರೋಗ್ಯದ ವಿಷಯಗಳ ಬಗೆಗೆ ಆರು ಕಿರು ಹೊತ್ತಗೆಗಳನ್ನು ಪ್ರಕಟಿಸಿರುವುದು ಸ್ತುತ್ಯಾರ್ಹ. ಈ ದಿಸೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತೇ ಅಲ್ಲದೇ, ಇಂಡಿಯನ್ ಮೆಡಿಕಲ್ ಅಸೋಸಿಯೇಷನ್‌ನಂತಹ ಸಂಘಸಂಸ್ಥೆಗಳು ವೈದ್ಯಬರಹಗಾರರಿಗೆ ಪ್ರೋತ್ಸಾಹ ನೀಡುವಂತಾಗಬೇಕು.

೬. **ಕಿರು ಹೊತ್ತಗೆಗಳು :** ಜನರು ಅನುಭವಿಸುವ ದಿನನಿತ್ಯದ ಕಾಯಿಲೆಗಳು, ಅಂಟುಜಾಡ್ಯಗಳು, ಆರೋಗ್ಯದ ನಿಯಮಪಾಲನೆ ಮುಂತಾಗಿ ಹಲವು ವಿಷಗಳ ಬಗೆಗೆ ಕಿರುಹೊತ್ತಗೆಗಳನ್ನು (ಪಾಕೆಟ್ ಬುಕ್ಸ್) ಕಡಿಮೆ ಬೆಲೆಗೆ ಪ್ರಕಟಿಸುವಂತಾದರೆ, ಅವರಲ್ಲಿ ಕೆಲವು ಕಾಯಿಲೆಗಳು ಬರುವುದನ್ನು ತಡೆಗಟ್ಟಲು ಸಾಧ್ಯವಾಗಬಹುದಲ್ಲದೇ ಕಾಯಿಲೆಗಳು ಬಂದಾಗ ಅನುಸರಿಸಬೇಕಾದ ರೀತಿನೀತಿಗಳನ್ನು ಮನದಟ್ಟು ಮಾಡಲು ಸಹಕಾರಿಯಾಗುತ್ತದೆ. ನಮ್ಮ ದೇಶದ ಬಹಳಷ್ಟು ಪ್ರದೇಶಗಳಲ್ಲಿ ವೈದ್ಯರು ಹಾಗೂ ವೈದ್ಯಸಿಬ್ಬಂದಿಯವರ ಅಭಾವಿರುವ ಪರಿಸ್ಥಿತಿಯಲ್ಲಿ ಅಂತಹ ಹಳ್ಳಿಗಳಲ್ಲಿರುವ ಒಬ್ಬರಿಗಾದರೂ ಈ ತರಹೆಯ ಪುಸ್ತಕಗಳ ಪರಿಚಯವಿದ್ದರೆ ತುರ್ತುಪರಿಸ್ಥಿಗಳಲ್ಲಿ ಅವರಿಂದ ಸಾಕಷ್ಟು ಪ್ರಥಮ ಚಿಕಿತ್ಸೆಯಾದರೂ ದೊರೆಯುವಂತೆ ಮಾಡಲು ಸಾಧ್ಯ. ಈ ದಿಸೆಯಲ್ಲಿ ಮೆಕ್ಸಿಕೋದ ಸ್ವತಃ ವೈದ್ಯನಾಗಿರದ ಡೇವಿಡ್ ವರ್ನರ್ ಎಂಬುವವರು ರಚಿಸಿದ WHERE THERE IS NO DOCTOR ಎಂಬ ಸಾಮಾನ್ಯ ಕಾಯಿಲೆಗಳ ವಿವರಣೆ ನೀಡುವ ಕೈಪಿಡಿ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಂದಲೇ ಜನಸಾಮಾನ್ಯರು ಇಲ್ಲವೇ ಆರೋಗ್ಯ ಕಾರ್ಯಕರ್ತರು ಚಿಕಿತ್ಸೆ ಮಾಡಲು ಮಾರ್ಗದರ್ಶನ ನೀಡುವಲ್ಲಿ ಪ್ರಪಂಚಾದ್ಯಂತ ಜನಪ್ರಿಯವಾಗಿ ಹಲವಾರು ಭಾಷೆಗಳಿಗೆ ಭಾಷಾಂತರಗೊಂಡಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

ವೈದ್ಯಕೀಯ ಹಾಗೂ ಆರೋಗ್ಯದ ವಿಷಯಗಳ ಬಗೆಗೆ ವ್ಯಾಪಕ ಮಾಹಿತಿ ನೀಡುವ ವಿಶ್ವಕೋಶ (ENCYCLOPEDIA) ದ ನಿರ್ಮಾಣ ವೈದ್ಯಲೇಖಕರಿಗೇ ಅಲ್ಲದೇ ಜನಸಾಮಾನ್ಯರಿಗೂ ಉಪಯುಕ್ತವಾಗುತ್ತದೆ.

೭. **ಭಾಷಾಂತರ :** ಭಾಷಾಂತರವೂ ಸಾಹಿತ್ಯದ ಒಂದು ಒಳ್ಳೆಯ ಪ್ರಕಾರವೇ ಸಮರ್ಥರ ಕೈಯಲ್ಲಿ ಅದು ಉತ್ತಮ ಕಲೆಯೂ ಆಗಬಹುದು. ಕೇಂದ್ರ ಸಾಹಿತ್ಯ ಅಕಾಡಮಿ ಭಾಷಾಂತರ ಕೃತಿಗಳಿಗೆ ಪುರಸ್ಕಾರ ನೀಡುವ ನಿರ್ಧಾರ ಮಾಡಿರುವುದು ಇತರ ಸಾಹಿತ್ಯ ಪ್ರಕಾರಗಳ ಜೊತೆ ಅದರ ಸ್ಥಾನಮಾನವನ್ನು ಗುರುತಿಸುವಂತಾಗಿದೆ. ಕಾಯಿಲೆಗಳ ಉಗಮ, ಗುಣಲಕ್ಷಣ, ಗುರುತಿಸುವ ಬಗೆ, ಚಿಕಿತ್ಸಾ ವಿಧಾನಗಳ ಹಿಂದಿನ ತತ್ವ ಮತ್ತು ಅವುಗಳನ್ನು ತಡೆಗಟ್ಟಬಹುದಾದ ಕ್ರಮಗಳ ಬಗೆಗೆ ಇಂಗ್ಲಿಷ್, ಫ್ರೆಂಚ್, ಜರ್ಮನ್, ರಷ್ಯನ್, ಭಾಷೆಗಳಲ್ಲಿ ಜನಪ್ರಿಯ ವೈದ್ಯಕೀಯ ಸಾಹಿತ್ಯ ಪ್ರಕಾರಗಳು ಮೂಡಿ ಬರುತ್ತಿವೆ. ಪತ್ರಿಕಾಲೇಖನ, ಕತೆ ಕಾದಂಬರಿಗಳಲ್ಲಿ ವೈದ್ಯಕೀಯ ವಿಷಯಗಳನ್ನು ಪರೋಕ್ಷವಾಗಿ ಬಳಸಿಕೊಂಡು ವೈದ್ಯ ವಿಜ್ಞಾನ ಮತ್ತು ಆರೋಗ್ಯದ ನಿಯಮಗಳ ಸಂದೇಶ ಜನರಿಗೆ ತಲ್ಪುವಂತೆ ಮಾಡುವಲ್ಲಿ ಅವು ತುಂಬಾ ಯಶಸ್ವಿಯಾಗಿವೆ. ಈ ತರಹೆಯ ಸಾಹಿತ್ಯ ಪ್ರಕಾರ ನಮ್ಮ ಭಾಷೆಗಳಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿ ಇದೆಯೆನ್ನಬಹುದು. ಮೂಲತಃ ಅವು ನಮ್ಮ ಭಾಷೆಗಳಲ್ಲಿ ಮೂಡಿಬರುವ ಪ್ರಯತ್ನಗಳಾಗಬೇಕಾಗಿದೆ. ಅಲ್ಲಿಯ ತನಕ ಇತರೆ ಭಾಷೆಗಳಲ್ಲಿರುವ ಇಂಥಾ ಲೇಖನ ಮತ್ತು ಕೃತಿಗಳನ್ನು ಭಾಷಾಂತರಿಸುವ ಕಾರ್ಯ ಜರೂರಾಗಿ ನಡೆಯಬೇಕಾಗಿದೆ.

೮. **ಸೃಜನಶೀಲ ಸಾಹಿತ್ಯ :**

ವಿಜ್ಞಾನ ಅಥವಾ ವೈದ್ಯಕೀಯ ಬರವಣಿಗೆಗಳಲ್ಲಿ ತೊಡಗಿರುವವರು ಸೃಜನಶೀಲ ಸಾಹಿತ್ಯ ರಚನೆಗೆ ಇಳಿಯುವುದು ಅಪರೂಪವೆನ್ನಲಾಗುತ್ತಿದೆ. ಎಲ್ಲಾ ವೈದ್ಯ ಬರಹಗಾರರು ಸೃಜನಶೀಲ ಲೇಖಕರಾಗುವುದು ಸಾಧ್ಯವಿಲ್ಲ. ಕನ್ನಡದಲ್ಲಿ ಡಾ॥ ಅನುಪಮಾ ನಿರಂಜನ, ಡಾ॥ ಸಿ. ಆರ್. ಚಂದ್ರಶೇಖರ್‌ರಂತಹವರು ಶುದ್ಧ ವೈದ್ಯಕೀಯ ಬರಹಗಳಿಂದ ಹೊರತಾದ ಸೃಜನಶೀಲ ಕತೆ,

ಕಾದಂಬರಿಗಳನ್ನು ರಚಿಸಿ ಖ್ಯಾತಿ ಗಳಿಸಿದ್ದಾರೆ. ಈ ದಿಸೆಯಲ್ಲಿ ಇಂಗ್ಲಿಷ್‌ನ ಹಲವು ಹೆಸರಾಂತ ಶ್ರೇಷ್ಠ ಸೃಜನಶೀಲ ಸಾಹಿತಿಗಳು ಮೂಲತಃ ವೈದ್ಯರಾಗಿದ್ದ ರೆನ್ನುವುದನ್ನು ಬಹಳಷ್ಟು ಜನ ತಿಳಿದಂತಿಲ್ಲ. 'ಶರ್ಲಾಕ್ ಹೋಮ್ಸ್' ಪತ್ತೇದಾರಿಯ ಸೃಷ್ಟಿಕರ್ತ ಅರ್ಥರ್ ಕಾನನ್‌ಡಾಯಲ್, ಹೆಸರಾಂತ ಕವಿಗಳಾದ ಕೀಟ್ಸ್, ಗೋಲ್ಡ್‌ಸ್ಮಿತ್, ಅಬ್ರಹಾಂ ಕೋಲ್ಸ್, ಕಥೆ ಕಾದಂಬರಿಕಾರರಾದ ಸಾಮರ್‌ಸೆಟ್, ಮಾಮ್, ಆಂಟಿನ್ ಚಕಾಫ್ ಮುಂತಾದವರೆಲ್ಲಾ ವೃತ್ತಿಪರ ವೈದ್ಯರು. ಮಲೇರಿಯಾ ಪರೋಪಜೀವಿಯ ಸಂಶೋಧಕ ರೋನಾಲ್ಡ್ ರಾಸ್ ಸ್ವತಃ ಕವಿಯೂ ಆಗಿದ್ದ. ಪೋಲಿಯೋ ಕಾಯಿಲೆಗೆ ವ್ಯಾಕ್ಸಿನು ಕಂಡು ಹಿಡಿದ ಜೋನಾಸ್‌ಸಾಲ್ಕ್ ತತ್ವಶಾಸ್ತ್ರ ಬರಹಗಾರ. ಅಮೇರಿಕಾದ ರಾಜಕೀಯ ಮುತ್ಸದ್ಧಿಯಾಗಿದ್ದ ಆಲಿವರ್‌ವೆಂಡಲ್‌ಹೋಮ್ಸ್ ಶ್ರೇಷ್ಠ ಬರಹಗಾರನೂ ಆಗಿದ್ದ. ಆಫ್ರಿಕಾದ ಗೊಂಡಾರಣ್ಯದಲ್ಲಿ ನತದೃಷ್ಟ ನೀಗ್ರೋಗಳಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಆಲ್ಬರ್ಟ್ ಶೈಯಟ್ಸರ್ ಮತ ಧರ್ಮ ಸಾಹಿತ್ಯ ರಚನೆಯ ಮುಂಚೂಣಿಯಲ್ಲೂ ಇದ್ದ.

ರೋಗಿಯಾದವನ ಅಳಲು, ನೋವು-ನಲಿವು ಮತ್ತು ಜೀವನಕ್ರಮ ಗಳನ್ನು ಅವನ ಚಿಕಿತ್ಸೆಯ ಜವಾಬ್ದಾರಿ ಹೊತ್ತಿರುವ ವೈದ್ಯನಿಗಿಂತ ಹೆಚ್ಚಾಗಿ ಬೇರಾರೂ ಅರ್ಥ ಮಾಡಿಕೊಳ್ಳಲಾರರು. ನಿತ್ಯದ ಕಷ್ಟಕರ ಸನ್ನಿವೇಶಗಳನ್ನು ಎದುರಿಸಿ ಮನೆಗೆ ಹಿಂದಿರುಗಿದ ವೈದ್ಯನೊಬ್ಬ ಶಾರೀರಿಕವಾಗಿ ಬಳಲಿ ವಿಶ್ರಾಂತಿ ಪಡೆಯುವುದು ಸ್ವಾಭಾವಿಕ. ಆದರೆ ತನ್ನ ಮನಸ್ಸನ್ನು ಸ್ವಲ್ಪ ಅಂತರ್ಮುಖಿ ಯಾಗಿ ಹರಿಯ ಬಿಟ್ಟರೆ ಅವನ ಅನುಭವದಿಂದ ಶ್ರೇಷ್ಠ ಚಿಂತನೆ ಮೂಡಿ ಬರುವ ಸಾಧ್ಯತೆಗಳಿರುತ್ತವೆ. ಅವನ ದೈಹಿಕ ಬಳಲಿಕೆಯನ್ನು ಶಮನಗೊಳಿಸು ವುದಕ್ಕೆ ಇದೂ ಒಂದು ಅತ್ಯುತ್ತಮ ಸಾಧನವಾಗಬಹುದು. ಅನುಭವಿಯಾದ ವೈದ್ಯ ಸಾರ್ವಜನಿಕವಾಗಿ ತನ್ನ ಅನುಭವಗಳನ್ನು ವ್ಯಕ್ತಪಡಿಸುವ ಸಂದರ್ಭ ಗಳೊದಗಿದಾಗ ಹೊರಬರುವ ಭಾವನೆಗಳು ಅತ್ಯಂತ ಶ್ರೇಷ್ಠ ಮಟ್ಟದ್ದಾಗಿರುತ್ತ ದೆಂಬುದನ್ನು ನೋಡಬಹುದು. ಇಂತಹ ಅನುಭವಗಳಿಗೆ ಸರಿಯಾದ ರೂಪು ಕೊಟ್ಟು ಬರವಣಿಗೆಗಿಳಿಸುವ ಪ್ರಯತ್ನ ಮಾಡಿದಲ್ಲಿ ಹಲವು ವೈದ್ಯರ ಲೇಖನ ಗಳಿಂದ ವೈದ್ಯಕೀಯ ವಿಷಯಗಳೇ ಅಲ್ಲದೇ ಸೃಜನಶೀಲ ಪ್ರಕಾರಗಳಲ್ಲೂ

ಒಳ್ಳೆಯ ಸಾಹಿತ್ಯ ಉದ್ಭವವಾಗುವುದರಲ್ಲಿ ಸಂದೇಹವಿಲ್ಲ. ಈ ರೀತಿ ಕಾರ್ಯ ಪ್ರವೃತ್ತರಾದ ಅನೇಕ ಇಂಗ್ಲಿಷ್ ವೈದ್ಯರ ನಿದರ್ಶನಗಳನ್ನು ಈ ಮೊದಲು ಉದ್ಧರಿಸಲಾಗಿದೆ. ನಮ್ಮ ಅನುಭವಿ ವೈದ್ಯರಲ್ಲಿ ಕೆಲವರಾದರೂ ಇಂತಹ ಹವ್ಯಾಸಗಳನ್ನು ಬೆಳೆಸಿಕೊಳ್ಳುವಂತಾದರೆ ಅವರು ತಮ್ಮ ಅಪಾರ ಅನುಭವ ಗಳಿಂದ ಕಂಡುಕೊಂಡ ವೈದ್ಯಕೀಯ ವಿಷಯಗಳಲ್ಲಿ ಕತೆ, ಕಾದಂಬರಿ, ನಾಟಕ, ಬಾನುಲಿ ಅಥವಾ ದೂರದರ್ಶನಗಳಲ್ಲಿ ಚಿತ್ತರಿಸಬಹುದಾದಂತಹ ಸಾಹಿತ್ಯ ಪ್ರಕಾರಗಳು ಮೂಡಿಬರುವುದು ಸಾಧ್ಯವಿದೆ. ಆಸಕ್ತಿ ಇರುವವರಿಗೆ ಸಾಹಿತ್ಯ ರಚನೆಗೆ ವೈದ್ಯಕೀಯ ವಿಷಯಗಳಲ್ಲಿರುವಷ್ಟು ಗ್ರಾಸ ಬೇರೆಡೆಗಳಲ್ಲಿ ದೊರಕ ಲಾರದೆಂದೇ ಹೇಳಬಹುದು. ವೈದ್ಯಕೀಯ ಹಾಗೂ ಮನೋವೈಜ್ಞಾನಿಕ ವಿಷಯಗಳನ್ನು ಕತೆ, ಕಾದಂಬರಿ, ಸಿನೆಮಾ, ದೂರದರ್ಶನಗಳಂತಹ ಮಾಧ್ಯಮ ಗಳಲ್ಲಿ ಯಶಸ್ವಿಯಾಗಿ ಬಳಸಿಕೊಂಡಿರುವ ವಿಷಯದ ಪ್ರಸ್ತಾಪವನ್ನು ಈಗಾಗಲೇ ಮಾಡಲಾಗಿದೆ.

ಈತನಕ ಜನಪ್ರಿಯ ವೈದ್ಯಕೀಯ ಬರವಣಿಗೆಗಳ ಪ್ರಕಾರಗಳ ಅವ ಲೋಕನ ಮತ್ತು ಅವು ಇನ್ನೂ ಮುಂದುವರಿಯಬೇಕಾದ ದಿಕ್ಕು ದೆಸೆಗಳತ್ತ ಕಣ್ಣು ಹಾಯಿಸಿದಾಗ ಅದೊಂದು ಜನಜೀವನದ ಅವಿಭಾಜ್ಯ ಅಂಗವಾಗಿ ತುರ್ತಾಗಿ ಬೆಳವಣಿಗೆಯಾಗಬೇಕಾಗಿರುವ ಸಾಹಿತ್ಯ ಪ್ರಕಾರವೆನ್ನಿಸದಿರಲಾರದು. ಅದರ ರಚನೆ, ಪ್ರಕಟಣೆ, ಪ್ರಚಾರಗಳಿಗೆ ವೈದ್ಯರು ಮತ್ತು ವೈದ್ಯಸಾಹಿತಿಗಳು ತೀವ್ರ ಆಸಕ್ತಿ ವಹಿಸಬೇಕಾಗಿತ್ತದೆನ್ನುವುದಾದರೂ, ಇತರ ಸಾಹಿತಿಗಳು, ವಿಶ್ವ ವಿದ್ಯಾನಿಲಯ ಸಾಹಿತ್ಯ ಪರಿಷತ್ತು ಅಕಾಡೆಮಿ ಪತ್ರಿಕೆಗಳು, ಪ್ರಕಾಶಕರು ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಮತ್ತು ಕರ್ನಾಟಕ ಸರ್ಕಾರಗಳ ಪೂರ್ಣ ಸಹಕಾರ ಬೆಂಬಲ ಹಾಗೂ ಒತ್ತಾಸೆಗಳ ಅವಶ್ಯಕತೆಗಳಿವೆ. ಸಾಹಿತ್ಯ ವಿಮರ್ಶಕರೂ ಸಹಾ ಈ ತರಹೆಯ ಬರವಣಿಗೆಗಳ ಬಗೆಗೆ ಉದಾರ ನಿಲುವು, ತಾಳಬೇಕಾಗುತ್ತದೆ. ಇತರ ಸಾಹಿತ್ಯ ಪ್ರಕಾರಗಳಲ್ಲಿರುವ ಸೊಗಸು, ಸೌಂದರ್ಯ ಶೈಲಿಗಳು ವಿಜ್ಞಾನ ಮತ್ತು ವೈದ್ಯಕೀಯ ಸಾಹಿತ್ಯಗಳಲ್ಲಿ ಇರಬೇಕೆಂಬುದು ಸರಿಯೆನ್ನಿಸುವುದಿಲ್ಲ. ಈ ಪ್ರಕಾರಗಳ ಸಾಹಿತ್ಯದ ಉದ್ದೇಶ, ಗುರಿಗಳೇ ಪ್ರತ್ಯೇಕ. ಅವುಗಳಲ್ಲಿರಬೇಕಾದುದು. ಪ್ರತಿಪಾದಿಸುವ ವಿಷಯದ ಸ್ಪಷ್ಟತೆ,

ಖಚಿತತೆ, ನಿಷ್ಕಪತೆಗಳ ಜೊತೆಗೆ ಅವು ಸಂಕ್ಷಿಪ್ತವೂ ಸರಳವಾಗಿಯೂ ಇರಬೇಕಾಗುತ್ತದೆ. ಆದುದರಿಂದ ಇಂತಹ ಬರಹಗಳನ್ನು ಇತರ ಪ್ರಕಾರಗಳ ಜೊತೆ ಹೋಲಿಕೆ ಮಾಡುವುದು ಸರಿಯಾಗಲಾರದು ; ಅದು ಯಾವುದೇ ಗುಂಪಿಗೆ ಸೇರಿದ್ದಲ್ಲ ; ಅಥವಾ ಯಾವುದೇ ಸಾಹಿತ್ಯದೊಡನೆ ಪೈಪೋಟಿಗೆ ನಿಲ್ಲಬೇಕಾಗಿಲ್ಲ. ಸಮಗ್ರ ಜನತೆಯ ಕಲ್ಯಾಣವೇ ಅದರ ಗುರಿ. ಜನತೆಯ ಆಂದೋಳನವಾಗಿ ಅದು ಬೆಳವಣಿಗೆಯಾಗಬೇಕಾಗಿದೆ.

ಜನಪ್ರಿಯ ವೈದ್ಯಕೀಯ ಬರವಣಿಗೆ : ಸಾರ್ವಜನಿಕರ ನಿರೀಕ್ಷೆ

—ಪ್ರೊ|| ಜೆ. ಆರ್. ಲಕ್ಷ್ಮಣರಾವ್

ಶೀರ್ಷಿಕೆಯಲ್ಲಿರುವ "ಸಾರ್ವಜನಿಕರ ನಿರೀಕ್ಷೆ" ಎಂಬ ಪದಗುಚ್ಛದ ಬಗೆಗೆ ಸ್ಪಷ್ಟೀಕರಣ ಅಗತ್ಯ. ಅದರ ಅರ್ಥ, ಸಾರ್ವಜನಿಕರು ವಸ್ತುತಃ ಏನನ್ನು ನಿರೀಕ್ಷಿಸುತ್ತಾರೆ ಎಂಬುದಲ್ಲ. ಸಾರ್ವಜನಿಕರು ಏನನ್ನು ನಿರೀಕ್ಷಿಸಬೇಕು ? ಅವರಿಗೆ ಯಾವುದರ ಅಗತ್ಯವಿದೆ ಎಂಬುದು ಅದರ ಅರ್ಥ. "ಸಾರ್ವಜನಿಕ ನಿರೀಕ್ಷೆ" ಎಂಬುದಕ್ಕೆ ಈ ಅರ್ಥವನ್ನು ನೀಡಿ, ಈ ಪ್ರಬಂಧದಲ್ಲಿ ಅದನ್ನು ಕುರಿತು ಚರ್ಚಿಸಲು ಪ್ರಯತ್ನಿಸಿದ್ದೇನೆ. ಜನಪ್ರಿಯ ವೈದ್ಯಕೀಯ ಬರವಣಿಗೆ, ವಾಸ್ತವವಾಗಿ, ಜನಪ್ರಿಯ ವೈಜ್ಞಾನಿಕ ಬರವಣಿಗೆಯ ಒಂದು ಪ್ರಕಾರ ಆದುದರಿಂದ ಸಾರ್ವಜನಿಕರಿಗೆ ಎಂಥ ಜನಪ್ರಿಯ ವೈಜ್ಞಾನಿಕ ಬರವಣಿಗೆ ಬೇಕು, ಏಕೆ ಬೇಕು ಎಂಬುದನ್ನು ಮೊದಲು ವಿವೇಚಿಸಬೇಕು.

ವಿಜ್ಞಾನ ಎಂಬುದು ಕೇವಲ ತಜ್ಞರಿಗೆ ಸೇರಿದುದು, ಸಾಮಾನ್ಯ ಜನರಿಗೆ ಅದು ದೂರ ಎಂಬ ಭಾವನೆ ಒಂದು ಕಾಲದಲ್ಲಿತ್ತು. ವಿಜ್ಞಾನದ ಒಂದು ಎಳೆ ಎನ್ನಬಹುದಾದ ತಂತ್ರವಿದ್ಯೆ (technology) ಜನಜೀವನದ ಮೇಲೆ ಪ್ರಭಾವ ಬೀರುವುದು ನಿಜವಾದರೂ ಅದರಲ್ಲಿ ಜನ ಆಸಕ್ತಿ ವಹಿಸಬೇಕಾದುದಿಲ್ಲ, ಅದು ಸಾಮಾನ್ಯರಿಗೆ ಎಟುಕುವುದೂ ಇಲ್ಲ ಎಂದು ಆಗ ಭಾವಿಸಲಾಗಿತ್ತು. ನಮಗೆಲ್ಲ ಗೊತ್ತಿರುವಂತೆ ಕಳೆದ ನಾಲ್ಕೈದು ದಶಕಗಳಲ್ಲಿ ವಿಜ್ಞಾನ ಮತ್ತು ತಂತ್ರವಿದ್ಯೆಗಳ ಪ್ರಭಾವದಿಂದ ಜನಜೀವನ ಆಮೂಲಾಗ್ರವಾಗಿ ಬದಲಾಯಿಸಿಬಿಟ್ಟಿದೆ. ಇಂದಿನ

ಪರಿಸ್ಥಿತಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ನಮಗೆ ಸಂಬಂಧವಿಲ್ಲದ ವಿಷಯಗಳು ಎಂದು ಜನ ಕೈಕಟ್ಟಿ ಕುಳಿತುಕೊಳ್ಳುವಂತಿಲ್ಲ. ವಿದ್ಯುದ್ದೀಪ, ರೇಡಿಯೊ, ಟೆಲಿವಿಷನ್, ಯಂತ್ರಚಾಲಿತ ವಾಹನಗಳು, ಟ್ರಾಕ್ಟರುಗಳು, ನೀರೆತ್ತುವ ಪಂಪುಗಳು, ಕೃತಕ ನೂಲಿನ ಬಟ್ಟೆಗಳು, ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು, ಇವೆಲ್ಲ ಈಗ ಹಳ್ಳಿಗರಿಗೆ ಮತ್ತು ನಗರಗಳ ಕೊಳಚೆ ನಿವಾಸಿಗಳಿಗೆ ಸಹ ಸುಪರಿಚಿತವಾಗಿವೆ. ಇವೆಲ್ಲ ಎಲ್ಲಿಂದ ಬಂದುವು, ಹೇಗೆ ಬಂದುವು, ಹೇಗೆ ಕೆಲಸ ಮಾಡುತ್ತವೆ, ಇವುಗಳ ಇತಿಮಿತಿಗಳೇನು ಎಂಬೆಲ್ಲ ವಿಷಯಗಳೂ ಜನರಿಗೆ ತಿಳಿದಿರಬೇಡವೆ ? ಇವುಗಳಿಗೆ ಸಂಬಂಧಿಸಿದ ಸಮಸ್ಯೆಗಳು ಇದಿರಾದಾಗ ಸಣ್ಣಪುಟ್ಟ ವಿಷಯಗಳಿಗೂ ಜನ ತಜ್ಞರಿಗಾಗಿ ಕಾದು ಕುಳಿತಿರಬೇಕೆ ? ಎಲ್ಲರೂ ವೈದ್ಯರಾಗುವುದು ಸಾಧ್ಯವಿಲ್ಲ, ನಿಜ. ಆದರೆ ಪ್ರಥಮ ಚಿಕಿತ್ಸೆ ಎಲ್ಲರಿಗೂ ಎಟುಕುವಂಥದು ತಾನೆ ಅದರ ಬಗ್ಗೆ ಜನರಿಗೆ ತಿಳಿವಳಿಕೆ ಆಗತ್ಯವಲ್ಲವೆ ? ಅದೇ ರೀತಿ ಮೇಲೆ ಹೇಳಿದ ವಿಷಯಗಳಿಗೆ ಸಂಬಂಧಿಸಿದಂತೆಯೂ ಪ್ರಾಥಮಿಕ ಜ್ಞಾನ ಎಲ್ಲರಿಗೂ ದೊರಕಬೇಕು. ಹಾಗೆ ದೊರಕಿಸುವಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯದ ಪಾತ್ರವಿದೆ.

ಜನಸಾಮಾನ್ಯನ ವೈಯಕ್ತಿಕ ಜೀವನದಿಂದ ಜನತೆಯ ಸಾಮೂಹಿಕ ಜೀವನಕ್ಕೆ ಬರೋಣ. ಈಚಿನ ದಿನಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳಲ್ಲಿ ಅನೇಕವು ವಿಜ್ಞಾನ ಮತ್ತು ತಂತ್ರವಿದ್ಯೆಗಳಿಗೆ ಸಂಬಂಧಪಟ್ಟವು. ಪರಮಾಣುಶಕ್ತಿ ಇಲಾಖೆ, ಆಕಾಶ ಇಲಾಖೆ, ಇಲೆಕ್ಟ್ರಾನಿಕ್ಸ್ ಇಲಾಖೆ, ಪರಿಸರ ಇಲಾಖೆ, ಮುಂತಾಗಿ ವಿಜ್ಞಾನಕ್ಕೆ ನೇರ ಸಂಬಂಧವಿರುವ ಹದಿನೈದು ಹದಿನಾರು ಇಲಾಖೆಗಳು ನಮ್ಮ ಕೇಂದ್ರ ಸರ್ಕಾರದಲ್ಲಿರುವುದೇ ಈ ವಿಷಯಕ್ಕೆ ಸಾಕ್ಷಿ. ನಮ್ಮ ರಾಷ್ಟ್ರದಲ್ಲಿ ಎದ್ದಿರುವ ವಾದವಿವಾದಗಳನ್ನೇ ನೋಡಿ ಬೈಜಿಕಾಸ್ತ್ರಗಳ ಉತ್ಪಾದನೆಗೆ ತಡೆಯೊಡ್ಡುವ ಕರಾರಿಗೆ ಭಾರತ ಸಹಿ ಹಾಕದಿರುವುದು ಸರಿಯೇ ತಪ್ಪೇ, ನರ್ಮದಾ ಮತ್ತು ತೆಹ್ರೀ ಯೋಜನೆಗಳನ್ನು ಕಾರ್ಯಗತಗೊಳಿಸಬೇಕೇ ಬೇಡವೇ, ಆಕಾಶ ಸಂಶೋಧನೆಗೆ ನಾವು ಮಾಡುತ್ತಿರುವ ವೆಚ್ಚ ಸಮರ್ಥನೀಯವೇ, ಕೈಗಾಪರಮಾಣು ವಿದ್ಯುತ್ ಸ್ಥಾವರಗಳ ನಿರ್ಮಾಣವನ್ನು ಪರಿಸರವಾದಿಗಳು ವಿರೋಧಿಸುತ್ತಿರುವುದು ಸರಿಯೇ, ಇಲ್ಲವೆ ನಮ್ಮ ರಾಷ್ಟ್ರ

ನೀತಿಗೆ ಸಂಬಂಧಿಸಿದ ಪ್ರಶ್ನೆಗಳು. ಆದರೆ ಅವುಗಳಿಗೆ ಉತ್ತರ ಕೊಡಲು ಯತ್ನಿಸಿದಾಗ ವಿಜ್ಞಾನವನ್ನು ಕುರಿತು ತಕ್ಕಮಟ್ಟಿನ ಜ್ಞಾನ ಅಗತ್ಯವಾಗುತ್ತದೆ. ನಮ್ಮ ದೇಶವು ಕುರುಡುಕುರುಡಾಗಿ ಪಾಶ್ಚಿಮಾತ್ಯ ತಂತ್ರವಿದ್ಯೆಯ ಜಾಡಿನಲ್ಲೇ ಮುಂದುವರಿಯುತ್ತಿದೆ ಎಂದೂ, ಪರಿಣಾಮವಾಗಿ ನಮ್ಮ ವಿಜ್ಞಾನಿಗಳ ಸಂಶೋಧನೆ ಎಲ್ಲ ಅದಕ್ಕೆ ಹೊಂದಿಕೊಂಡಿರುವುದರಿಂದ ನಮ್ಮ ಜನರ ಅಗತ್ಯಗಳನ್ನು ಪೂರೈಸುವುದರಲ್ಲಿ ಅದು ವಿಫಲಗೊಂಡಿದೆ ಎಂದೂ ನಮ್ಮ ಸದ್ಯದ ಸ್ಥಿತಿಗತಿಗಳಿಗೆ ಅನುಗುಣವಾದ ಬೇರೊಂದು ಬಗೆಯ ತಂತ್ರವಿದ್ಯೆಯನ್ನು ಅಂಗೀಕರಿಸುವುದರಿಂದ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧ್ಯವೆಂದೂ ಒಂದು ಪಂಥದವರು ಹೇಳುತ್ತಿದ್ದಾರೆ. ಪ್ರಜಾರಾಜ್ಯದಲ್ಲಿ ಜೀವಿಸುತ್ತಿರುವ ನಾವು ಈ ಸಮಸ್ಯೆಗಳ ವಿಷಯದಲ್ಲಿ ನಮ್ಮ ನಿಲುವೇನು ಎಂದು ನಿರ್ಧರಿಸಬೇಡವೇ ? ಹಾಗೆ ನಿರ್ಧರಿಸಲು ನಮಗೆ ವಿಜ್ಞಾನ ತಕ್ಕಮಟ್ಟಿಗೆ ಗೊತ್ತಿರಬೇಕು. ಈ ಉದ್ದೇಶಕ್ಕೆ ನಮಗೆ ಗೊತ್ತಿರಬೇಕಾದುದು ಎಂಥ ವಿಜ್ಞಾನ ? ಸಮಸ್ಯೆಯ ಸ್ವರೂಪವನ್ನರಿಯಲು ನೆರವಾಗುವಂಥ ವಿಜ್ಞಾನ ; ವಿವಿಧ ಪಕ್ಷಗಳು ಮುಂದೊಡ್ಡುವ ವಾದಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ತೂಗಿ ನೋಡಲು ಸಾಧ್ಯವಾಗುವಂಥ ವಿಜ್ಞಾನ. ಅಂಥ ವಿಜ್ಞಾನ ಎಲ್ಲರಿಗೂ ಬೇಕು.

ಮೂರನೆಯದಾಗಿ, ವಿಜ್ಞಾನಕ್ಕೆ ವಿಶಿಷ್ಟವಾಗಿರುವ ಸಾಂಸ್ಕೃತಿಕ ಮೌಲ್ಯಕ್ಕಾಗಿ ವಿಜ್ಞಾನದ ಬಗೆಗಿನ ತಿಳಿವಳಿಕೆ ಜನಸಾಮಾನ್ಯರಿಗೆ ಅಗತ್ಯ. ಕಳೆದ ನಾನ್ನೂರು ವರ್ಷಗಳ ಅನುಭವದ ಪರಿಣಾಮವಾಗಿ ಸಮಸ್ಯೆಗಳ ಪರಿಶೀಲನೆಗೆ ವಿಜ್ಞಾನ ಒಂದು ವಿಶಿಷ್ಟ ದೃಷ್ಟಿಯನ್ನು ರೂಪಿಸಿಕೊಂಡಿದೆ. ಅವುಗಳ ಪರಿಹಾರಕ್ಕೆ ಒಂದು ವಿಶಿಷ್ಟ ವಿಧಾನವನ್ನು ಅನುಸರಿಸುತ್ತ ಬಂದಿದೆ. ಈ ವೈಜ್ಞಾನಿಕ ದೃಷ್ಟಿ ಮತ್ತು ವಿಜ್ಞಾನ ವಿಧಾನಗಳೇ ಈ ನಾನ್ನೂರು ವರ್ಷಗಳಲ್ಲಿ ಸಂದಿರುವ ಅದರ ಅಪರಿಮಿತ ಸಾಧನೆಗಳ ಗುಟ್ಟು. ಯಾವ ಪೂರ್ವಗ್ರಹಕ್ಕೂ ಅವಕಾಶ ಕೊಡದೆ ಪ್ರತಿಯೊಂದನ್ನೂ ವಿಷಯ ನಿಷ್ಠೆಯಿಂದ ನೋಡುವುದು, ಕೈಯಿಂದ ಕೆಲಸ ಮಾಡುವುದನ್ನು ನಿಕೃಷ್ಟವೆಂದು ಪರಿಗಣಿಸದೆ ಪ್ರಯೋಗಗಳನ್ನು ನಡೆಸುವುದು, ಅಧಿಕಾರವಾಣಿಗೆ ಮಣಿಯದೆ ಸ್ವತಂತ್ರವಾಗಿ ಯೋಚಿಸಿ ಎಲ್ಲವನ್ನೂ ವಿಜ್ಞಾನ ವಿಧಾನದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವುದು, ಸರಿಯೆಂದು

ತೋರಿದುದನ್ನು ನಿರ್ಭಯವಾಗಿ ಹೇಳುವುದು, ಆದರೂ ಬೇರೆಯವರ ಅಭಿಪ್ರಾಯಗಳಿಗೆ ಗೌರವ ನೀಡಿ ಸಹಾನುಭೂತಿಯಿಂದ ಪರಿಶೀಲಿಸುವುದು, ಕೈಗೊಂಡಿರುವ ತೀರ್ಮಾನಗಳ ಪುನರ್ವಿಮರ್ಶೆಗೆ ಸದಾ ಸಿದ್ಧವಾಗಿರುವುದು— ಇವು ವಿಜ್ಞಾನ ಮಾರ್ಗದ ಲಕ್ಷಣಗಳು. ವಿಜ್ಞಾನದ ಪರಿಚಯ ಬೆಳೆದಂತೆ ಇಂಥ ವೈಜ್ಞಾನಿಕ ದೃಷ್ಟಿಯನ್ನು ಬೆಳೆಸಿಕೊಳ್ಳುವುದು ಮತ್ತು ಮಾರ್ಗವನ್ನು ಮೈಗೂಡಿಸಿಕೊಳ್ಳುವುದು ಸಾಧ್ಯವಾಗುವುದಾದರೆ ಅದರಿಂದ ದೊರಕುವ ಸಂಸ್ಕಾರಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ.

ಜನಪ್ರಿಯ ವಿಜ್ಞಾನ ಸಾಹಿತ್ಯದಿಂದ ಸಾರ್ವಜನಿಕರು ನಿರೀಕ್ಷಿಸುವುದು ಈ ಬಗೆಯ ಪ್ರಯೋಜನವನ್ನು. ಜನಪ್ರಿಯ ವೈದ್ಯಕೀಯ ಬರವಣಿಗೆ, ವಾಸ್ತವವಾಗಿ, ಜನಪ್ರಿಯ ವೈಜ್ಞಾನಿಕ ಬರವಣಿಗೆಯ ಒಂದು ಪ್ರಕಾರವಷ್ಟೆ. ಆದುದರಿಂದ ಮೇಲಿನ ಮಾತುಗಳು ಅದಕ್ಕೂ ಅನ್ವಯಿಸುತ್ತವೆ. ವೈದ್ಯ ವಿಜ್ಞಾನದ ವಿಶಿಷ್ಟತೆಯನ್ನೂ ಜನರಿಗೆ ಅದರೊಂದಿಗಿರುವ ನೇರ ಸಂಬಂಧವನ್ನೂ ಗಣನೆಗೆ ತೆಗೆದುಕೊಂಡು ಸಾರ್ವಜನಿಕರು ಜನಪ್ರಿಯ ವೈದ್ಯಕೀಯ ಬರವಣಿಗೆಯಿಂದ ಏನನ್ನು ನಿರೀಕ್ಷಿಸುವರೆಂಬುದನ್ನು ಇನ್ನೂ ನಿರ್ದಿಷ್ಟವಾಗಿ ಹೇಳಲು ಪ್ರಯತ್ನಿಸಬಹುದು.

ಆಧುನಿಕ ವಿಜ್ಞಾನ ಮತ್ತು ತಂತ್ರವಿದ್ಯೆಗಳ ಫಲವಾಗಿ ದೊರೆತಿರುವ ಜೀವನ ಸೌಕರ್ಯಗಳು ಹಳ್ಳಿಗರಿಗೆ ಮತ್ತು ಕೊಳಚೆ ನಿವಾಸಿಗಳಿಗೆ ಸಹ ಈಗ ಸುಪರಿಚಿತವಾಗಿವೆ ಎಂಬ ಮಾತು ಈ ಹಿಂದೆ ಬಂದಿತು. ಆಧುನಿಕ ಔಷಧಿಗಳ ವಿಷಯದಲ್ಲಿಯೂ ಇದು ನಿಜ. ನಾಲ್ಕೈದು ದಶಕಗಳ ಕೆಳಗೆ ಔಷಧಿಗಾಗಿ ವೈದ್ಯರಲ್ಲಿಗೆ ಹೋಗುವಾಗ ಕೈಯಲ್ಲಿ ಸೀಸೆ ಇಲ್ಲದೆ ಹೋಗುವುದು ದಡ್ಡತನ ಎನ್ನಿಸಿಕೊಳ್ಳುತ್ತಿತ್ತು. ಅಂಥವರು ವೈದ್ಯರ ಮೂದಲಿಕೆಗೆ ಗುರಿಯಾಗುತ್ತಿದ್ದರು. ಇಂದು ಸೀಸೆ ತೆಗೆದುಕೊಂಡು ಹೋಗುವುದು ನಗೆಪಾಟಲು. ಏಕೆಂದರೆ ಇದು ಪೇಟೆಂಟ್ ಔಷಧಿಗಳ ಯುಗ. ಔಷಧಿ ಕೊಡುವ ವೈದ್ಯರು ಈಗ ಇಲ್ಲವೇ ಇಲ್ಲ. ಔಷಧಿ ಬರೆದು ಕೊಡುವುದಷ್ಟೇ ಅವರ ಕೆಲಸ. ಅವರು ಬರೆದು ಕೊಡುವ ಮಾತ್ರೆಗಳನ್ನೋ ಶಿರಪ್ಪನ್ನೋ ಕೊಡುವವರು ಔಷಧಿ ಅಂಗಡಿಯವರು. ಹೀಗಾಗಿ ಬಹುಪಾಲು ಪೇಟೆಂಟ್ ಔಷಧಿಗಳ ಹೆಸರುಗಳು ಜನರಿಗೆ

ಸುಪರಿಚಿತವಾಗಿವೆ. ಯಾವ ರೋಗಲಕ್ಷಣಗಳು ಕಾಣಿಸಿಕೊಂಡಾಗ ವೈದ್ಯರು ಯಾವ ಔಷಧಿಯನ್ನು ಬರೆದುಕೊಡುವರೆಂಬುದೂ ಜನರಿಗೆ ಹೆಚ್ಚುಕಡಮೆ ಗೊತ್ತಾಗಿರುತ್ತದೆ. ಅವರಿಗೆ ಹಾಗೆ ಪರಿಚಯ ಮಾಡಿಕೊಡುವುದರಲ್ಲಿ ಕೆಲವು ವೇಳೆ ಔಷಧಿ ಅಂಗಡಿಯವರ ಪಾತ್ರವೂ ಇರುತ್ತದೆ. ಅಧಿಕ ಪ್ರಸಂಗಿಗಳಾದ ಕೆಲವು ಔಷಧಿ ಮಾರಾಟಗಾರರು ತಮ್ಮ ಪರಿಮಿತಿಯನ್ನು ನಿರ್ಲಕ್ಷಿಸಿ, ರೋಗ ಲಕ್ಷಣಗಳನ್ನು ಕೇಳಿ ತಿಳಿದುಕೊಂಡು, ತಾವೇ ಔಷಧಿ ವಿತರಣೆ ಮಾಡುವುದು ವಿರಳವೇನಲ್ಲ. ವೈದ್ಯರಿಗೆ ತೆರಬೇಕಾದ ಸಂಭಾವನೆಯನ್ನು ಉಳಿಸಲು ರೋಗಿಗಳ ನೆರವಿಗೆ ಬಂದ ಹಿತಚಿಂತಕರು ಎನ್ನಿಸಿಕೊಂಡು ಆ ಮಾರಾಟಗಾರರು ರೋಗಿಗಳ ಕೃತಜ್ಞತೆಗೆ ಪಾತ್ರರಾಗುವುದೂ ಉಂಟು. ವೈದ್ಯವೃತ್ತಿಯ ಘನತೆಯನ್ನೂ ಆ ವೃತ್ತಿಗೆ ಸಹಜವಾದ ಮಾನವೀಯತೆಯನ್ನೂ ಕೆಡೆಗಣಿಸಿ ವೈದ್ಯವನ್ನು ವಾಣಿಜ್ಯೋದ್ಯಮವಾಗಿ ಪರಿವರ್ತಿಸಿ, ಆ ಮೂಲಕ ಜನತೆಯನ್ನು ದೂರ ಮಾಡುವ ವೈದ್ಯರು ಅಯತ್ನವಾಗಿ ಮೇಲಿನ ಇಡೀ ಪ್ರಕ್ರಿಯೆಗೆ ಪ್ರೋತ್ಸಾಹ ನೀಡುತ್ತಾರೆ.

ಈ ಅನಪೇಕ್ಷಣೀಯ ಪರಿಸ್ಥಿತಿಯ ನಿರ್ಮೂಲನಕ್ಕೆ ಜನಪ್ರಿಯ ವೈದ್ಯಕೀಯ ಬರವಣಿಗೆ ನೆರವಾಗಬೇಕೆಂದು ನಾವು ನಿರೀಕ್ಷಿಸುತ್ತೇವೆ. ಕೇವಲ ರೋಗ ಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು ರೋಗಕ್ಕೆ ಯಾವ ಔಷಧಿ ತೆಗೆದುಕೊಳ್ಳಬೇಕೆಂದು ರೋಗಿಯೇ ಆಗಲೀ ಔಷಧಿ ಮಾರಾಟಗಾರನೇ ಆಗಲೀ ತೀರ್ಮಾನಿಸುವುದು ಎಷ್ಟರಮಟ್ಟಿಗೆ ಸುರಕ್ಷಿತ, ಎಷ್ಟರಮಟ್ಟಿಗೆ ಅಪಾಯಕರ ಎಂಬುದನ್ನು ಓದುಗರಿಗೆ ಮನವರಿಕೆ ಮಾಡಿಕೊಡಬೇಕು. ಈಗ ಹೊರಬರುತ್ತಿರುವ ವೈದ್ಯಕೀಯ ಬರವಣಿಗೆ ಆ ಕೆಲಸವನ್ನು ಮಾಡುತ್ತಿಲ್ಲ ಎಂದಲ್ಲ; ಅದನ್ನು ಸಮರ್ಪಕವಾಗಿ ಮಾಡುತ್ತಿಲ್ಲ.

ದೇಹಾರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಕುರಿತ ಇಂದಿನ ಜನಪ್ರಿಯ ವೈದ್ಯಕೀಯ ಬರವಣಿಗೆ ಬಹುತೇಕ "ಹೀಗೆ ಮಾಡಬೇಕು, ಹೀಗೆ ಮಾಡಬಾರದು" ಎಂದು ವಿಧಿಸುವ, ಆಜ್ಞಾಪನೆ ಮಾಡುವ, ಧಾಟಿಯಲ್ಲಿರುತ್ತದೆಯೇ ವಿನಾ ಓದುಗರೊಡನೆ ಆತ್ಮೀಯತೆಯನ್ನು ಬೆಳೆಸಿ, ಅವರಿಗೆ ವಿಷಯವನ್ನು ತಿಳಿಯ ಹೇಳಿ, ಈ ಕಾರಣದಿಂದ ಇಂಥದನ್ನು ಮಾಡಬಾರದು ಎಂದು ಮನವೊಲಿಸುವ ಧಾಟಿಯಲ್ಲಿರುವುದಿಲ್ಲ. ಜನಪ್ರಿಯ

ವೈದ್ಯಕೀಯ ಬರವಣಿಗೆ ಮಾಡುವವರು ಬಹುತೇಕ ವೃತ್ತಿನಿರತ ವೈದ್ಯರಾಗಿದ್ದು, ಅವರು ತಮ್ಮ ವೃತ್ತಿಯಲ್ಲಿ ಆ ಬಗೆಯ ಮನೋಭಾವವನ್ನು ರೂಢಿಸಿಕೊಳ್ಳುವುದೇ ಬಹುಶಃ ಇದಕ್ಕೆ ಕಾರಣ. "ರೋಗಿ ಅರಿತವನಲ್ಲ, ಏನು ಮಾಡಬೇಕೆಂಬುದನ್ನು ಅವನು ಅರಿಯ, ನಾನು ಅದನ್ನು ಬಲ್ಲೆ, ಆದುದರಿಂದ ಅವನಿಗೆ ಬುದ್ಧಿವಾದ ಹೇಳಿದರೆ ಸಾಕು, ಉಳಿದುದರ ಗೊಡವೆ ಅವನಿಗೇಕೆ" ಎಂಬ ಮನೋಭಾವದಿಂದ ಅವರು ಕೆಲಸ ಮಾಡುತ್ತಾರೆ. ಸೀಮಿತ ಅವಧಿಯಲ್ಲಿ ಬಹು ಮಂದಿ ರೋಗಿಗಳನ್ನು ಪರೀಕ್ಷಿಸಿ ಅವರಿಗೆ ಸಲಹೆ ನೀಡಬೇಕಾಗಿ ಬಂದಾಗ ಈ ರೀತಿ ನಡೆದುಕೊಳ್ಳುವುದು ಅನಿವಾರ್ಯವಾಗಬಹುದು. ಇನ್ನು ಕೆಲವು ವೇಳೆ ನಿಜಸ್ಥಿತಿಯನ್ನು ರೋಗಿಗೆ ತಿಳಿಸಿದರೆ ಅವನು ಧೃತಿಗೆಡಬಹುದು, ಅದರಿಂದ ಅವನು ಗುಣಮುಖನಾಗಲು ಅಡ್ಡಿಯಾಗಬಹುದು. ಮೇಲಾಗಿ ರೋಗಿಯು ನರಳುತ್ತಿರುವಾಗ ಅವನಿಗೆ ಬೇಕಾಗಿರುವುದು ನರಳಿಕೆಯ ನಿವಾರಣೆ ಮಾತ್ರ, ಆದುದರಿಂದ ವೈದ್ಯನ ವೃತ್ತಿ ಜೀವನದಲ್ಲಿ ಈ ಮನೋಭಾವ ಸ್ವಲ್ಪ ಮಟ್ಟಿಗೆ ಸಮರ್ಥನೀಯವಾಗಿರಬಹುದು. ಆದರೆ ಅದೇ ವೈದ್ಯ ಜನಪ್ರಿಯ ಬರವಣಿಗೆಗೆ ತೊಡಗಿದಾಗ ಈ ಮನೋಭಾವ ಖಂಡಿತವಾಗಿಯೂ ಅಸಮರ್ಥನೀಯ. ಓದುಗ ರೋಗಪೀಡಿತನಾಗಿ ಓದಲು ಹೊರಟಿಲ್ಲ. ಕುತೂಹಲ ಪೀಡಿತನಾಗಿ ವಿಷಯಗಳನ್ನು ತಿಳಿಯಲೆಂದು ಓದತೊಡಗಿದ್ದಾನೆ. ಅವನಿಗೆ ಆಜ್ಞಾಪನೆಗಳು ಕೆಲಸಕ್ಕೆ ಬರುವುದಿಲ್ಲ. ಆ ಆಜ್ಞಾಪನೆಗಳಲ್ಲಿ ವಿಶ್ವಾಸವೂ ಹುಟ್ಟುವುದಿಲ್ಲ. ಏಕೆ, ಹೇಗೆ ಎಂಬ ಪ್ರಶ್ನೆಗಳಿಗೆ ಉತ್ತರ ಬೇಕು. ಮನವೊಪ್ಪುವಂಥ ಉತ್ತರಗಳು ಅವನಿಗೆ ದೊರೆತುದೇ ಆದರೆ, ಮುಂದೊಮ್ಮೆ ಆ ತಿಳಿವಳಿಕೆಯನ್ನು ತಾನೇ ಬಳಸಿಕೊಳ್ಳುವ ಪರಿಸ್ಥಿತಿ ಬಂದಾಗ ಯುಕ್ತ ಮಾರ್ಗವನ್ನು ಆಯ್ದುಕೊಳ್ಳಲು ಅದರಿಂದ ಸಹಾಯವಾಗುತ್ತದೆ.

ಎಲ್ಲರೂ ವೈದ್ಯರಾಗಲು ಸಾಧ್ಯವಿಲ್ಲ, ಆದರೆ ಪ್ರಥಮ ಚಿಕಿತ್ಸೆ ಎಲ್ಲರಿಗೂ ಎಟುಕುವಂಥದು ತಾನೆ ಎಂಬ ಮಾತು ಈ ಹಿಂದೆ ಬಂದಿತು. ಸ್ಕೌಟ್ ಚಳವಳಿಯ ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆ ಎಂಬ ಶಬ್ದಕ್ಕೆ ನೀಡಿರುವ ಅರ್ಥ ಬಳಕೆಯಲ್ಲಿ ಉಳಿದುಬಿಟ್ಟಿದೆ. ಅಪಘಾತಕ್ಕೀಡಾದವರನ್ನು ವೈದ್ಯರ ಬಳಿ ಕೊಂಡೊಯ್ಯುವುದಕ್ಕೆ ಮೊದಲು ನೀಡಬೇಕಾದ ಚಿಕಿತ್ಸೆಯೇ ಪ್ರಥಮ ಚಿಕಿತ್ಸೆ

ಎಂಬ ಭಾವನೆ ಪ್ರಚಲಿತವಾಗಿದೆ. ವಾಸ್ತವವಾಗಿ ಅಪಘಾತಕ್ಕೀಡಾದವರೇ ಆಗಬೇಕಾಗಿಲ್ಲ. ಯಾವುದೇ ಅನಾರೋಗ್ಯ ಕಾಣಿಸಿಕೊಂಡಾಗ ವೈದ್ಯರು ಕೂಡಲೇ ಸಿಕ್ಕದಿರುವ ಸಂದರ್ಭವಿದ್ದರೆ, ಆಗ ಆ ರೋಗಿಗೆ ಕೊಡುವ ಚಿಕಿತ್ಸೆಯೂ ಪ್ರಥಮ ಚಿಕಿತ್ಸೆಯೇ. ಈ ಬಗೆಯ ಪ್ರಥಮ ಚಿಕಿತ್ಸೆಯನ್ನು ಕುರಿತ ತಿಳಿವಳಿಕೆಯನ್ನೂ ನಾವು ಜನಪ್ರಿಯ ವೈದ್ಯಕೀಯ ಬರವಣಿಗೆಯಿಂದ ನಿರೀಕ್ಷಿಸುತ್ತೇವೆ. ಹಾಗೆ ನೀಡುವ ಪ್ರಥಮ ಚಿಕಿತ್ಸೆ ಕೆಲವು ವೇಳೆ ಯುಕ್ತವಾದ ಪೂರ್ಣ ಚಿಕಿತ್ಸೆಯೇ ಆಗಬಹುದು. ಕಾಣಿಸಿಕೊಂಡಿದ್ದ ರೋಗಲಕ್ಷಣ ಯಾವುದೋ ಅಲ್ಪ ಕಾರಣದಿಂದ ತಲೆದೋರಿದ್ದರೆ, ಅದರ ನಿವಾರಣೆಗೆಂದು ನೀಡಿದ ಚಿಕಿತ್ಸೆಯೇ ಸಮರ್ಪಕ ಚಿಕಿತ್ಸೆಯಾಗುವುದಷ್ಟೆ. ವೈದ್ಯರ ಅಗತ್ಯವೇ ಬೇಕಾಗದಿರುವ ಅಂಥ ಸಂದರ್ಭಗಳು ಯಾವುವು ಎಂಬುದರ ಬಗ್ಗೆ ತಿಳಿವಳಿಕೆ ಅಗತ್ಯ. ಡೇವಿಡ್ ವರ್ನರ್ ಅವರ *Where there is no Doctor* ಎಂಬ ಪುಸ್ತಕವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬೇಕು. ವೈದ್ಯರು ಲಭ್ಯವಿಲ್ಲದಿರುವ ಹಳ್ಳಿಗಾಡಿನಲ್ಲಿ ಯಾರಿಗಾದರೂ ಅಸ್ವಸ್ಥತೆಯುಂಟಾದರೆ ಮಾಡಬೇಕಾದುದೇನು, ವೈದ್ಯರ ನೆರವನ್ನು ಅಪೇಕ್ಷಿಸದೆಯೇ ಅಸ್ವಸ್ಥತೆಯನ್ನು ಹೋಗಲಾಡಿಸಬಹುದಾದ ಸಂದರ್ಭಗಳು ಯಾವುವು, ಪ್ರಥಮ ಚಿಕಿತ್ಸೆ ನೀಡಿ ವೈದ್ಯರ ಬಳಿಗೆ ರೋಗಿಯನ್ನು ಕೊಂಡೊಯ್ಯಬೇಕಾಗುವ ಸಂದರ್ಭಗಳು ಯಾವುವು ಎಂಬ ಬಗ್ಗೆ ತಿಳಿವಳಿಕೆ ನೀಡುವ ಪುಸ್ತಕ ಅದು. ಆ ಮಾದರಿಯ ತಿಳಿವಳಿಕೆಯನ್ನೂ ಜನಪ್ರಿಯ ವೈದ್ಯಕೀಯ ಬರವಣಿಗೆಯಿಂದ ನಿರೀಕ್ಷಿಸುತ್ತೇವೆ.

ವಿಜ್ಞಾನವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳನ್ನು ಪ್ರವೇಶಿಸಿದೆ ಎಂಬ ಮಾತು ವೈದ್ಯ ವಿಜ್ಞಾನದ ವಿಷಯದಲ್ಲಿಯೂ ನಿಜ. ನಮ್ಮ ದೇಶಕ್ಕೆ ಸಂಬಂಧಿಸಿದಂತೆ ರಾಷ್ಟ್ರ ನೀತಿಯ ಪ್ರಶ್ನೆಗಳಾಗಿರುವ ಮತ್ತು ವೈದ್ಯವಿಜ್ಞಾನಕ್ಕೆ ನೇರ ಸಂಬಂಧವಿರುವ ಒಂದೆರಡು ಉದಾಹರಣೆಗಳನ್ನು ತೆಗೆದುಕೊಳ್ಳೋಣ. ಮೊದಲನೆಯದಾಗಿ ಔಷಧಗಳ ಉತ್ಪಾದನೆ ಮತ್ತು ಮಾರಾಟದ ಪ್ರಶ್ನೆ. ನಮ್ಮ ದೇಶದಲ್ಲಿ ಬ್ರ್ಯಾಂಡ್ ಹೆಸರುಗಳಲ್ಲಿ ಮಾರಾಟವಾಗುತ್ತಿರುವ ಔಷಧಗಳ ಸಂಖ್ಯೆ ಐವತ್ತು ಸಾವಿರಕ್ಕಿಂತ ಹೆಚ್ಚು. ಅಷ್ಟು ಬೇರೆ ಬೇರೆ ಹೆಸರುಗಳಿದ್ದರೂ ಅವುಗಳಲ್ಲಿರುವ ಮದ್ದುಗಳ ಸಂಖ್ಯೆ ಎರಡು

ಮೂರು ಸಾವಿರಕ್ಕಿಂತ ಹೆಚ್ಚಾಗಿಲ್ಲ. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಕೆಲವು ಅಂಶಗಳಿವೆ. ಈ ಎರಡು ಮೂರು ಸಾವಿರ ಮದ್ದುಗಳ ಪೈಕಿ ಅನೇಕವು ಮನುಷ್ಯ ದೇಹಕ್ಕೆ ಅಪಾಯಕರವೆಂದು ಸಾಬೀತಾಗಿರುವುದರಿಂದ ಪಶ್ಚಿಮ ರಾಷ್ಟ್ರಗಳಲ್ಲಿ ಅವುಗಳ ಮಾರಾಟವನ್ನು ನಿಷೇಧಿಸಲಾಗಿದೆ. ಅವು ಮೊದಲು ಉಪಯೋಗಕ್ಕೆ ಬಂದಾಗ ಅವುಗಳ ಔಷಧ ಗುಣ ಮಾತ್ರ ಗೊತ್ತಿತ್ತು. ಅವುಗಳ ಉಪಪರಿಣಾಮಗಳನ್ನು ಕುರಿತು ಅನಂತರ ನಡೆಸಿದ ಸಂಶೋಧನೆಯ ಫಲವಾಗಿ ಅವುಗಳಿಂದಾಗುವ ದುಷ್ಪರಿಣಾಮ ಬೆಳಕಿಗೆ ಬಂದುದರಿಂದ ಅವುಗಳನ್ನು ನಿಷೇಧಿಸಲಾಯಿತು. ಭಾರತದಲ್ಲಿ ಮಾತ್ರ ಅವು ಇನ್ನೂ ಮಾರಾಟವಾಗುತ್ತಿವೆ. ಎರಡನೆಯದಾಗಿ, ಕ್ಷಯ, ಕುಷ್ಠರೋಗ ಮುಂತಾದುವಕ್ಕೆ ಬೇಕಾಗುವ ಔಷಧಗಳ ಅಗತ್ಯ ಭಾರತದಲ್ಲಿ ಬಹಳ ಇದೆ. ಅದರೆ ಆ ಔಷಧಗಳು ಸಾಕಷ್ಟು ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿಲ್ಲ. ಆದುದರಿಂದ ಅವು ಸಿಕ್ಕುವುದು ಕಷ್ಟ. ಮೂರನೆಯದಾಗಿ ಟಾನಿಕ್‌ಗಳ ಹಾವಳಿ. ಅತ್ಯಧಿಕವಾಗಿ ಮಾರಾಟವಾಗುತ್ತಿರುವ ಈ ಟಾನಿಕ್ಕುಗಳಲ್ಲಿ ಅನಗತ್ಯ ಪೋಷಕಾಂಶಗಳು, ಅವೈಜ್ಞಾನಿಕ ಪ್ರಮಾಣದಲ್ಲಿರುವ ವಿಟಮಿನ್ನುಗಳು ಮತ್ತು ಅನಾವಶ್ಯಕ ಆಲ್ಕೊಹಾಲ್ ಇವೆ ಎನ್ನಲಾಗಿದೆ.

ಈ ಪರಿಸ್ಥಿತಿಗೆ ಕಾರಣ, ಔಷಧಗಳ ತಯಾರಿಕೆ ಮತ್ತು ಮಾರಾಟಗಳ ಮೇಲೆ ಬಿಗಿಯಾಗಿರುವ ಬಹುರಾಷ್ಟ್ರೀಯ ಕಂಪನಿಗಳ ಹಿಡಿತ. ಆ ಕಂಪನಿಗಳ ಗುರಿ ಆದಷ್ಟು ಹೆಚ್ಚು ಲಾಭಗಳಿಸುವುದೇ ವಿನಾ ನಮ್ಮ ಜನರ ಆರೋಗ್ಯ ಸುಧಾರಣೆ ಅಲ್ಲ. ನಿಷೇಧಕ್ಕೊಳಗಾಗಿರುವ ಔಷಧಗಳ ಉತ್ಪಾದನೆಯ ವ್ಯವಸ್ಥೆ ಅವರಲ್ಲಿದೆ. ಆದರೆ ಅವರು ಉತ್ಪಾದಿಸುವ ಆ ಔಷಧಗಳನ್ನು ಪಶ್ಚಿಮ ರಾಷ್ಟ್ರಗಳಲ್ಲಿ ಮಾರುವಂತಿಲ್ಲ. ಆದುದರಿಂದ ಅವುಗಳನ್ನು ಭಾರತದಲ್ಲಿ ತಂದು ಸುರಿಯುತ್ತಾರೆ. ಕ್ಷಯರೋಗ ಮತ್ತು ಕುಷ್ಠರೋಗದ ಮದ್ದುಗಳು ತುಂಬ ಅಗ್ಗ. ಅವುಗಳ ಉತ್ಪಾದನೆಯಲ್ಲಿ ಬಂಡವಾಳ ತೊಡಗಿಸುವುದು ಮೂರ್ಖತನ. ಆದುದರಿಂದ ಅವುಗಳ ಉತ್ಪಾದನೆ ಸೀಮಿತ. ಟಾನಿಕ್ಕುಗಳಷ್ಟು ಲಾಭದಾಯಕ ಬೇರಾವುದೂ ಇಲ್ಲ. ಆದುದರಿಂದ ಅವುಗಳನ್ನು ಹೇರಳವಾಗಿ ತಯಾರಿಸುತ್ತಾರೆ. ಬಗೆಬಗೆಯ ಜಾಹಿರಾತುಗಳಿಂದ ಜನರನ್ನು ಮರುಳುಗೊಳಿಸಿ ಮಾರುತ್ತಾರೆ.

ಬಹುರಾಷ್ಟ್ರ ಕಂಪನಿಗಳ ಹಿಡಿತದಿಂದ ನಾವು ಪಾರಾಗುವುದು ಹೇಗೆ ? ಔಷಧಗಳಿಗೆ ಸಂಬಂಧಿಸಿದಂತೆ ಸಮರ್ಪಕವಾದ ರಾಷ್ಟ್ರನೀತಿ ರೂಪುಗೊಳ್ಳಬೇಕು. ಅದನ್ನು ಪರಿಣಾಮ ಕಾರಿಯಾಗಿ ಕಾರ್ಯಗತ ಮಾಡಬೇಕು. ಆಗ ಮಾತ್ರ ಅದು ಸಾಧ್ಯ. ಪ್ರಬಲವಾದ ಸಾರ್ವಜನಿಕ ಅಭಿಪ್ರಾಯ ಇದನ್ನು ಸಾಧಿಸ ಬಲ್ಲದು. ಅಂಥ ಸಾರ್ವಜನಿಕ ಅಭಿಪ್ರಾಯ ರೂಪುಗೊಳ್ಳಲು ಜನಪ್ರಿಯ ವೈದ್ಯಕೀಯ ಬರವಣಿಗೆ ಶ್ರಮಿಸಬೇಕು.

ಪರ್ಯಾಯ ವೈದ್ಯಕೀಯ ಪದ್ಧತಿಗಳು ಎಂದು ಕರೆದುಕೊಳ್ಳುತ್ತಿರುವ ಆಯುರ್ವೇದ, ಯುನಾನಿ, ಹೋಮಿಯೋಪತಿ, ಸಿದ್ಧ, ನೈಸರ್ಗಿಕ ಚಿಕಿತ್ಸೆ ಮುಂತಾದವು ಯಶಸ್ವಿಯಾಗಿ ಜನರಲ್ಲಿ ಗಲಿಬಿಲಿ ಉಂಟುಮಾಡಿವೆ. ವಿಜ್ಞಾನ ಮತ್ತು ವಿಜ್ಞಾನ ಮಾರ್ಗಗಳನ್ನು ಮಾನದಂಡವಾಗಿಟ್ಟುಕೊಂಡು, ಸ್ವಂತವಾಗಿ ಯೋಜನೆ ಮಾಡುವವರ ಪೇಚಾಟವೇನೆಂದರೆ, ಈ ಒಂದೊಂದು ಪದ್ಧತಿಯೂ ಸತ್ಯ ಉಳ್ಳದ್ದು, ಅಂಗೀಕಾರಾರ್ಹವಾದದ್ದು ಎಂಬ ಮಾತು ಅವರಿಗೆ ಅವೈಜ್ಞಾನಿಕವಾಗಿ ಕಾಣಿಸುತ್ತದೆ. ವಿವಿಧ ಪದ್ಧತಿಗಳಲ್ಲಿ ಬಳಸುವ ಔಷಧ ವಸ್ತುಗಳು ಬೇರೆ ಬೇರೆ ಇರುವುದು ಸಾಧ್ಯ. ಅವುಗಳಲ್ಲಿ ಕೆಲವು ಸತ್ವಯುತವಾದವಿರಬಹುದು. ವೈಜ್ಞಾನಿಕ ಪರಿಶೀಲನೆ ನಡೆಸಿ ನಿಜವಾಗಿಯೂ ಸತ್ವಯುತವಾದವನ್ನು ಪತ್ತೆ ಹಚ್ಚಿ ಅವುಗಳಿಗೆ ವೈಜ್ಞಾನಿಕ ವೈದ್ಯ ಪದ್ಧತಿಯಲ್ಲಿ (ಆಲೋಪತಿಯಲ್ಲಿ) ಸ್ಥಾನ ನೀಡಬೇಕು, ನಿಜ. ದಕ್ಷಿಣ ಅಮೇರಿಕದ ಆದಿವಾಸಿಗಳಿಂದ ಪಡೆದ ಕ್ವಿನೀನ್ ಬಳಗದ ಆಲ್ಕಲಾಯ್ಡ್‌ಗಳು ಮತ್ತು ಭಾರತೀಯ ದೇಶೀ ವೈದ್ಯರಿಂದ ಪಡೆದ ರಿಸರ್ಪೀನ್ ಬಳಗದ ಆಲ್ಕಲಾಯ್ಡ್‌ಗಳು ವಾಸ್ತವವಾಗಿ ಹಾಗೆ ಬಂದು ಸೇರಿರುವ ಔಷಧ ವಸ್ತುಗಳು. ಆದರೆ ವೈದ್ಯಕೀಯ ಸಿದ್ಧಾಂತಗಳ ವಿಷಯವೇ ಬೇರೆ. ಆಯುರ್ವೇದಕ್ಕೆ ಆಧಾರವಾಗಿರುವ ಪಂಚಭೂತಗಳ ಕಲ್ಪನೆಗೆ ಆಧುನಿಕ ರಸಾಯನ ವಿಜ್ಞಾನದಲ್ಲಿ ಸ್ಥಾನವಿಲ್ಲ. ಅಂತೆಯೇ ತ್ರಿದೋಷಗಳ ಕಲ್ಪನೆಯೂ ಹೋಮಿಯೋಪತಿಯ similia similibus curentur ಹಾಗು potentization ಕಲ್ಪನೆಗಳು. ಅವೈಜ್ಞಾನಿಕ ಎಂಬ ಬಗ್ಗೆ ಸಂದೇಹಕ್ಕೆ ಆಸ್ಪದವೇ ಇಲ್ಲ.

ಆದರೆ ವಸ್ತುತಃ ನಾವು ನೋಡುತ್ತಿರುವುದೇನು ? ಸರ್ಕಾರ ನಡೆಸುವವರು ಎಲ್ಲ ಪದ್ಧತಿಗಳು ಬಗ್ಗೆಯೂ ಪ್ರಶಂಸೆಯ ಮಾತಾಡುತ್ತಾರೆ. ವಿವಿಧ ಪದ್ಧತಿಗಳ

ಆಸ್ಪತ್ರೆಗಳಿಗೆ ಮತ್ತು ಕಾಲೇಜುಗಳಿಗೆ ಸಾರ್ವಜನಿಕ ಬೊಕ್ಕಸದಿಂದ ಹಣ ಸುರಿಯುತ್ತಾರೆ. ಸಾರ್ವಜನಿಕ ಜೀವನದಲ್ಲಿ ಪ್ರತಿಷ್ಠಿತರಾದವರನ್ನು ತೃಪ್ತಿಪಡಿಸುವುದಕ್ಕೋ ರಾಜಕೀಯವಾಗಿ ತಮ್ಮ ಬುಡವನ್ನು ಭದ್ರ ಮಾಡಿಕೊಳ್ಳುವುದಕ್ಕೋ ಮಂತ್ರಿಗಳಾದವರು ಆ ಕೆಲಸ ಮಾಡುತ್ತಿರಬಹುದು. ಆದರೆ ಸಾರ್ವಜನಿಕರ ಮೇಲೆ ಅದರಿಂದಾಗುವ ಪರಿಣಾಮ ಒಳ್ಳೆಯದಲ್ಲ.

ಸಾರ್ವಜನಿಕರಿಗೆ ಈ ಬಗ್ಗೆ ಸರಿಯಾದ ತಿಳಿವಳಿಕೆ ಕೊಡಬೇಕಾದವರು ವೈದ್ಯವಿಜ್ಞಾನದಲ್ಲಿ ಪರಿಣತರಾದವರು. ಪರ್ಯಾಯ ವೈದ್ಯ ಪದ್ಧತಿಗಳೆಂಬವು ವೈಜ್ಞಾನಿಕ ದೃಷ್ಟಿಯಿಂದ ನೋಡುವ ವೈದ್ಯೇತರನಿಗೆ ಹೇಗೆ ಕಾಣಿಸುವವು ಎಂಬುದನ್ನು ಈ ಹಿಂದೆ ವಿಶ್ಲೇಷಿಸಲಾಗಿದೆಯಷ್ಟೆ. ಖಾಸಗಿ ಸಂಭಾಷಣೆಯಲ್ಲಿ ಪ್ರತಿಷ್ಠಿತ ವೈದ್ಯರೆಲ್ಲರೂ ಮೇಲಿನ ಆ ದೃಷ್ಟಿಕೋನವನ್ನು ಅನುಮೋದಿಸುವುದು ನನ್ನ ಅನುಭವಕ್ಕೆ ಬಂದಿದೆ. ಆದರೆ ಜನಪ್ರಿಯ ವೈದ್ಯಕೀಯ ಬರವಣಿಗೆಯಲ್ಲಿ ತೊಡಗಿರುವ ಯಾರೂ ಇದುವರೆಗೆ ಈ ಪ್ರಶ್ನೆಯನ್ನು ಕುರಿತು ವಿಷಯ ನಿಷ್ಠೆಯಿಂದ ಬರೆದಿಲ್ಲ. ಇಂಥ ವಿಷಯಗಳ ಬಗ್ಗೆ ಬರೆದು ಅನಾವಶ್ಯಕವಾಗಿ ಏಕೆ ವಿವಾದಕ್ಕೊಳಗಾಗಬೇಕು ಎಂಬ ಹಿಂಜರಿಕೆಯೇ ಇದಕ್ಕೆ ಕಾರಣವಿರಬಹುದು. ಈ ಬಗ್ಗೆ ಬರೆದಾಗ ವಿವಾದಕ್ಕೊಳಗಾಗುವುದೇನೋ ನಿಜ. ಆದರೆ ಅದು ಅನಾವಶ್ಯಕವಾಗಿ ಅಲ್ಲ ಎಂಬುದು ನನ್ನ ನಮ್ರ ನಿವೇದನೆ. ಸಾರ್ವಜನಿಕರಿಗೆ ಈ ವಿಷಯದಲ್ಲಿ ಸರಿಯಾದ ಮಾರ್ಗದರ್ಶನ ನೀಡುವುದು ತಮ್ಮ ಸಾಮಾಜಿಕ ಜವಾಬ್ದಾರಿ ಎಂಬುದನ್ನು ವೈದ್ಯರು ಅರಿಯಬೇಕು. ಪವಾಡಗಳನ್ನೂ ಜ್ಯೋತಿಷ್ಯವನ್ನೂ ಮತ್ತಿತರ ಮೂಢನಂಬಿಕೆಗಳನ್ನೂ ಅಲ್ಲಗಳೆದು ವಿವಾದಕ್ಕೊಳಗಾಗಿರುವ ವಿಜ್ಞಾನಿಗಳಿಲ್ಲವೆ ? ವೈದ್ಯರೂ ಅಂಥ ಪರಿಸ್ಥಿತಿಯನ್ನು ಎದುರಿಸಬೇಕು. ವಿಜ್ಞಾನಕ್ಕೆ ನಿಷ್ಠೆ ಉಳ್ಳ ವೈದ್ಯರು ವಿವಾದಕ್ಕೆ ಹೆದರಿ ಈ ವಿಷಯಗಳ ಬಗ್ಗೆ ತಮ್ಮ ನಿಲುವನ್ನು ಬಹಿರಂಗಪಡಿಸಲು ನಿರಾಕರಿಸಿದರೆ ಅದು ವಿಜ್ಞಾನಕ್ಕೂ ಅಪಚಾರ, ಸಮಾಜಕ್ಕೂ ಅಪಚಾರ.

●

ವೈದ್ಯಕೀಯ ಸಾಹಿತ್ಯದಲ್ಲಿ ಪಾರಿಭಾಷಿಕ ಪದಗಳ ಸಮಸ್ಯೆ

—ಡಾ|| ಪಿ. ಎಸ್. ಶಂಕರ್

ವಿಜ್ಞಾನ ಮತ್ತು ಮಾನವಿಕ ಕ್ಷೇತ್ರಗಳಲ್ಲಿ ವಿಶೇಷ ಅರ್ಥ ನೀಡುವ ಶಬ್ದಗಳನ್ನು ಪಾರಿಭಾಷಿಕ ಪದಗಳೆಂದು ಕರೆಯಲಾಗುತ್ತಿದೆ. ವೈದ್ಯಕೀಯ ರಂಗದಲ್ಲಿ ಕಾರ್ಯ ನಿರ್ವಹಿಸುವ ವ್ಯಕ್ತಿಗಳಿಗೆ ಆ ಶಬ್ದ ನಿರ್ದಿಷ್ಟ ಅಂಶದ ತಿಳಿವಳಿಕೆಯನ್ನುಂಟು ಮಾಡುತ್ತದೆ.

ರೋಗಿಯೊಬ್ಬನನ್ನು ಪರೀಕ್ಷೆ ಮಾಡಿದ ನಂತರ ಆತನಿಗೆ ಮೈಟ್ರಲ್ ಸ್ಟಿನೋಸಿಸ್ ಇದೆ ಎಂದು ತನ್ನ ಅಭಿಪ್ರಾಯ ಸೂಚಿಸಿದಾಗ ಆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ರೋಗ ಏನು ? ಎಂಬುದರ ಕಲ್ಪನೆ ದೊರೆಯುತ್ತದೆ. ಆದರೆ ಆ ಕ್ಷೇತ್ರಕ್ಕೆ ಅಪರಿಚಿತನಾದ ವ್ಯಕ್ತಿಗೆ ಏನೂ ಗೊತ್ತಾಗುವುದಿಲ್ಲ. ಹೃದಯದ ಹಜಾರದಿಂದ ಕುಕ್ಷಿಗೆ ವ್ಯಾಕೋಚನ ಕಾಲದಲ್ಲಿ ರಕ್ತ ಹರಿದು ಬರುತ್ತದೆ. ಹಜಾರ ಮತ್ತು ಕುಕ್ಷಿಯ ಮಧ್ಯ ಕ್ರಿಸ್ತ ಧರ್ಮಾಧಿಕಾರಿ ಪೇಟದ ಮೊನೆ ಹೋಲುವ ಎರಡು ದಳದ ಕವಾಟ. ಈ ದಳಗಳ ಅಂಟಿಕೆಯಿಂದ ಕವಾಟದ ಹಾದಿ ಕಿರಿದಾಗಿದ್ದರೆ ಅದು ಕುಗ್ಗಿದ ಮಕುಟ (ಮೈಟ್ರಲ್ ಸ್ಟಿನೋಸಿಸ್). ಆ ಶಬ್ದದ ಅರ್ಥದ ಬಗ್ಗೆ ಇಷ್ಟು ವಿವರಣೆ ನೀಡಬೇಕಾಗುತ್ತದೆ. ಹಾಗಾಗಿ ವಿಜ್ಞಾನ ಅಥವಾ ಇನ್ನಿತರ ಶಾಸ್ತ್ರಗಳ ಪರಿಚಯ ಹೊಂದಲು ವಿಶಿಷ್ಟ ಅರ್ಥದಲ್ಲಿ ಬಳಸುವ ಪದಗಳ ತಿಳಿವಳಿಕೆ ಹೊಂದುವುದು ಅವಶ್ಯಕವಾಗಿದೆ.

ಸಾಮಾನ್ಯವಾಗಿ ಈ ಪದಗಳು ಸಂಕ್ಷಿಪ್ತ. ಥೈರಾಯಿಡ್, ಪ್ಯಾಂಕ್ರಿಯಾಸ್, ಸೆರೆಬ್ರಂ, ಸೆರೆಬೆಲ್ಲಂ, ಪಾನ್ಸ್, ಲಿಂಫ್. ಎರಡು ಮೂರು ಶಬ್ದಗಳು ಸೇರಿದಾಗ ಸಾಮಾನ್ಯವಾಗಿ ಅವುಗಳನ್ನು ಪ್ರತಿಶಬ್ದದ ಮೊದಲ ಅಕ್ಷರ ಸೇರಿಸಿ ಹೊಸ ಪದದಿಂದ ಸಂಕೇತಿಸಲಾಗುತ್ತದೆ. ಉದಾಹರಣೆಗೆ ಸಿಟಿ, ಇಎಸ್ಆರ್, ಇಸಿಜಿ, ಸಿಎಸ್ಎಫ್, ಇಇಜಿ, ಒಟಿ, ಒಪಿಡಿ, ಐಎಂ, ಪಿವಿ ಎಂಬ ಎರಡು ಮೂರು ಶಬ್ದಗಳು ಅನುಕ್ರಮವಾಗಿ ಕಂಪ್ಯೂಟರ್‌ನಿಂದಾದ ಹಂತ ಹಂತ ಚಿತ್ರಣ, ಕೆಂಪು ರಕ್ತ ಕಣಗಳು ತಳ ಸೇರುವ ವೇಗಗತಿ, ವಿದ್ಯುತ್ ಹೃದಯ ಚಿತ್ರ, ಮಿದುಳು–ಮಿದುಳು ಬಳ್ಳಿದ್ರವ, ವಿದ್ಯುತ್ ಮಿದುಳು ಚಿತ್ರ, ಶಸ್ತ್ರ ಚಿಕಿತ್ಸಾ ಕೊಠಡಿ, ಹೊರ ರೋಗಿ ವಿಭಾಗ, ಶಿರೆಯ ಮೂಲಕ ಸ್ನಾಯು ವಿನೊಳಗೆ ಮತ್ತು ಗುದನಾಳದಲ್ಲಿ ಬೆರಳು ತೂರಿಸಿ ಎಂಬ ಅರ್ಥವನ್ನು ವೈದ್ಯ–ವೈದ್ಯ ವಿದ್ಯಾರ್ಥಿಯ ಸ್ಮೃತಿಪಟಲದ ಮೇಲೆ ತಂದುಕೊಡುತ್ತದೆ. ನಾಲ್ಕು–ಐದು ಶಬ್ದಗಳ ಮೊದಲ ಅಕ್ಷರ ಸೇರಿ ರೂಪುಗೊಂಡ ಹೊಸ ಶಬ್ದ ಅದರ ಮೂಲ ವಿಸ್ತೃತ ಹೆಸರನ್ನು ಮರೆಯಾಗಿಸಿರುವ ಉದಾಹರಣೆಗಳು. ಏಡ್ಸ್, ಲೇಸರ್, ಎಸ್ಟರ್. ಈ ಬಗೆಯ ಶಬ್ದಗಳು ವಿಜ್ಞಾನ ಬರವಣಿಗೆಯಲ್ಲಿ ಸಾಮಾನ್ಯವಾಗಿ ಬಳಸಲ್ಪಡುತ್ತವೆ. ಅವುಗಳ ಉಪಯೋಗ ಅವಶ್ಯಕ ಮತ್ತು ಅನಿವಾರ್ಯ.

ಪಾರಿಭಾಷಿಕ ಪದಗಳ ಬಗ್ಗೆ ಡಾ. ಪ್ರಧಾನ ಗುರುದತ್ತರು ನೀಡಿದ ವಿವರಣೆ ಅರ್ಥಪೂರ್ಣವಾಗಿದೆ. 'ಪಾರಿಭಾಷಿಕ ಪದಗಳು ಒಂದು ಸಮಗ್ರ ಪ್ರಕ್ರಿಯೆಯನ್ನು, ಪ್ರಕ್ರಿಯೆಯ ಒಂದು ಅಥವಾ ಹಲವು ಅಂಶಗಳನ್ನು ಇಲ್ಲವೇ ಪ್ರಕ್ರಿಯೆಯ ಫಲಿತಾಂಶವನ್ನು ನಮ್ಮ ಕಣ್ಣ ಮುಂದೆ ತರುತ್ತವೆ. ಆ ಶಬ್ದಗಳು ಪ್ರಕ್ರಿಯೆಯ ಬೆಳಕಿನ ಕಿಂಡಿಗಳಾಗಿವೆ.

ವಿಜ್ಞಾನ ಕ್ಷೇತ್ರದಲ್ಲಿ ಬಳಸುವ ಪಾರಿಭಾಷಿಕ ಪದಗಳು ಸಾಮಾನ್ಯ ಬಳಕೆಯಲ್ಲಿರಬಹುದು ಇಲ್ಲವೇ ಬೇರೆ ಭಾಷೆಗಳಿಂದ ತೆಗೆದುಕೊಂಡು ಅದೇ ರೂಪದಲ್ಲಿ ಇಲ್ಲವೆ ಮಾರ್ಪಾಟು ಮಾಡಿ ಬಳಸುತ್ತಿರಬಹುದು. ಪಾರಿಭಾಷಿಕ ಪದಗಳು ಸಂದರ್ಭಕ್ಕನುಗುಣವಾಗಿ ಸೃಷ್ಟಿಯಾಗುತ್ತಿರುತ್ತವೆ. ಅಂತಹ ಪದಗಳು ಹಿಂದೆ ಬಳಕೆಯಲ್ಲಿರುವುದಿಲ್ಲ. ವೈಜ್ಞಾನಿಕ ಕ್ಷೇತ್ರದಲ್ಲಿ ಜರುಗುವ

ಆವಿಷ್ಕಾರ ಹೊಸ ಶಬ್ದ ಸೃಷ್ಟಿಗೆ ಅನಿವಾರ್ಯವೆನಿಸುತ್ತದೆ. ಉದಾಹರಣೆಗೆ ಪೆನಿಸಿಲಿನ್, ಅಪೆಂಡಿಕ್ಸ್, ಡಯಾಲಿಸಿಸ್, ಲೇಸರ್, ಏಡ್ಸ್, ವಿಟಮಿನ್, ಜೀನ್, ಕ್ರೋಮೋಸೋಂ, ಡಿಎನ್‌ಎ, ಆರ್‌ಎನ್‌ಎ. ಹಿಂದೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವೈದ್ಯಕೀಯ ಶೋಧಗಳ ಪ್ರಕಟಣೆ, ಗ್ರೀಕ್-ಲ್ಯಾಟಿನ್ ಭಾಷೆಗಳಲ್ಲಿ ಜರುಗುತ್ತಿದ್ದಿತು. ಸಾಂಸ್ಕೃತಿಕ ಕ್ರಾಂತಿಯ ನಂತರ ಇಂಗ್ಲೀಷ್, ಫ್ರೆಂಚ್, ಜರ್ಮನ್ ಮೊದಲಾದ ಭಾಷೆಗಳಲ್ಲಿ ಅದರ ಪ್ರಕಟಣೆ ಜರುಗತೊಡಗಿತು. ಹೀಗಾಗಿ ಅನೇಕ ಪದಗಳು ಗ್ರೀಕ್ ಮತ್ತು ಲ್ಯಾಟಿನ್ ಶಬ್ದಕಾಂಡಗಳು ಹಾಗೂ ಪ್ರತ್ಯಯಗಳನ್ನು ಬಳಸಿಕೊಂಡು ಸೃಷ್ಟಿಯಾಗಿವೆ. ಅಂತಹ ಚಟುವಟಿಕೆಗಳು ಕನ್ನಡದ ವೈಜ್ಞಾನಿಕ ರಂಗದಲ್ಲಿ ಜರುಗಿಲ್ಲವಾದುದರಿಂದ ನಾವು ಸಂಸ್ಕೃತ ಇಲ್ಲವೇ ಇಂಗ್ಲಿಷ್ ಮೂಲದಿಂದ ದೊರಕಿಸಿದ ಶಬ್ದಗಳನ್ನು ಉಪಯೋಗಿಸುತ್ತಿದ್ದೇವೆ.

ಹೀಗೆ ನಾವು ಪಾರಿಭಾಷಿಕ ಪದಗಳನ್ನು ಬಳಸುವಾಗ ಅವುಗಳ ಅರ್ಥ ಅಪರಿಚಿತ. ಅದರ ಅರ್ಥ ತಿಳಿದುಕೊಂಡು ನಮ್ಮ ಭಾಷೆಯಲ್ಲಿ ಅದರ ವಿವರಣೆ ನೀಡುವಾಗ ಆ ಪದಗಳನ್ನು ಹಾಗೆಯೇ ಬಳಸಬೇಕೆ ಅಥವಾ ಬದಲಾವಣೆ ಮಾಡಬೇಕೇ ಎಂಬ ಪ್ರಶ್ನೆ ಎದುರಾಗುತ್ತದೆ. ಈ ಪ್ರಶ್ನೆಗೆ ಉತ್ತರ ಹುಡುಕಲು ಭಾರತ ಸರಕಾರ ರಚಿಸಿದ ವೈಜ್ಞಾನಿಕ ಮತ್ತು ತಾಂತ್ರಿಕ ಶಬ್ದಾವಳೀ ಆಯೋಗ ಪಾರಿಭಾಷಿಕ ಶಬ್ದಗಳ ಬಗ್ಗೆ ಕೆಲವೊಂದು ನಿಯಮಗಳನ್ನು ರೂಪಿಸಿತು.

ಅದರ ಪ್ರಕಾರ ಕೆಳಕಂಡ ಸಂದರ್ಭಗಳಲ್ಲಿ ಭಾಷಾಂತರ ಅನಗತ್ಯ ಮತ್ತು ಆ ಪದಗಳನ್ನು ಹಾಗೆಯೇ ಉಳಿಸಿಕೊಳ್ಳುವುದು ಸೂಕ್ತ.

೧. ಅಂತರ ರಾಷ್ಟ್ರೀಯ ಪದಗಳು (ಸ್ಟ್ರೆಪ್ಟೋಕಾಕಸ್, ಸ್ಟೆಫೈಲೋಕಾಕಸ್, ಕಾಲರಾ, ಮಲೇರಿಯ, ಇನ್‌ಫ್ಲುಯೆಂಜಾ, ಟೈಫಾಯಿಡ್, ಸಿಂಕೋನಾ, ಪೆನಿಸಿಲಿನ್)

೨. ತೂಕ ಮತ್ತು ಅಳತೆಯ ಮೂಲಮಾನಗಳು (ಮೀಟರ್, ಗ್ರಾಂ,

ಕೆಲೋರಿ, ರಾಡ್, ಲೀಟರ್, ಯುನಿಟ್, ಮಿಲಿಗ್ರಾಂ, ಮಿಲಿ ಲೀಟರ್ ಮೈಕ್ರೊಗ್ರಾಂ, ಮೈಕ್ರಾನ್)

೩. ಅನ್ವೇಷಣೆ ಅಥವಾ ಸಂಶೋಧನೆ ಮಾಡಿದ ವ್ಯಕ್ತಿಗಳ ಹೆಸರಿನ ಪದಗಳು (ಬ್ರುಸೆಲ್ಲ, ರಾಂಜೆನ್, ಟಾಕಾಯಯಾಷು, ಸೆಲ್ಸಿಯಸ್, ಬೆಬೆನ್‌ಸ್ಕಿ, ಪಪಾನಿಕೋಲೋ, ಗ್ರಾಮ್, ಫ್ಯಾರನ್‌ಹೀಟ್, ಝೀಲ್-ನೀಲ್ಸನ್, ಬ್ರೈಟ್, ಟಾರ್, ರೈಲ್, ಹಿಸ್‌ಹಂಟರ್, ಬೆಲ್, ಲೋಯರ್, ಡೌನ್).

೪. ಜಾಗತಿಕ ಬಳಕೆ ಪಡೆದ ಪದಗಳು (ಲೇಸರ್, ಕಂಪ್ಯೂಟರ್, ರೇಡಿಯೋ, ಎಂಡೋಸ್ಕೋಪ್, ಸ್ಟೆಥೋಸ್ಕೋಪ್, ಅಲ್ಟ್ರಾಸೌಂಡ್)

೫. ಮೂಲ ಮತ್ತು ಸಂಯುಕ್ತ ವಸ್ತುಗಳ ವೈಜ್ಞಾನಿಕ ಹೆಸರುಗಳು (ಆಕ್ಸಿಜನ್, ಹೈಡ್ರೋಜನ್, ಬೇರಿಯಂ, ಡೈಆಕ್ಸೈಡ್, ಹಿಮಟಾಕ್ಸಿಲಿನ್, ಇಯೋಸಿನ್)

೬. ದ್ವಿನಾಮ ಪದಗಳು (ಟಾಕ್ಸೋಪ್ಲಾಸ್ಮಾ ಗೊಂಡೈ, ಸಾಲ್ಮೋನೆಲ್ಲ ಟೈಫಿ ನ್ಯೂಮೋಸಿಸ್ಟಿಸ್ ಕಾರಿನಿಯೈ, ಅಂಕೈಲೋ ಸ್ಟೋಮಾ ಡಯೋಡಿಸೇಲ್ ನಿಕೇಟರ್ ಅಮೆರಿಕಾನಸ್, ಎಂಟಮೀಬ, ಹಿಸ್ಟೋ ಲಿಟಿಕಾ)

ಅಲ್ಲದೆ ಶಬ್ದಾವಳಿ ಆಯೋಗವು ಕೆಳಕಂಡ ಸನ್ನಿವೇಶಗಳಲ್ಲಿ ಬಳಕೆಯಲ್ಲಿ ಬಂದು ಉಳಿದಿರುವ ಪದಗಳು ಸರಿಯಾಗಿದ್ದರೆ ಅವುಗಳನ್ನು ಹಾಗೆಯೇ ಉಳಿಸಿಕೊಳ್ಳಬೇಕು ಎಂದು ಸಲಹೆ ಮಾಡಿದೆ.

೧. ದೇಶೀಯ ಪದಗಳು : ಸೂಕ್ಷ್ಮಜೀವಿ (Micro Organism) ಸೂಕ್ಷ್ಮ ದರ್ಶಕ (Microscope), ಅಣು (Molecule), ಪರಮಾಣು

೨. ಪಾಶ್ಚಿಮಾತ್ಯ ಭಾಷೆಗಳ ಪದಗಳು (ಮಶಿನ್, ಡಾಕ್ಟರ್, ನರ್ಸ್, ಗ್ಲವ್ಸ್, ಗೌನ್, ವಾರ್ಡ್‌ಬಾಯ್, ಟ್ರಾಲಿ, ಆಯಾ, ಮಿಡ್‌ವೈಫ್,

ಲ್ಯಾಬೊರೇಟರಿ, ಆಪರೇಷನ್, ಎಮರ್ಜನ್ಸಿ, ಗ್ಲುಕೋಸ್, ಸಲೈನ್, ಎನಿಮಾ)

ವೈಜ್ಞಾನಿಕ ರಂಗದಲ್ಲಿ ಜರುಗಿದ ಘಟನಗಳನ್ನು ವಿವರಿಸಲು ದೇಹದ ರಚನೆ ಮತ್ತು ಕಾರ್ಯವನ್ನು ವಿವರಿಸಲು ಹೊಸ ಶಬ್ದಗಳು ಸೃಷ್ಟಿಯಾಗಿವೆ. ಶರೀರ ರಚನಾ ಶಾಸ್ತ್ರದ ಅಧ್ಯಯನ ಕಾಲದಲ್ಲಿ ಅವುಗಳಲ್ಲನೇಕ ಶಬ್ದಗಳು ಆಗ ಪ್ರಚಲಿತವಿದ್ದ ಗ್ರೀಕ್ ಮತ್ತು ಲ್ಯಾಟಿನ್ ಮೂಲದಿಂದ ದೊರಕಿಸಿದ ಅರ್ಹಯುಕ್ತ ತುಂಡು ಪದಗಳಿಂದ ರೂಪುಗೊಂಡವು. ಜನಬಳಕೆಯಲ್ಲಿರುವ ಪದಗಳನ್ನು ಉಪಯೋಗಿಸಿ ತಾವು ಕಂಡ ವಿಶೇಷವನ್ನು, ಅಂಗ ರಚನೆಯನ್ನು ಪ್ರಕ್ರಿಯೆಯನ್ನು ವಿವರಿಸಿದರು. ವೈದ್ಯ ವಿಜ್ಞಾನದಲ್ಲಿ ಬಳಸುತ್ತಿರುವ ಪಾರಿಭಾಷಿಕ ಶಬ್ದಗಳೆಲ್ಲ ಸುಮಾರು ೧೫೦ ತುಂಡು ಪದಗಳಿಂದ ಸೃಷ್ಟಿಯಾಗಿದೆಯೆಂದು ಅಂದಾಜು ಮಾಡಲಾಗಿದೆ. ಲ್ಯಾಟಿನ್ ಮೂಲದ ಈ ಪದಗಳು ಅದಕ್ಕೆ ಉದಾಹರಣೆಗಳು : (innominate ಹೆಸರಿಲ್ಲದ ; navicular ನಾವೆಯಾಕಾರದ ; pons ಸೇತು ; porta ದಿಡ್ಡೀ ಬಾಗಿಲು ; portar ಕೊಂಡೊಯ್ಯುವ ; quadrice ನಾಲ್ಕು ತಲೆ ; trigeminus ತ್ರಿವಳಿ ; vermiform ಹುಳು ರೂಪಿ ; detrusor ಕೆಳತಳ್ಳುವ ; cunieform ಬೆಣೆಯಾಕಾರ ; cochlea ಶಂಕು ; villus ಗೊಂಡೆ ; insula ದೀವು ; isthumus ಸೇತು ; jejunum ಖಾಲಿಯಿರುವ ; cauda ಬಾಲ ; vagus ಸಂಚಾರಿ ; caronary ಕಿರೀಟ ; biceps ಎರಡು ತಲೆ ; circumflex ಸುತ್ತು ಬಾಗಿದ ಗ್ರೀಕ್ ಮೂಲದ ಶಬ್ದಗಳಿಗೆ ಉದಾಹರಣೆಗಳು ಹೀಗಿವೆ : paylorus ದ್ವಾರಪಾಲಕ ; soma ದೇಹ ; saphanous ಗೋಚರ ; thalamus ಶಯ್ಯಾಗೃಹ ; thyroid ಗುರಾಣಿ ಆಕೃತಿ ; cremaster ಇಳಿಬಿದ್ದ ; deltoid ತ್ರಿಕೋನಾಕೃತಿ ; macrophage ಭಕ್ಷಕ ಕಣ ; azygos ಜೊತೆಯಿಲ್ಲದ ; chyle ರಸ)

ಲ್ಯಾಟಿನ್ ಮೂಲದಿಂದ ಬಂದ tres (ಮೂರು) ಮತ್ತು cuspid (ಮೊನೆ) ಎಂಬೆರಡು ಪದ ಸೇರಿಸಿ ಬಲ ಹೃದಯದ ಹಜಾರ ಮತ್ತು ಕುಕ್ಷಿಯ ಮಧ್ಯೆ ಇರುವ ಬಾಗಿಲಿಗೆ ಟ್ರೈಕಸ್ಪಿಡ್ ಕವಾಟವೆಂದು ಕರೆಯಲಾಗಿದೆ. ಈ

ಪದದ ಪ್ರಕಾರ ಪ್ರತಿಯೊಂದು ದಳವೂ ಮೂರು ಮೊನೆ ಹೊಂದಿದೆಯೆಂದು ತಿಳಿಸುತ್ತದೆ. ಆದರೆ ಪ್ರತಿಯೊಂದು ದಳ ಒಂದೇ ಮೊನೆ ಹೊಂದಿದೆ. ಆದರೂ ನಾವು ಅದನ್ನು ಮುಮ್ಮೊನೆ ಕವಾಟವೆಂದು ಕರೆಯಬೇಕಾಗುತ್ತದೆ. Quadri ceps ತೊಡೆಯ ಉದ್ದನೆ ಸ್ನಾಯು Quadri (ನಾಲ್ಕು) caput (ತಲೆ) ನಾಲ್ಕು ನಿರ್ದಿಷ್ಟ ಭಾಗಗಳನ್ನು ಪಡೆದಿದೆ. ಪ್ಯಾರಾ ಥೈರಾಯಿಡ್ ಗ್ರೀಕ್ ಶಬ್ದ. para ಎಂದರೆ ಬದಿಯ thyroid ಗುರಾಣಿ ಎಂದು ಥೈರಾಯಿಡ್ ಗ್ರಂಥಿಯ ಹಿಂಬದಿಯಿರುವ ಚಿಕ್ಕ ಗ್ರಂಥಿಗಳನ್ನು ಆ ಹೆಸರು ಸೂಚಿಸುತ್ತದೆ. ಮಿಕ್ಸಡೀಮ ಗ್ರೀಕ್ ಶಬ್ದ. myxa ಎಂದರೆ ಲೋಳೆ, Oedama ಎಂದರೆ ಉಬ್ಬು ರೋಗಿಯ ದೇಹ ಉಬ್ಬಿದಂತೆ ಕಾಣುವ ಈ ರೋಗದಲ್ಲಿ ಚರ್ಮದಡಿ ಪ್ರದೇಶದಲ್ಲಿ ಲೋಳೆಯಂತಹ ವಸ್ತು ಸಂಗ್ರಹವಾಗಿರುವುದಿಲ್ಲ, ಆದರೂ ಆ ಶಬ್ದವನ್ನು ಥೈರಾಕ್ಸಿನ್ ರಸದೂತದ ಪ್ರಮಾಣ ಕುಗ್ಗಿರುವ ರೋಗದ ಹೆಸರನ್ನಾಗಿ ನಾವು ಬಳಸುತ್ತೇವೆ.

ಪಾರಿಭಾಷಿಕ ಪದಗಳು ಅವು ಇರುವ ರೀತಿಯಲ್ಲಿ ಹಾಗೆಯೇ ನಮ್ಮ ನಮ್ಮ ಭಾಷೆಯಲ್ಲಿ ಬಳಸಬೇಕೇ ಅಥವಾ ಅವುಗಳಿಗೆ ಸಮಾನ ಪದಗಳನ್ನು ಸೃಷ್ಟಿ ಮಾಡಬೇಕೇ ಎಂಬ ಸಮಸ್ಯೆಯನ್ನು ನಾವು ಬಹುಕಾಲದಿಂದ ಎದುರಿಸುತ್ತಿದ್ದೇವೆ. ಇಂಗ್ಲಿಷ್ ಭಾಷೆಯ ಪಾರಿಭಾಷಿಕ ಶಬ್ದ ಭಂಡಾರ ಗ್ರೀಕ್ ಮತ್ತು ಲ್ಯಾಟಿನ್ ಮೂಲದಿಂದ ರೂಪಿತವಾಗಿರುವುದನ್ನು ಗಮನಿದ್ದೇವೆ. ಆ ಭಾಷೆಯ ಪದಗಳು ನಮ್ಮ ಭಾಷೆಯ ಜಾಯಮಾನಕ್ಕೆ ಹೊಂದಿಕೊಳ್ಳಬಹುದು. ಇಲ್ಲವೆ ಹೊಂದಿಕೊಳ್ಳದೆ, ಭಾಷಾ ಸೌಂದರ್ಯ ತಂದು ಕೊಡದೆ, ಭಾಷೆಯ ಓಟಕ್ಕೆ ಭಂಗವನ್ನುಂಟು ಮಾಡಬಹುದು. ನಮ್ಮ ಭಾಷೆಯ ರೂಢಿಗೆ ತುಂಬ ವಿಜಾತೀಯವಾಗಿ ತೋರುವ ಪದಗಳನ್ನು ನಮ್ಮ ಭಾಷೆಗೆ ಅಳವಡಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ. ಆಗ ಕನ್ನಡ ಭಾಷೆಗೆ ಹೊಂದಿಕೊಳ್ಳುವ ಮತ್ತೊಂದು ಸಮಾನ ಪದವನ್ನು ಸೃಷ್ಟಿ ಮಾಡಬೇಕಾಗುತ್ತದೆ. ಹಾಗೆ ಹೊಸಗನ್ನಡ ಪದವನ್ನು ಠಂಕಿಸುವಾಗ ಅದು ನಾಲ್ಕು ಬಗೆಯಲ್ಲಿ ಸುಲಭವಾಗಿರಬೇಕೆ ಎಂದು ಡಾ. ಡಿ. ವಿ. ಗುಂಡಪ್ಪನವರು ಅಭಿಪ್ರಾಯ ಪಟ್ಟಿದ್ದಾರೆ.

೧. ಅರ್ಥ : ಮಾತನ್ನು ಕಣ್ಣಿನಿಂದ ನೋಡಿದಾಗ ಇಲ್ಲವೆ ಕಿವಿಯಿಂದ ಕೇಳಿದಾಗ ಅದರ ತಾತ್ಪರ್ಯ ಸುಲಭವಾಗಿ ಮನಸ್ಸಿಗೆ ಹೊಳೆಯಬೇಕು.

೨. ನಿರ್ಧಾರ : ಒಂದು ಮಾತಿಗೆ ಒಂದು ಗೊತ್ತಾದ ಅರ್ಥವಿರಬೇಕೆ ವಿನಹ ಅದು ಎರಡು ಮೂರು ಅರ್ಥ ನೀಡುವಂತಿರಬಾರದು.

೩. ಉಚ್ಚಾರಣೆ : ಶಬ್ದ ಸುಲಭವಾಗಿದ್ದು ಅದನ್ನು ಎಲ್ಲರೂ ಬಾಯಿಂದ ನುಡಿಯುವುದಕ್ಕೆ ಮತ್ತು ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ತಕ್ಕಂತಿರಬೇಕು. ಮಾತು ಸರಳಾಕ್ಷರವುಳ್ಳದ್ದಾಗಿ ಗಾತ್ರದಲ್ಲಿ ಹಿತಮಿತವಾಗಿರಬೇಕು.

೪. ಪದಮೈತ್ರಿ : ಮಾತು ವಾಕ್ಯದಲ್ಲಿ ಹೊಂದಿಕೊಳ್ಳುವಂತೆ ಇರಬೇಕು.

ಈ ಸೂಚನೆಗಳು ಮೇಲು ನೋಟಕ್ಕೆ ಸುಲಭವಾಗಿ ಕಂಡರೂ ಅವುಗಳನ್ನು ವೈಜ್ಞಾನಿಕ ವಿಷಯಗಳ ಬರವಣಿಗೆಯಲ್ಲಿ ಪಾಲಿಸುವುದು ಕಷ್ಟಕರವೆಂದು ಡಿ.ವಿ.ಜಿ.ಯವರ ಅಭಿಪ್ರಾಯ ನಿಜಕ್ಕೂ ಸರಿ. ಭಾಷಾಂತರಕಾರ ತಾನೇ ಹೊಸ ಶಬ್ದಗಳನ್ನು ಮೂಲ ವಿಷಯಕ್ಕೆ ಸಮಂಜಸವಾಗಿರುವಂತೆ ರೂಪಿಸಬೇಕು. ಮೊದಲು ಆ ಶಬ್ದ ಅಪರಿಚಿತ. ಆದರೆ ಅದನ್ನು ಬಳಕೆ ಮಾಡುತ್ತ ಸಾಗಿದಂತೆ ಅದು ಪರಿಚಿತವಾಗುತ್ತದೆ. ಅದಕ್ಕಾಗಿ ಠಂಕಿಸಿದ ಶಬ್ದ ಮೂಲ ಅರ್ಥ ನೀಡಬೇಕು. ಶಬ್ದವನ್ನು ಓದಿದ ಕೂಡಲೇ ಒಂದೇ ಅರ್ಥವನ್ನು ಸೂಚಿಸಬೇಕು. ಆಗ ಅದರ ಅರ್ಥ ಹೆಚ್ಚು ಸ್ಫುಟವಾಗಿ ಅರ್ಥವಾಗುತ್ತದೆ. ಅಂತಹ ಪದವನ್ನು ನಾವು ನಿರ್ಮಿಸಲಾಗದಿದ್ದರೆ ಮೂಲ ಪದವನ್ನು ಬಳಸುವುದರಲ್ಲಿ ಯಾವ ತೊಂದರೆಯಿಲ್ಲ.

ಇಂಗ್ಲೀಷ್ ಭಾಷೆಯಲ್ಲಿ ಬಳಕೆಯಲ್ಲಿರುವ ಯಾವುದೇ ಶಬ್ದವನ್ನು ಹಾಗೆಯೇ ಉಳಿಸಿಕೊಂಡು ಬಳಸಬೇಕೇ ಅಥವಾ ಅದಕ್ಕೆ ಸಮಾನ ಶಬ್ದವನ್ನು ರೂಪಿಸುವುದು ಅಗತ್ಯವಿದೆಯೇ ಎಂಬುದನ್ನು ನಿರ್ಧರಿಸುವಾಗ ಕೆಳಕಾಣಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

೧. ಪದ ಅತ್ಯಂತ ಪಾರಿಭಾಷಿಕವಾದುದೇ ?

೨. ಸಂವಾದಿ ಪದಗಳನ್ನು ನಿರ್ಮಿಸುವ ಅಗತ್ಯವಿದೆಯೇ ?

೩. ನಮ್ಮ ಭಾಷೆಗೆ ಹೊಂದಿಕೊಳ್ಳಬಲ್ಲದೆ ?

ಪದವು ನಮ್ಮ ಭಾಷೆಗೆ ಹೊಂದಿಕೊಳ್ಳಬಲ್ಲದಾದರೆ ಅದು ಅತ್ಯಂತ ಪಾರಿಭಾಷಿಕವಾಗಿದ್ದರೂ ಸಹ ಅದನ್ನು ಹಾಗೆಯೇ ಬಳಸುತ್ತೇವೆ. ಅದನ್ನು ಹಾಗೆಯೇ ಉಳಿಸಿಕೊಳ್ಳಬೇಕು. ಉದಾಹರಣೆಗೆ ಮೈಟೋಕಾಂಡ್ರಿಯ, ರೈಬೋಸೋಮ್ ಈ ಪದಗಳು ವಿಜಾತೀಯವಾಗಿದ್ದರೂ ಅವುಗಳಿಗೆ ಸಂವಾದಿ ಪದಗಳನ್ನು ನಿರ್ಮಿಸದೆ ಹಾಗೆಯೇ ಬಳಸುತ್ತೇವೆ. ಅದೇ ರೀತಿ ಸಿರಿಂಜ್, ಎನಿಮಾ, ಅಲರ್ಜಿ, ಏಡ್ಸ್, ಕಾಂಡಂ ಶಬ್ದಗಳು ನಮ್ಮ ಭಾಷೆಯಲ್ಲಿ ಬಳಕೆಗೆ ಬಂದು ಬಿಟ್ಟಿವೆ. ಪೆನಿಸಿಲಿನ್ ಸ್ಟ್ರೆಪ್ಟೊಮೈಸಿನ್, ಕೋಬಾಲ್ಟ್, ಮ್ಯಾಂಗನೀಸ್, ಪೊಟ್ಯಾಸಿಯಂ, ಸೋಡಿಯಂ ಎಲ್ಲೆಡೆ ಹಾಗೆಯೇ ಉಳಿಯುತ್ತವೆ. ಆ ಏಕರೂಪತೆ ಅಗತ್ಯ. ಹಾಗೆ ಬಳಸಿದಾಗ ಆ ಪದಗಳು ಎಲ್ಲರಿಗೂ ಅರ್ಥವಾಗುತ್ತವೆ. ಅದೇ ರೀತಿ, ವೋಲ್ಟ್, ಟಾರ್, ಸೆಲ್ಸಿಯಸ್,ಪಾಸ್ಕಲ್,ಕಿಲೋಪಾಸ್ಕಲ್, ಕೆಲೋರಿ, ಕಿಲೋಗ್ರಾಂ, ಮಿಲಿಗ್ರಾಂ, ಮೀಟರ್, ಕಿಲೋಮೀಟರ್‌ಗಳನ್ನು ಬದಲಾವಣೆಯಿಲ್ಲದೆ ಬಳಸುತ್ತೇವೆ. ಒಂದು ವೇಳೆ ಸಂವಾದಿ ಪದದ ಅಗತ್ಯ ವಿದೆಯೆಂದು ನಿರ್ಧರಿಸಿದಲ್ಲಿ ಕೆಲವು ಬಾರಿ ಅದನ್ನು ಹೊಸದಾಗಿ ಸೃಷ್ಟಿಸುವ ಅಗತ್ಯವಿರುವುದಿಲ್ಲ. ಕನ್ನಡದಲ್ಲಿ ಆಗಲೇ ಬಳಕೆಯಲ್ಲಿರುವ ಪದವೊಂದನ್ನು ನಾವು ಉಪಯೋಗ ಮಾಡಬಹುದು. ಆಧುನಿಕ ವೈದ್ಯ ವಿಜ್ಞಾನ ನಮ್ಮ ನೆಲದಲ್ಲಿ ಕಾಲಿರಿಸುವುದಕ್ಕೆ ಮುಂಚೆಯೇ ಬಳಕೆಯಲ್ಲಿರುವ ಶಬ್ದವಾಗಿದ್ದರೆ ಅದನ್ನು ಹಾಗೆಯೇ ಉಳಿಸಿಕೊಳ್ಳಬೇಕು. ಉದಾಹರಣೆಗೆ ಕಲಿಜ, ಧಮನಿ, ನರ, ನಾಡಿ, ಪಿತ್ತ, ವಾತ, ಮೇಚ್ರೆ, ತೊರಳೆ, ವಿಷಮಜ್ವರ, ಮಂಗ, ಬಾವು, ನಾಯಿಕೆಮ್ಮು, ದಡಾರ, ಕ್ಷಯ, ಒಂದು ವೇಳೆ ಅಂತಹ ಪದ ಅಸಮರ್ಪಕ ವೆನಿಸಿದರೆ ಯೋಗ್ಯ ಪದವನ್ನು ಹುಡುಕಿ ಅದಕ್ಕೆ ಪ್ರಥಮ ಸ್ಥಾನವನ್ನು ಕೊಡ ಬೇಕು. ಉದಾಹರಣೆಗೆ ಆಕ್ಸಿಜನ್—ಆಮ್ಲಜನಕ, ಹೈಡ್ರೋಜನ್—ಜಲಜನಕ, ನೈಟ್ರೋಜನ್—ಸಾರಜನಕ, ಪ್ರೋಟೀನ್—ಸಸಾರ ಜನಕವಸ್ತು, ಕಾರ್ಬೊ ಹೈಡ್ರೇಟ್—ಶರ್ಕರ ಪಿಷ್ಟ. ಬೇರೊಂದು ಭಾಷೆಯಲ್ಲಿನ ಪದ ನಿರ್ದಿಷ್ಟ

ವಿಚಾರಕ್ಕೆ ಮತ್ತು ವಸ್ತುವಿಗೆ ಸಂಬಂಧಿಸಿರುತ್ತದೆ. ಅದಕ್ಕೆ ಸಮಾನಾಂತರ ಅರ್ಥವನ್ನು ನೀಡುವ ರೂಢಿಯಲ್ಲಿನ ಶಬ್ದವನ್ನು ಸುಲಭವಾಗಿ ಬಳಸುತ್ತೇವೆ. ಉದಾಹರಣೆಗೆ tablet ಗುಳಿಗೆ, Bile ಪಿತ್ತ, eye ಕಣ್ಣು, ear ಕಿವಿ, acid ಆಮ್ಲ, chest ಎದೆ, forehead ಹಣೆ, intestine ಕರುಳು ಇನ್ನು ಕೆಲವು ಕಡೆ ಆ ಶಬ್ದ ನಮ್ಮ ಭಾಷೆಯಲ್ಲಿ ಮೊದಲು ಇರುವುದಿಲ್ಲ. ಅದನ್ನು ನಮ್ಮ ಭಾಷೆಯ ಜಾಯಮಾನಕ್ಕೆ ಒಗ್ಗುವಂತೆ ಭಾಷಾಂತರ ಮಾಡಿ ಬಳಸುತ್ತೇವೆ. ಸತು ಸೀಸ, mercury ಪಾದರಸ, steel ಉಕ್ಕು, blood pressure ರಕ್ತ ಒತ್ತಡ, surgeon ಶಸ್ತ್ರವೈದ್ಯ, radiation ವಿಕಿರಣ, family welfare ಕುಟುಂಬ ಕಲ್ಯಾಣ, hospital ಆಸ್ಪತ್ರೆ, asbestos ಕಲ್ನಾರು.

ಪಾರಿಭಾಷಿಕ ಶಬ್ದಗಳನ್ನು ನಮ್ಮ ಭಾಷೆಯಲ್ಲಿ ಹಾಗೆಯೇ ಉಳಿಸಿಕೊಳ್ಳಬೇಕೇ ಅಥವಾ ಅದಕ್ಕೆ ಸಮಾನ ಪದವನ್ನು ಸೃಷ್ಟಿ ಮಾಡಬೇಕೇ ಎಂಬುದರ ಬಗ್ಗೆ ಶ್ರೀ ಜಿ. ಆರ್. ಲಕ್ಷ್ಮಣರಾಯರು ನೀಡಿರುವ ಸೂಚನೆಗಳು ಗಮನಾರ್ಹ.

ಅತ್ಯಂತ ಪಾರಿಭಾಷಿಕವಾಗಿರುವ ಪದಕ್ಕೆ ಜನ್ಯಪದದ ಅಗತ್ಯವಿದ್ದಾಗ ಮೂಲ ಅಥವಾ ಜನ್ಯಪದ ವಿಜಾತೀಯವಾಗಿದ್ದರೆ ಅದಕ್ಕೆ ಸಮಾನ ಪದ ಸೃಷ್ಟಿ ಮಾಡಬೇಕು. ಅವು ವಿಜಾತೀಯವಾಗಿಲ್ಲದಿದ್ದರೆ ಅವುಗಳನ್ನು ಹಾಗೆಯೇ ಬಳಸಿಕೊಳ್ಳಬೇಕು. ಒಂದು ವೇಳೆ ಪಾರಿಭಾಷಿಕ ಪದಕ್ಕೆ ಜನ್ಯ ಪದದ ಅವಶ್ಯಕತೆಯಿಲ್ಲವಾದರೆ ಅದನ್ನು ಹಾಗೆಯೇ ಉಳಿಸಿಕೊಳ್ಳಬೇಕು.

ಪದ ತುಂಬ ಪಾರಿಭಾಷಿಕ ಶಬ್ದವಾಗಿಲ್ಲದಿದ್ದಾಗ ಅದಕ್ಕೆ ಜನ್ಯಪದದ ಅವಶ್ಯಕತೆಯಿದ್ದರೆ ಸಮಾನ ಪದ ಸೃಷ್ಟಿಸಬೇಕು, ಇಲ್ಲವಾಗಿದ್ದರೆ ಅದನ್ನು ಹಾಗೆಯೇ ಉಳಿಸಿಕೊಳ್ಳಬೇಕು. ಶಾಸ್ತ್ರ ಸಾಹಿತ್ಯದಲ್ಲಿ ಬಳಸುವ ಪದ ತುಂಬ ಪಾರಿಭಾಷಿಕವಾಗಿ ಮತ್ತು ವಿಜಾತೀಯವಾಗಿ ತೋರಿದರೂ ಅದನ್ನು ಹಾಗೆಯೇ ಉಳಿಸಿಕೊಳ್ಳಬೇಕು.

ಸಮಾನ ಪದಗಳನ್ನು ನಾವು ಸೃಷ್ಟಿಸುವಾಗ ಮೂಲ ಪದದ ಅರ್ಥದ ಕಡೆ ಗಮನಕೊಡಬೇಕಾದುದು ಅವಶ್ಯಕವಾದರೂ ಅದನ್ನೇ ಎಲ್ಲ ಸಂದರ್ಭಗಳಲ್ಲಿ

ಅನುಸರಿಸಲಾಗುವುದು. Artery ಗ್ರೀಕ್ ಮೂಲ ಹೊಂದಿದ ಶಬ್ದ. ಗಾಳಿ ಹಿಡಿದಿಡುವ ಎಂಬುದು ಅದರ ಅರ್ಥ ಅದಕ್ಕೆ ಧಮನಿ ನಮ್ಮಲ್ಲಿ ಬಳಕೆಯಲ್ಲಿ ರುವ ಪದ. Bronchus ಗ್ರೀಕ್ ಮೂಲದ ಶಬ್ದ. ಅದರ ಅರ್ಥ ಹಸಿ ಮಾಡು. ಅದಕ್ಕೆ ಶ್ವಾಸನಾಳ ಎಂಬ ಪದ ನಮ್ಮಲ್ಲಿ ಬಳಕೆಯಲ್ಲಿದೆ. Pituatary ಶಬ್ದದ ಅರ್ಥ ಲೋಳೆ ಸುರಿಸುವ ಎಂದು. ಅದನ್ನು ಪಿಟ್ಯುಟರಿ ಎಂದು ಕರೆಯುವುದೇ ಸೂಕ್ತ. ಎಲ್ಲ ಪದಗಳಿಗೆ ಸಮಾನಾರ್ಥ ನೀಡುವ ಪದಗಳು ದೊರಕುವುದಿಲ್ಲ. ಅವು ನಮ್ಮ ಭಾಷೆಗೆ ಹೊಂದಿಕೊಳ್ಳುವಂತಿದ್ದರೆ ಆ ಶಬ್ದಗಳನ್ನು ಹಾಗೆಯೇ ಬಳಸಬೇಕು. ಅವಶ್ಯಕವೆನಿಸಿದರೆ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕು ಇಲ್ಲವೆ ಪದ ವಿಶ್ಲೇಷಣೆಯಿಂದ ಅರ್ಥ ತಿಳಿದು ಹೊಸ ಪದ ರೂಪಿಸಬೇಕು.

ವಿಶೇಷ ಶಾಸ್ತ್ರೀಯ ಅರ್ಥ ಹೊಂದಿರತಕ್ಕಂತಹ ಇಂಗ್ಲಿಷ್ ಶಬ್ದಗಳಿಗೆ ಕನ್ನಡ ಭಾಷೆಯದೇ ಆದ ಶಬ್ದಗಳನ್ನು ಆರಿಸುವುದು ಸೂಕ್ತವಲ್ಲ. ಉದಾಹರಣೆಗೆ streptococcus ಸರ ಕಾಯ್ಜೀವಿ, streptokinase ಸರಕಾಯ್ಜೀವಿ ಲಯಕ, pneumococcus ಗಾಳಿ ಕಾಯ್ಜೀವಿ, Deltoid ಮುಮ್ಮಾಲಿಗ, Quadriceps ನಾಲ್ತಲೆ, Lectithin ಜಿನೆಕೊಬ್ಬು, Pepsin ಜೀರಕಿ. ಇಂತಹ ಸನ್ನಿವೇಶಗಳಲ್ಲಿ ನಾವು ಇಂಗ್ಲೀಷಿನಲ್ಲಿ ಬಳಸುವ ಶಬ್ದವನ್ನು ಹಾಗೆಯೇ ತೆಗೆದುಕೊಳ್ಳಬೇಕು. ಈಗಾಗಲೇ ನಮ್ಮ ಭಾಷೆಯೊಡನೆ ಸುಲಭವಾಗಿ ಬೆರೆತು ಹೋಗುವ ಸರಳ ಪದಗಳನ್ನು ಹಾಗೆಯೇ ಉಳಿಸಿಕೊಳ್ಳುವುದು ಸೂಕ್ತ. ಉದಾಹರಣೆಗೆ ಅಲರ್ಜಿ, ವಾರ್ಡ್, ಪ್ಲಾಸ್ಟರ್, ಅಬಾರ್ಷನ್, ಬೈಪಾಸ್, ಏಡ್ಸ್, ಅಯೋನ್, ಇಂಜೆಕ್ಷನ್, ಆಪರೇಷನ್, ಎಮರ್ಜನ್ಸಿ, ಕೆಲವು ಶಬ್ದಗಳು ಕನ್ನಡದ ಜಾಯಮಾನಕ್ಕೆ ಹೊಂದಿಕೊಳ್ಳದೆ ತುಂಬ ಕ್ಲಿಷ್ಟಕರವಾಗಿದ್ದರೆ ಅವುಗಳಿಗೆ ಹೊಸ ಶಬ್ದಗಳನ್ನು ಠಂಕಿಸಬೇಕಾಗಬಹುದು. pacemaker ಗತಿ ರೂಪಕ, hormone ರಸದೂತ, coronary artery ಕಿರೀಟಧಮನಿ, fibrillation ತತ್ತರಿಕೆ. ಒಂದು ವೇಳೆ ಅಂತಹ ಶಬ್ದ ಕೇವಲ ಶಾಸ್ತ್ರಸಾಹಿತ್ಯದಲ್ಲಿ ಮಾತ್ರ ಬಳಸಬೇಕಾಗಿದ್ದರೆ ಮತ್ತು ಅದರಿಂದ ಜನ್ಯ ಪದಗಳ ಅಗತ್ಯ ವಿಶೇಷವಾಗಿಲ್ಲದಿದ್ದರೆ (ಕಾಂಟ್ರಾಸ್ಟ್) ಅಥವಾ ಪದಾರ್ಥಗಳ, ವಸ್ತುಗಳ ಅಂಗ ಭಾಗಗಳ ಹೆಸರಾಗಿದ್ದರೆ (ಪ್ರೊಟೀನ್, ಲೈಸೋಜೈಮು, ಲೈಸೊಸೋಮ್, ಹಿಸ್ಟೋಪ್ಲಾಸ್ಮ, ಪಿಟ್ಯುಟರಿ) ಅಥವಾ ಮೂಲ ಪದದ ಅರ್ಥವನ್ನು ಪ್ರತಿ

ಫಲಿಸದಿದ್ದರೆ ಅವುಗಳನ್ನೇ ಹಾಗೆಯೇ ನಮ್ಮ ಭಾಷೆಯಲ್ಲಿ ಬಳಸುವುದು ಉತ್ತಮ.

ಮೇಲ್ಕಂಡ ಸನ್ನಿವೇಶಗಳನ್ನು ಹೊರತು ಪಡಿಸಿ, ಶಾಸ್ತ್ರ ಸಾಹಿತ್ಯಕ್ಕೆ ಸೀಮಿತವಾಗಿರದೆ ಸಾಮಾನ್ಯ ಬಳಕೆಗೆ ಬೇಕಾಗುವಂತಹ ಪದಗಳು ವಿಜಾತೀಯ ವಾಗಿದ್ದರೆ ಕನ್ನಡದ ಜಾಯಮಾನಕ್ಕೆ ಹೊಂದಿಕೊಳ್ಳುವ ಸಮಾನ ಶಬ್ದಗಳನ್ನು ಠಂಕಿಸಬೇಕಾಗುವುದು. ಉದಾಹರಣೆಗೆ ಭಾವನಾತ್ಮಕ ಪದಗಳು (gravity, sediment) ಕ್ರಿಯೆ ಅಥವಾ ಪ್ರಕ್ರಿಯೆ ಸೂಚಿಸುವ ಪದಗಳು (consolidation, absorption, transfusion, degeneration) ಮೂಲ ರೂಪ ದಲ್ಲಿ ಅಲ್ಲದೆ ಅವುಗಳಿಂದ ದೊರಕುವ ಜನ್ಯ ಪದಗಳು ಅಗತ್ಯವಾಗಿರುವ ಪದಗಳು. thrombus, thrombasis, thromboembolism)

ಹೀಗೆ ಹೊಸ ಶಬ್ದಗಳು ಅಗತ್ಯವೆಂದು ಕಂಡಾಗ ನಿಕೃಷ್ಟ ಖಚಿತ ಅರ್ಥ ನೀಡುವ ದಿನಬಳಕೆ ಶಬ್ದಗಳನ್ನು ಇಲ್ಲವೇ ಸಂಸ್ಕೃತ ಶಬ್ದಗಳನ್ನು ಬಳಸಿ ರೂಪಿಸ ಬೇಕಾಗುವುದು. ನಾಗಾಲೋಟದಿಂದ ವಿಜ್ಞಾನ ಮುಂದುವರಿಯುತ್ತಿದ್ದು ಪಾರಿಭಾಷಿಕ ಶಬ್ದಗಳಿಗೆಲ್ಲ ಸಮಪದಗಳನ್ನು ನಮ್ಮ ಭಾಷೆಯಲ್ಲಿ ಬಳಕೆಗೆ ತರು ವುದು ಕಷ್ಟಕರ. ಎಲ್ಲ ಭಾಷೆಗಳಲ್ಲೂ ಅನೇಕ ಪದಗಳು ಹಾಗೆಯೇ ಉಳಿದಿವೆ. ಉದಾ. ಪಿಟ್ಯುಟರಿ, ಅಡ್ರಿನಲ್, ಟೆಕ್ನೀಶಿಯಂ, ಮೈಟೋಕಾಂಡ್ರಿಯ, ಯಾವ ಭಾಷೆಯ ಶಬ್ದಗಳನ್ನಾದರೂ ಬಳಸಿ ನಮ್ಮವನ್ನಾಗಿ ಮಾಡಿಕೊಳ್ಳು ವುದು ಜೀವಂತ ಭಾಷೆಯ ಲಕ್ಷಣ. ಹೊಸ ವಿಷಯ ಹೇಳಲು ಹೊಸ ಪದ ಗಳನ್ನು ನಮ್ಮವನ್ನಾಗಿ ಮಾಡಿಕೊಳ್ಳಬೇಕು. ಉದಾಹರಣೆಗೆ ಎಲೆಕ್ಟ್ರೋಲೈಟ್, ಕ್ವಾರ್ಟ್ಜ್, ಗ್ಲುಕೋಸ್, ಯೂರಿಯ, ಕ್ರಿಯಟಿನಿನ್.

ವೈದ್ಯ ವಿಜ್ಞಾನ ವಿಷಯಗಳಿಗೆ ವಿಶಿಷ್ಟವಾದ ಪಾರಿಭಾಷಿಕ ಶಬ್ದಗಳನ್ನು ನಮ್ಮ ಭಾಷೆಗೆ ಹಾಗೆಯೇ ಇಲ್ಲವೇ ಸಂವಾದಿ ಪದ ಸೃಷ್ಟಿಮಾಡಿ ತೆಗೆದುಕೊಳ್ಳುವ ಕ್ರಮ ಜರುಗುತ್ತಲೇ ಇರುತ್ತದೆ. ಜಾಗತಿಕ ವ್ಯಾಪ್ತಿಯ ಪದಗಳು (ಇನ್ ಫ್ಲುಯೆಂಜಾ), ತೂಕ (ಮಿಲಿಗ್ರಾಂ) ಮತ್ತು ಅಳತೆ (ಲೀಟರ್) ಮೂಲ ಮಾನಗಳು, ವ್ಯಕ್ತಿ (ಬ್ರೈಟ್) ರೋಗಿ (ಕ್ರಿಯೋಲಾ), ಊರು (ಎಲ್‌ಟಾರ್)

ದೇಶ (ಮಾಲ್ಟಾ, ಬೋರ್ನ್‌ಹೋಂ)ಗಳಿಂದ ರೂಪುಗೊಂಡ ಪದಗಳು, ಮೂಲ (ಅಯೊಡಿನ್) ಮತ್ತು ಸಂಯುಕ್ತ ವಸ್ತುಗಳು (ಬೇರಿಯಂ ಕ್ಲೋರೈಡ್) ವೈಜ್ಞಾನಿಕ ಹೆಸರುಗಳು ರೋಗಕಾರಕ ಜೀವಿಗಳು (ಮೈಕ್ರೋ ಬ್ಯಾಕ್ಟೀರಿಯಂ ಕಾನ್‌ಸಾನಿ) ರೋಗವಾಹಕಗಳು (ಹಿಮೋಫೈಸ್ಯಾಲಿಸ್ ಸ್ಪಿನಿಜೀರಾ) ಮತ್ತು ಔಷಧ ಸಸ್ಯಗಳ (ರವೊಲ್ಫಿಯ ಸರ್ಪಂಟೈನಾ) ವೈಜ್ಞಾನಿಕ ಹೆಸರುಗಳು. ಈಗಾಗಲೇ ಪಾರಿಭಾಷಿಕ ಪದಗಳಿಗೆ ಬಳಕೆಗೆ ಬಂದು ಹೋಗಿರುವ ದೇಶೀಯ ಪದಗಳು (ಪಿತ್ತ, ಸೂಕ್ಷ್ಮಜೀವಿ) ಸಂಸ್ಕೃತ ಮೂಲ ಪದಗಳು, (ಹೃತ್ಕುಕ್ಷಿ, ಕಪಾಲ) ಪಾಶ್ಚಿಮಾತ್ಯ ಭಾಷೆಯ ಗ್ಲೂಕೋಸ್, ಗೌನ್) ಪದಗಳ ಬಳಕೆಯನ್ನು ಹಾಗೆಯೇ ಮುಂದುವರಿಸಬೇಕು. ಇವುಗಳಲ್ಲದೆ ಉಳಿಯುವ ಪಾರಿಭಾಷಿಕ ಪದಗಳು ನಮ್ಮ ಭಾಷೆಯ ಜಾಯಮಾನಕ್ಕೆ ಒಗ್ಗುವಂತಿದ್ದರೆ ಹಾಗೆಯೇ (ಅಲರ್ಜಿ) ಬಳಸುತ್ತ ಹೋಗಬೇಕು. ಹಾಗಿಲ್ಲವಾಗಿದ್ದರೆ ಭಾಷಾ ಸೌಂದರ್ಯ ಹೊಂದಿರುವ ಹೊಸ ಪದಗಳನ್ನು (ರಸದೂತ, ಮನೋದೈಹಿಕ) ಠಂಕಿಸಬೇಕು. ವಿಷಯ ಜ್ಞಾನವನ್ನು ಜನಪದಕ್ಕೆ ದೊರಕಿಸಿ ಕೊಡುವುದು ನಮ್ಮ ಉದ್ದೇಶವಾಗಿರುವುದರಿಂದ ವೈದ್ಯ ವಿಜ್ಞಾನಶಾಸ್ತ್ರ ಅಪರಿಚಿತವಾಗಿ ಉಳಿಯದಂತೆ ಮಾಡಲು ಅದರಲ್ಲಿನ ಪಾರಿಭಾಷಿಕ ಶಬ್ದಗಳಿಗೆ ಸಂಕ್ಷಿಪ್ತ, ಸರಳ, ನಿರ್ದಿಷ್ಟ ಶಬ್ದಗಳನ್ನು ಸೃಷ್ಟಿಸಬೇಕು. ಭಾಷೆ ಮತ್ತು ವೈದ್ಯಶಾಸ್ತ್ರಜ್ಞಾನ ಹೊಂದಿರುವ ವ್ಯಕ್ತಿಗಳಿಂದ ಈ ಕಾರ್ಯ ಸುಲಭವಾಗಿ ಜರುಗುತ್ತದೆ.

●

ಕನ್ನಡ ವೈದ್ಯಕೀಯ ಸಾಹಿತ್ಯ ನಿರ್ಮಾಣದ ಸಮಸ್ಯೆ

—ಡಾ|| ಸಿ. ಆರ್. ಚಂದ್ರಶೇಖರ್

ತಮ್ಮ ಆರೋಗ್ಯ ಸಮಸ್ಯೆಗಳ ಬಗ್ಗೆ, ಕಾಯಿಲೆಗಳ ಬಗ್ಗೆ ತಿಳಿಯುವ ಹಕ್ಕು ಪ್ರತಿಯೊಬ್ಬ ವ್ಯಕ್ತಿಗಿದೆ. ತಮಲ್ಲಿಗೆ ಸಲಹೆ ಮತ್ತು ಚಿಕಿತ್ಸೆಗಾಗಿ ಬರುವ ವ್ಯಕ್ತಿಗೆ, ಮತ್ತು ಆತನ (ಆಕೆಯು) ಮನೆಯುವರಿಗೆ, ಪ್ರಾರಂಭಿಕ ಲಕ್ಷಣಗಳೂ ಸೇರಿದಂತೆ ಕಾಯಿಲೆಯು ಎಲ್ಲ ಅಂಶಗಳೂ ಗೊತ್ತಿದ್ದರೆ. ಕಾಯಿಲೆ ಬೇಗ ಗುಣವಾಗಲು ತಮ್ಮ ಪಾತ್ರವೇನು, ವೈದ್ಯರ ಪಾತ್ರವೇನು ಎಂದು ತಿಳಿದಿದ್ದರೆ, ವೈದ್ಯರ ಕೆಲಸ ಸುಲಭವಾಗುವುದಲ್ಲದೆ, ಅವರು ರೂಪಿಸುವ ಚಿಕಿತ್ಸೆ ಬೇಗ ಪೂರ್ಣ ಫಲವನ್ನು ಕೊಡುತ್ತದೆ. ಸಾಮಾನ್ಯ ಕಾಯಿಲೆಗಳು ಏಕೆ ಬರುತ್ತವೆ, ಹೇಗೆ, ಎಲ್ಲಿ ಕಾಣಿಸಿಕೊಳ್ಳುತ್ತವೆ, ಅವುಗಳ ನಿವಾರಣೋಪಾಯಗಳೇನು ಎಂಬುದು ಜನಗಳಿಗೆ, ಆಡಳಿತಾಧಿಕಾರಿಗಳಿಗೆ ಅರ್ಥವಾದರೆ, ಕಾಯಿಲೆಗಳು ಬರದಂತೆಯೇ ತಡೆಗಟ್ಟಬಹುದು; ಅಮೂಲ್ಯವಾದ ಕಾಲ, ಹಣವನ್ನು ಉಳಿಸಬಹುದಲ್ಲದೆ, ವ್ಯಕ್ತಿಯ ನೋವು, ಅಂಗವಿಕಲತೆಯನ್ನು ನಿವಾರಿಸಬಹುದು. ವ್ಯಕ್ತಿಯ ಆರೋಗ್ಯ ವರ್ಧನೆಗೆ ನೆರವಾಗುವ ಅಂಶಗಳಾವುವು ಎಂಬುದು ಸ್ಪಷ್ಟವಾದರೆ. ವ್ಯಕ್ತಿಯ ಹಾಗೂ ಸಮಾಜದ ಸ್ವಾಸ್ಥ್ಯ, ಸಾಮರ್ಥ್ಯ ಹೆಚ್ಚಿ ನಾಡಿನ ಪ್ರಗತಿಯ ಗುರಿ ಹತ್ತಿರವಾಗುತ್ತದೆ. ಈ ಎಲ್ಲ ದೃಷ್ಟಿಯಿಂದ, ಜನರಿಗೆ ತಮ್ಮ ಆಡುಭಾಷೆಯಲ್ಲಿ, ಮಾತೃಭಾಷೆಯಲ್ಲಿ ವೈದ್ಯಸಾಹಿತ್ಯ ಸಿಗುವುದು ಅವರಿಗೆ ಆಹಾರ, ನೀರು, ವಸತಿ, ಬಟ್ಟೆಯಷ್ಟೇ ಅತ್ಯಗತ್ಯ ಎಂಬುದನ್ನು ಎಲ್ಲ ಪ್ರಾಜ್ಞರೂ ಒಪ್ಪುತ್ತಾರೆ.

ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಅಮೇರಿಕೆಯಂತಹ ದೇಶಗಳಲ್ಲಿ ವೈದ್ಯ-ತಾಂತ್ರಿಕ ಜ್ಞಾನವು ಆಯಾಭಾಷೆಗಳಲ್ಲೇ ದೊರಕುವುದರ ಜೊತೆಗೆ, ವಿಪುಲವಾಗಿ ಜನಪ್ರಿಯ ವೈದ್ಯ ಸಾಹಿತ್ಯವೂ ಲಭ್ಯವಿದೆ. ವೈದ್ಯಕೀಯ ಕ್ಷೇತ್ರದ ಮುಂಚೂಣಿಯ ಸಂಶೋಧನಾ ಮಾಹಿತಿಗಳೂ, ಜನಸಾಮಾನ್ಯರಿಗೆ ವೃತ್ತಪತ್ರಿಕೆ, ನಿಯತಕಾಲಿಕಗಳ ಮೂಲಕ ತಲುಪುತ್ತವೆ. ರೋಗಿ ಮತ್ತು ಮನೆಯವರ ಹಕ್ಕು ಬಾಧ್ಯತೆಗಳೇನು, ವೈದ್ಯಸಿಬ್ಬಂದಿ (ಆಸ್ಪತ್ರೆಯಿಂದ ಅವರು ಏನು, ಎಷ್ಟನ್ನು ನಿರೀಕ್ಷಿಸಬಹುದು ಎಂಬುದರ ಸ್ಪಷ್ಟ ಅರಿವು ಎಲ್ಲರಿಗೂ ಇರುತ್ತದೆ. ವೈದ್ಯ ಸೌಲಭ್ಯಗಳ ಸರಿಯಾದ ಬಳಕೆ ಇದರಿಂದ ಸಾಧ್ಯವಾಗಿದೆ. ಆದರೆ ನಮ್ಮ ದೇಶದಲ್ಲಿ, ಕನ್ನಡವೂ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ವೈದ್ಯ ವಿಜ್ಞಾನ ಬೋಧಿಸಲ್ಪಡುವುದಿಲ್ಲ. ಎಲ್ಲ ವೈದ್ಯ ವಿಜ್ಞಾನ ಮಾಹಿತಿ, ಜ್ಞಾನ ಇಂಗ್ಲಿಷ್ ಭಾಷೆಯಲ್ಲೇ ಇದೆ. ಇಂಗ್ಲಿಷ್ ಬಲ್ಲವರಿಗೆ ಅದು ಸಿಗುವ ಸಾಧ್ಯತೆ ಇದೆಯೇ ಹೊರತು, ಇತರರಿಗಿಲ್ಲ. ಜನ ಸಾಮಾನ್ಯರು ವೈದ್ಯಸಿಬ್ಬಂದಿಯನ್ನು 'ದೇವರು' ಎಂದು ತಿಳಿದು, ತಮ್ಮ ಆರೋಗ್ಯ ಮತ್ತು ಪ್ರಾಣರಕ್ಷಣೆಯನ್ನು ಅವರ ಕೈಯೊಳಗಿಟ್ಟು 'ಹಾಲಲ್ಲಾದರೂ ಹಾಕಿ ನೀರಲ್ಲಾದರೂ ಹಾಕಿ' ಎಂದು ಮೊರೆ ಇಡುತ್ತಾರೆ. ಕಾಯಿಲೆಯ ಉಗಮ, ಸ್ವರೂಪ, ನಿವಾರಣೆ ಬಗ್ಗೆ ಕೇಳಲು ಹೋಗುವುದಿಲ್ಲ. ಅವುಗಳ ಬಗ್ಗೆ ಊಹಾಪೋಹ ಮಾತ್ರ ಮಾಡುತ್ತಾರೆ. ಇವರ ಈ ಮೌಢ್ಯ, ಪರತ್ತಿಲ್ಲದ ಅವಲಂಬನೆಯನ್ನು, ಅಸಹಾಯಕತೆಯನ್ನು, ವೈದ್ಯರು ಮತ್ತು ಇತರ ಸಿಬ್ಬಂದಿ ದುರುಪಯೋಗ ಮಾಡುವುದೂ ಉಂಟು. ಇಂದಿಗೂ ನಮ್ಮ ಜನ ರೋಗ ಬಂದಾದ ಮೇಲೆ, ಅದು ಉಲ್ಬಣಿಸಿದ ಮೇಲೆ, ವೈದ್ಯರಲ್ಲಿಗೆ ಓಡುತ್ತಾರೆಯೇ ವಿನಃ ರೋಗದ ಪ್ರಾರಂಭಹಂತದಲ್ಲೇ ಚಿಕಿತ್ಸೆ ಪ್ರಾರಂಭಿಸುವುದಾಗಲೀ, ರೋಗ ಬರದಂತೆ ಮುನ್ನೆಚ್ಚರಿಕೆ ಕ್ರಮಕೈಗೊಳ್ಳುವುದಾಗಲೀ ಮಾಡುವುದಿಲ್ಲ. ಯಾವುದೇ ಪ್ರಾಥಮಿಕ ಚಿಕಿತ್ಸಾ ಕೇಂದ್ರದಲ್ಲಿ ವೈದ್ಯರ ಖಾಸಗೀ ಚಿಕಿತ್ಸಾಲಯದಲ್ಲಿ ಬರುವ ರೋಗಿಗಳಲ್ಲಿ, ಶೇಕಡಾ ೭೦ ರಷ್ಟು ಮಂದಿ, ಸ್ವಲ್ಪ ಮುಂಜಾಗ್ರತೆವಹಿಸಿದ್ದರೆ, ನಿವಾರಿಸಬಹುದಾಗಿದ್ದಂತಹ ರೋಗ ರುಜಿನಗಳಿಂದ ಬಳಲುತ್ತಾರೆ ಎಂಬುದು ಗಮನಾರ್ಹ.

- **ವೈದ್ಯ ಸಾಹಿತ್ಯ ರಚಿಸುವವರ ಬರ :**

ನಮ್ಮ ರಾಜ್ಯದಲ್ಲಿರುವ ವೈದ್ಯರುಗಳ ಸಂಖ್ಯೆ ೩೫ ಸಾವಿರವನ್ನು ದಾಟಿದೆ.

ಆದರೆ ಜನರಿಗಾಗಿ ಬರೆಯುವ ವೈದ್ಯರುಗಳ ಸಂಖ್ಯೆ ೩೫ ಅನ್ನೂ ದಾಟುವುದಿಲ್ಲ! ಕೆಲವೇ ವೈದ್ಯರುಗಳು, ವೈದ್ಯಮಾಹಿತಿಯನ್ನು ಹಸ್ತಪ್ರತಿ (Handout), ಮಡಿಕೆ (Folder) ಗಳ ಮೂಲಕ ನಿಯತಕಾಲಿಕೆಗಳಲ್ಲಿ ಲೇಖನಗಳ ಮುಖಾಂತರ ಅಥವಾ ಸಣ್ಣ/ದೊಡ್ಡ ಪುಸ್ತಕಗಳ ರೂಪದಲ್ಲಿ ಕೊಡುವ ಹವ್ಯಾಸ ಇಟ್ಟುಕೊಂಡಿದ್ದಾರೆ. ನಾನು ಎಷ್ಟೋ ಜನ ಹಿರಿಯ/ಕಿರಿಯ ವೈದ್ಯಸಹೋದ್ಯೋಗಿಗಳನ್ನು ಕೇಳಿದ್ದೇನೆ–'ನೀವೇಕೆ ಬರೆಯಬಾರದು. ನಿಮ್ಮ ಜ್ಞಾನ, ಅನುಭವದ ಫಲ ಇತರರಿಗೆ ಸಿಗುವಂತೆ ಮಾಡಬಹುದಲ್ಲ?' ಎಂದು. ಅದಕ್ಕೆ ಸಿಗುವ ಸಾಮಾನ್ಯ ಉತ್ತರ: "ಹೌದು, ಬರೆಯಬೇಕು. ಆದರೆ ಹೇಗೆ ಬರೆಯುವುದು ಗೊತ್ತಿಲ್ಲ. ನನ್ನ ಕನ್ನಡ (ಅಂತೆಯೇ ಇಂಗ್ಲಿಷ್) ಅಷ್ಟು ಚೆನಾಗಿಲ್ಲ. ಹಾಗೆ ಬರೆದರೂ ಯಾರು ಪ್ರಕಟಿಸುತ್ತಾರೆ?" ತಮ್ಮ ವಿದ್ಯಾಭ್ಯಾಸವನ್ನೆಲ್ಲಾ ಇಂಗ್ಲಿಷ್ ಮಾಧ್ಯಮದಲ್ಲೇ ಮುಗಿಸುವ ನಮ್ಮಲ್ಲಿ ಅನೇಕರಿಗೆ ಇತ್ತ ಕನ್ನಡವೂ ಬಾರದು, ಅತ್ತ ಇಂಗ್ಲೀಷೂ ಸರಿಯಾಗಿ ಬಾರದು. ಭಾಷೆಯನ್ನು ಸಂಪರ್ಕಸಾಧನವನ್ನಾಗಿ ದುಡಿಸಿಕೊಳ್ಳುವ ಶಕ್ತಿ ನಮ್ಮಲ್ಲಿ ಅನೇಕರಿಗೆ ಇಲ್ಲ ಎಂಬುದು ಒಂದು ದುರಂತ. ವೈದ್ಯನ ಅನೇಕ ಕರ್ತವ್ಯಗಳಲ್ಲಿ ಒಂದಾದ, ಆರೋಗ್ಯ ಶಿಕ್ಷಣವನ್ನು ಬಹಳಷ್ಟು ವೈದ್ಯರು ಮಾಡದಿರುವುದು ವೈದ್ಯಕ್ಷೇತ್ರದ ಹಲವು ವ್ಯಾಧಿಗಳಲ್ಲಿ ಪ್ರಮುಖವಾದುದು.

ವೈದ್ಯರಲ್ಲದ, ವೈದ್ಯಕೀಯ ಕ್ಷೇತ್ರದಲ್ಲಿ ಯಾವೊಂದು ತರಪೇತಿಯೂ ಇಲ್ಲದ, ಕೆಲವು ಸಾಮಾನ್ಯ ವ್ಯಕ್ತಿಗಳು (Lay Persons) ವೈದ್ಯ–ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರಷ್ಟೇ ಅಲ್ಲ, ಅವರ ಉತ್ಪಾದನಾ ವೇಗ ಮತ್ತು ಶ್ರೇಣಿ ಬೆರಗುಗೊಳಿಸುತ್ತದೆ! ಪುಟ್‌ಪಾತ್ ಮೇಲೆ, ರಸ್ತೆ ಬದಿಯ ಅಂಗಡಿಗಳಲ್ಲಿ, ಜೋಡಿಸಿಟ್ಟಿರುವ ಈ ಪುಸ್ತಕಗಳೇ ಜನಸಾಮಾನ್ಯರ ಗಮನ ಸೆಳೆಯುತ್ತವೆ. 'ತಲೆನೋವಿಗೆ ಚಿಕಿತ್ಸೆ' 'ಅಸ್ತಮಾಗೆ ಔಷಧ' 'ಬೆನ್ನುನೋವಿಗೆ ಪರಿಹಾರ' 'ವಾಂತಿ ಬೇಧಿಗೆ ಮದ್ದು' 'ಮುಟ್ಟಿನ ತೊಂದರೆಯ ನಿವಾರಣೆ' 'ಲೈಂಗಿಕ ವ್ಯಾಧಿಗಳಿಗೆ ರಾಮಬಾಣ' ಇತ್ಯಾದಿ! ಗ್ರಂಥಾಲಯಕ್ಕೆ ಹೋಗಿ, ಕೈಗೆ ಸಿಕ್ಕಿದ ಯಾವುದೋ ಪಠ್ಯಪುಸ್ತಕವನ್ನು ಓದಿಯೋ, ತಂದೆಯೋ, ತಾತನೋ, ಅಜ್ಜಿಯೋ ಮಾಡುತ್ತಿದ್ದ ನಾಟಿ ವಿಧಾನವನ್ನು ನೋಡಿಯೋ, ಪರಿಚಯದ ವೈದ್ಯರು ಕೊಟ್ಟ ಚಿಕಿತ್ಸೆ

ಯನ್ನು ಅನುಕರಿಸಿಯೋ, ಪುಸ್ತಕ ಬರೆದು ಬಿಡುತ್ತಾರೆ. ಈ ಪುಸ್ತಕಗಳಲ್ಲಿ ವೈಜ್ಞಾನಿಕ ಮಾಹಿತಿಗಿಂತ, ಅವೈಜ್ಞಾನಿಕ ಹಾಗೂ ಅಪಾಯಕಾರೀ ಮಾಹಿತಿಯೇ ಹೆಚ್ಚು. ವೈದ್ಯ ಸಾಹಿತ್ಯ ಅದರಲ್ಲೂ ಲೈಂಗಿಕ–ವೈದ್ಯಸಾಹಿತ್ಯ ಈ ಲೇಖಕರು ಗಳಿಗೆ, ಪ್ರಕಾಶಕ–ಮಾರಾಟಗಾರರಿಗೆ ಚಿನ್ನದಗಣಿ. ಅಶ್ಲೀಲವಾಗಿ, ಪ್ರಚೋದಕ ವಾಗಿ ಏನು ಬರೆದರೂ 'ಬಿಸಿ ದೋಸೆ'ಯಂತೆ ಪುಸ್ತಕಗಳು ಖರ್ಚಾಗುವುದ ರಿಂದ, ಇಂತಹ ಪುಸ್ತಕಗಳು ಪಾರ್ಥೇನಿಯಂನಂತೆ ಎಲ್ಲೆಡೆ ಕಾಣಸಿಗುತ್ತವೆ. ವೈದ್ಯಸಾಹಿತ್ಯದ 'ವ್ರಣ'ಗಳಂತಿರುವ ಈ ಪುಸ್ತಕಗಳು ಮಾಡಿರುವ, ಮಾಡು ತ್ತಿರುವ ಹಾನಿಯ ಅಂದಾಜು ಯಾರಿಗೂ ಇಲ್ಲದಿರುವುದು ದುರದೃಷ್ಟಕರ. ಇದರ ಬಗ್ಗೆ ನಮ್ಮ ವೈದ್ಯರಾಗಲೀ, ವೈದ್ಯ–ಸಂಸ್ಥೆಗಳಾಗಲೀ ಪರಿಣಾಮಕಾರೀ ಪ್ರತಿಭಟನೆಯನ್ನು ಇದುವರೆಗೆ ಮಾಡಿಲ್ಲ. ಲೈಂಗಿಕ ವೈದ್ಯ ವಿಜ್ಞಾನವನ್ನು ಜನರಿಗೆ ತಲುಪಿಸುತ್ತೇವೆ ಎಂದು ಹೇಳಿಕೊಂಡು, ಅಶ್ಲೀಲ ಸಾಹಿತ್ಯವನ್ನು ಅಚ್ಚಿಸುವ ಮಾಸ ಪತ್ರಿಕೆಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡಿದ್ದೂ, ಕಡೆಗೆ ನ್ಯಾಯಾಲಯದ ಆದೇಶದಂತೆ ತಮ್ಮ ಕೊನೆಯನ್ನು ಕಂಡಿದ್ದೂ ಈಗ ಇತಿಹಾಸ.

ವೈದ್ಯಸಾಹಿತ್ಯವನ್ನು ವೈದ್ಯರೇ ವೈದ್ಯಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರೇ ಬರೆಯಬೇಕು. ಆಧುನಿಕ ವೈದ್ಯವಿಜ್ಞಾನ ಮಾಹಿತಿಯನ್ನು, ತಮ್ಮ ಚಿಕಿತ್ಸಾ ಅನುಭವಗಳೊಂದಿಗೆ ಹದವಾಗಿ ಬೆರೆಸಿ, ಸಾಹಿತ್ಯದ ಅಂಚುಕಟ್ಟಿ ಅವರು ಬರೆಯು ವುದೇ ಉಚಿತ. ವೈದ್ಯೇತರ ವ್ಯಕ್ತಿಗಳು, ವೈದ್ಯಸಾಹಿತ್ಯ ಬರೆಯಬೇಕಾದರೆ ಪರಿಚಯದ ವೈದ್ಯರ, ವೈದ್ಯ ಸಂಘ ಸಂಸ್ಥೆಗಳ ಮಾರ್ಗದರ್ಶನ ಪಡೆಯುವುದು ಅತ್ಯಾವಶ್ಯಕ. ಪ್ರಕಾಶಕರು ಇದಕ್ಕಾಗಿ ಅವರನ್ನು ಒತ್ತಾಯಿಸಬೇಕು. ವೈದ್ಯರ ಶಿಫಾರಸ್ಸಿಲ್ಲದ, ಬರಹಗಳನ್ನು ಪ್ರಕಟಿಸುವುದಿಲ್ಲ ಎನ್ನಬೇಕು. ಜನಪ್ರಿಯ ವೈದ್ಯ ಸಾಹಿತ್ಯರಚನೆಯ ಬಗ್ಗೆ ಪ್ರತಿ ವೈದ್ಯ ವಿದ್ಯಾರ್ಥಿಗೆ ತರಪೇತಿ, ಪ್ರೋತ್ಸಾಹಗಳು ಪ್ರತಿ ವೈದ್ಯಕಾಲೇಜು, ಸ್ನಾತಕೋತರ ಕಾಲೇಜಿನಲ್ಲಿ ಸಿಗುವಂತಾಗಬೇಕು.

● ಬರೆಯುವವರ ಕಷ್ಟ :

ಕೆಲವೇ ವೈದ್ಯರು ಬರೆಯುತ್ತಾರೆ ಎಂದು ತಿಳಿದೆವು. ಬರೆಯುವವರ ಕಷ್ಟಗಳೇನು ? ಬರೆಯುವವರಲ್ಲಿ ಕೆಲವರು ನಿರಂತರವಾಗಿ ಬರೆಯುತ್ತಿದ್ದಾರೆ.

ಉಳಿದವರು ವರ್ಷಕ್ಕೆ ಒಂದೋ, ಎರಡೋ ಲೇಖನಗಳನ್ನು ಬರೆಯುವಷ್ಟರಲ್ಲಿ 'ಸುಸ್ತಾಗುತ್ತಾರೆ.' ಏಕೆ ? ಬರೆಯುವವರ ಕಷ್ಟಗಳು ಇವು :

೧. ವೈದ್ಯ ವಿಜ್ಞಾನದ ಆಳ ವಿಸ್ತಾರ ಅಗಾಧವಾಗಿದ್ದು ಎಲ್ಲ ಸ್ಪೆಶಾಲಿಟಿಗಳ ತಿಳುವಳಿಕೆ ಒಬ್ಬರಿಗೇ ಇರುವುದಿಲ್ಲ. ವೈದ್ಯ ತನ್ನ ಸ್ಪೆಶಾಲಿಟಿಗೇ ತನ್ನ ಬರಹವನ್ನು ಸೀಮಿತಗೊಳಿಸುವುದರಿಂದ, ಎಲ್ಲಿ ತನ್ನ ಬರಹದ ವಿಷಯ ಪುನರಾವರ್ತನೆಯಾಗುತ್ತದೋ ಎಂಬ ಅಳುಕು.

೨. ಇತ್ತೀಚಿನ, ಆಧುನಿಕ, ಮುಂಚೂಣಿಯ ಸಂಶೋಧನಾ ಮಾಹಿತಿ, ಬೆಳವಣಿಗೆಗಳ ವಿವರ ಲಭ್ಯವಿಲ್ಲದಿರುವುದು. ರಾಜಧಾನಿಬಿಟ್ಟರೆ, ವೈದ್ಯ ಕಾಲೇಜುಗಳನ್ನು ಹೊರತು ಪಡಿಸಿದರೆ, ಉಳಿದಸ್ಥಳಗಳಲ್ಲಿ ವೈದ್ಯಕೀಯ ನಿಯತಕಾಲಿಕೆಗಳು, ಪಠ್ಯಪುಸ್ತಕಗಳ ಹೊಸ ಮುದ್ರಣ–ಆವೃತ್ತಿಗಳು ದೊರೆಯುವುದಿಲ್ಲ. ಎಷ್ಟೋಸಲ, ವೈದ್ಯ ತನ್ನ ಹಳೇ ಪಠ್ಯಪುಸ್ತಕವನ್ನೇ ಆಶ್ರಯಿಸಬೇಕಾಗುತ್ತದೆ.

೩. ಇಂದು ಕರ್ನಾಟಕದಲ್ಲಿ, ವೈದ್ಯ ಲೇಖನಗಳನ್ನು ಪ್ರಕಟಿಸುವ, ಜನಪ್ರಿಯ ನಿಯತಕಾಲಿಕೆಗಳೆಂದರೆ ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ಸುಧಾ, ತರಂಗ, ಮಂಗಳ, ವಾರಪತ್ರಿಕೆ, ಕಸ್ತೂರಿ, ಈ ಪತ್ರಿಕೆಗಳಲ್ಲಿ ಲೇಖನ ಪ್ರಕಟವಾದರೆ, ಅದು ಹೆಚ್ಚಿನ ಜನರನ್ನು ಮುಟ್ಟುವ ಹಾಗೂ ಲೇಖಕನಿಗೆ 'ಹೆಸರನ್ನು' ತರುವ ಸಾಧ್ಯತೆ ಇರುತ್ತದೆ. ಈ ಪತ್ರಿಕೆಗಳು ಪ್ರತಿಸಂಚಿಕೆಯಲ್ಲೂ ವೈದ್ಯ ಲೇಖನವನ್ನು ಪ್ರಕಟಿಸುವುದಿಲ್ಲ. ಪ್ರಕಟಿಸಿದರೆ ಪುಟದ ಒಂದು ಭಾಗ ಅಥವಾ ಒಂದೋ ಎರಡೋ ಪುಟಗಳನ್ನು ಇದಕ್ಕಾಗಿ ವಿನಿಯೋಗಿಸುತ್ತವೆ. ಜೊತೆಗೆ ನಾನಾಕಾರಣಗಳಿಂದ ಒಂದು ಪತ್ರಿಕೆ, ಈಗಾಗಲೇ 'ಜನಪ್ರಿಯ'ನಾಗಿರುವ ಒಬ್ಬ ಲೇಖಕನ ಬರಹಗಳನ್ನೇ ಪ್ರಕಟಿಸಲು ಇಷ್ಟಪಡುತ್ತವೆ. ಹೊಸಬರಿಗೆ ಅವಕಾಶಗಳು ಕಡಿಮೆ. ಒಂದು ಸ್ಪೆಶಾಲಿಟಿಯ ಲೇಖನವನ್ನು ಒಮ್ಮೆ ಪ್ರಕಟಿಸಿದರೆ, ಅದೇ ಸ್ಪೆಶಾಲಿಟಿಯ ಮತ್ತೊಂದು ಲೇಖನವನ್ನು ಎರಡು ಮೂರು ವರ್ಷ ಪ್ರಕಟಿಸಲು ಕೆಲವು ಪತ್ರಿಕೆಗಳು ಒಪ್ಪುವುದಿಲ್ಲ. ಇದರಿಂದಾಗಿ

ಹಿರಿಯ/ಕಿರಿಯ ಲೇಖಕರ, ಲೇಖನಗಳು ಹಲವಾರು ತಿಂಗಳುಗಳ ನಂತರ ಸಂಪಾದಕರ 'ವಿಷಾದ' ಪತ್ರದೊಂದಿಗೆ ವಾಪಸ್ ಬರುವುದರಿಂದ ಮತ್ತೊಮ್ಮೆ ಬರೆಯುವ 'ಧೈರ್ಯ'ವನ್ನು ವೈದ್ಯಮಾಡದೇ ಹೋಗ ಬಹುದು.

೪. ಜನಪ್ರಿಯ ವೈದ್ಯಲೇಖನ ಹೇಗಿರಬೇಕು ಎಂದು ಗೊತ್ತಿಲ್ಲದಿರುವುದು : "ನಿಮ್ಮ ಲೇಖನ ಜನಪ್ರಿಯ ಧಾಟಿಯಲ್ಲಿಲ್ಲ. ಇವನ್ನು ಪ್ರಕಟಿಸಲು ಆಗುವುದಿಲ್ಲ" ಎಂದು ಸಂಪಾದಕನ ಟೀಕೆ ಹೊತ್ತು ಬಂದ ಪತ್ರ. ವೈದ್ಯ ಲೇಖಕನನ್ನು ತಬ್ಬಿಬ್ಬು ಮಾಡುತ್ತದೆ. ಜನಪ್ರಿಯ ವೈದ್ಯ ಲೇಖನ ಹೇಗಿರ ಬೇಕು ಎಂಬುದನ್ನು ಯಾರೂ ಸ್ಪಷ್ಟವಾಗಿ ಹೇಳರು. ಹಲವು ಸಲ ಲೇಖನ ಯಾವೊಂದು ಟೀಕೆಟಿಪ್ಪಣಿ ಇಲ್ಲದೆ ವಾಪಸ್ ಬಂದಾಗ, ಲೇಖನ ಏಕೆ ತಿರಸ್ಕೃತವಾಯಿತು ಎಂದು ಲೇಖಕನಿಗೆ ಗೊತ್ತಾಗುವುದೇ ಇಲ್ಲ. ಲೇಖನ ಎಲ್ಲಿ ಚೆನ್ನಾಗಿಲ್ಲ, ಏಕೆ ಚೆನ್ನಾಗಿಲ್ಲ ಎಂಬುದನ್ನು ಯಾವ ಸಂಪಾದಕನೂ, ಲೇಖಕನಿಗೆ ವಿವರಿಸುವುದಿಲ್ಲ. ಈ ರೀತಿ ಒಂದೆರಡು ಸಲ ತನ್ನ ಲೇಖನ ತಿರಸ್ಕೃತಗೊಂಡರೆ, ಹೊಸಲೇಖಕನಿರಲಿ, ಹಳೇ ಲೇಖಕನೂ ಕೂಡ, ಮತ್ತೆ ಲೇಖನಿ ಹಿಡಿಯಲು ಹಿಂಜರಿಯುತ್ತಾನೆ. ವೃಥಾ ಸಮಯ ವ್ಯರ್ಥಮಾಡುವುದೇಕೆ ಎಂದು ಸುಮ್ಮನಾಗುತ್ತಾನೆ.

ಇತ್ತೀಚೆಗೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಕನ್ನಡ ವೈದ್ಯ ಬರಹಗಾರರ ಸಂಘ ಈ ದಿಸೆಯಲ್ಲಿ 'ಕಾರ್ಯಾಗಾರಗಳನ್ನು' ನಡೆಸಿರುವುದು ಶುಭಚಿನ್ಹೆ. ಅನೇಕ ಪತ್ರಿಕೆಗಳಲ್ಲಿ ತಮ್ಮ ಲೇಖನಗಳ ಗುಣಮಟ್ಟದ ಆಧಾರದ ಮೇಲೆ, ಲೇಖನಗಳನ್ನು ಪ್ರಕಟಿಸಿರುವ ವೈದ್ಯ ಲೇಖಕರ ಮಾರ್ಗದರ್ಶನದಲ್ಲಿ, ಓದುಗರ ಸಮ್ಮುಖದಲ್ಲಿ ಹೊಸಲೇಖಕರಿಗೆ ತರಬೇತಿ, ಮಾರ್ಗದರ್ಶನ ದೊರೆಯುವಂತಾಗಬೇಕು.

೫. ನಿರ್ದಿಷ್ಟ ಅಳತೆಯ ಬರಹಗಳನ್ನು ಬರೆಯಲು ತೊಡಕು :

ಪ್ರತಿಯೊಂದು ಪತ್ರಿಕೆ 'ನಿಮ್ಮ ಲೇಖನ ಎರಡು ಪುಟಗಳಿಗೆ ಮೀರದಿರಲಿ'

ಎಂಬ ಆಳತೆಯನ್ನು ವಿಧಿಸುತ್ತದೆ. ಆಕಾಶವಾಣಿಯವರು ಐದು ಅಥವಾ ಹತ್ತು ನಿಮಿಷಗಳ ಭಾಷಣಕ್ಕೆ ಲೇಖನ ಸಿದ್ದಪಡಿಸಿ ಎನ್ನುತ್ತಾರೆ. ಈ ಸೀಮಿತ ಚೌಕಟ್ಟಿನಲ್ಲಿ, ವಿಷಯ ಒಂದರ ಬಗ್ಗೆ Comprehensive ಆಗಿ ಬರೆಯುವುದು ಒಂದು ಸಮಸ್ಯೆಯಾಗುತ್ತದೆ. ವೈದ್ಯಲೇಖಕ ಹೀಗೆ, ಚಿಕ್ಕದಾಗಿ, ಚೊಕ್ಕವಾಗಿ, ಅರ್ಥಪೂರ್ಣವಾಗಿ ಬರೆಯುವ ಕೌಶಲವನ್ನು ಸಂಪಾದಿಸಬೇಕಾಗುತ್ತದೆ. ಇದು ಕೆಲವರಿಗೆ ಕಷ್ಟವೆನಿಸುತ್ತದೆ.

೬. ತಾಂತ್ರಿಕ ಪದಗಳ ಅಭಾವ, ಗೊಂದಲ :

ಇಂಗ್ಲಿಷ್‌ನಲ್ಲಿ ಚಿಕ್ಕದಾಗಿ, ನಿಖರವಾಗಿ ಬರೆಯಬಹುದು. ಆದರೆ ಕನ್ನಡದಲ್ಲಿ ಇದು ಕಷ್ಟ ಎನ್ನುವುದು ಅನೇಕರ ಅನುಭವ. ಮೂಲದ Concepts, ತಾಂತ್ರಿಕ ಪದಪುಂಜಗಳು ನಮ್ಮ ಭಾಷೆಯಲ್ಲಿ ಇರುವುದಿಲ್ಲ. ಪ್ರತಿಯೊಬ್ಬ ಕನ್ನಡ ಲೇಖಕ, ತಾನೇ ಭಾಷಾಂತರಕಾರನಾಗಿ, ತನ್ನದೇ ಆದ ಪದಪುಂಜಗಳನ್ನು ಸೃಷ್ಟಿಸಿಕೊಂಡಿರುವುದು ಸಮಸ್ಯೆಯನ್ನು ಜಟಿಲಗೊಳಿಸಿದೆ. ಕನ್ನಡದ ಆಡುಬಾಷೆಯ ಹಲವು ನುಡಿಗಟ್ಟುಗಳಿರುವುದು ಗೊಂದಲವನ್ನು ಇನ್ನಷ್ಟು ಹೆಚ್ಚಿಸಿವೆ. ಡಾ॥ ಡಿ. ಎಸ್. ಶಿವಪ್ಪನವರ 'ವೈದ್ಯ ಪದಕೋಶ' ಈ ದಿಸೆಯಲ್ಲಿ ಒಂದು ಸ್ತುತ್ಯ ಪ್ರಯತ್ನವಾದರೂ, ಸರ್ವಸಮ್ಮತ ಪದಕೋಶದ ಅಗತ್ಯತೆ ಇದೆ. ಈ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಅಗಾಧವಾಗಿದೆ.

೭. Feed Back ಇಲ್ಲದಿರುವುದು :

ತನ್ನ ಲೇಖನ/ಪುಸ್ತಕ ಪ್ರಕಟವಾದಾಗ, ವೈದ್ಯ ಲೇಖಕನಿಗೆ, ಯಾವ ರೀತಿಯ **feed back** ಸಿಗುವುದಿಲ್ಲ. ನಮ್ಮ ಓದುಗರಿಗೆ ತಮಗೆ ಯಾವುದು ಅರ್ಥವಾಯಿತು, ಯಾವುದು ಅರ್ಥವಾಗಲಿಲ್ಲ ಎಂದು ಲೇಖಕನಿಗೆ ಬರೆದು ತಿಳಿಸುವ ಪರಿಪಾಠವಿಲ್ಲ. ಜೊತೆ ವೈದ್ಯರು, ತಮ್ಮ ಸಹೋದ್ಯೋಗಿ 'ಜನರಿಗಾಗಿ ಬರೆದ' ಇಂತಹ ಲೇಖನ/ಪುಸ್ತಕಗಳನ್ನು ಓದುವುದಿಲ್ಲ. ಓಮ್ಮೆ ಓದಿದರೂ, ಬರಹದ ಒಳ್ಳೆಯ–ಕೆಟ್ಟ ಅಂಶಗಳನ್ನು ಹೇಳಲು ಹೋಗುವುದಿಲ್ಲ. ಮೇಲೆ ಬಿದ್ದು ಕೇಳಿದರೂ

'ಪರವಾಗಿಲ್ಲ' 'ಚೆನ್ನಾಗಿದೆ' ಎಂಬ ಮುಖಸ್ತುತಿಯು, ದಾಕ್ಷಿಣ್ಯದ ಉತ್ತರ ದೊರೆಯುತ್ತದೆ. ತನ್ನ ಕೃತಿಯ 'ವಸ್ತು ನಿಷ್ಠ' ವಿಮರ್ಶೆ ಲೇಖಕನಿಗೆ ದೊರೆಯುವುದಿಲ್ಲ. ಪತ್ರಿಕೆ ಮತ್ತು ನಿಯತ ಕಾಲಿಕೆಗಳು 'ವೈದ್ಯ ಸಾಹಿತ್ಯದ ವಿಮರ್ಶೆಯನ್ನು' ಪ್ರಕಟಿಸುವುದು ಬಹು ಅಪರೂಪ. ವಿಮರ್ಶೆಯಲ್ಲಿ 'ಉಪಯುಕ್ತ ಮಾಹಿತಿ ನೀಡುವ ಕೃತಿ' ಎಂದು ಹೇಳಿ ಮುಗಿಸಿಬಿಡುತ್ತಾರೆ. ಇದರಿಂದ ಲೇಖಕನಿಗೆ 'ಉತ್ತಮಗೊಳ್ಳಲು' ಯಾವ ಮಾಹಿತಿಯೂ ದೊರೆಯುವುದಿಲ್ಲ. ವೈದ್ಯಕೀಯ ನಿಯತ ಕಾಲಿಕೆಗಳು 'ಇತ್ತ' ನೋಡುವುದೂ ಇಲ್ಲ.

೮. ಸಾಹಿತ್ಯಕ ಮೌಲ್ಯ :

ವೈದ್ಯ ಸಾಹಿತ್ಯದಲ್ಲಿ 'ಮಾಹಿತಿ ನೀಡುವಿಕೆಗೆ' ಪ್ರಮುಖ ಸ್ಥಾನ. ಸಾಹಿತ್ಯಕ ಅಂಶಗಳಿಗೆ ಎಷ್ಟು ಒತ್ತು ಕೊಡಬೇಕು ಎನ್ನುವುದು ಅಸ್ಪಷ್ಟ. ಬರವಣಿಗೆಯ ಶೈಲಿ ಸರಳ, ನೇರ ಹಾಗೂ ಓದಿಸಿಕೊಂಡು ಹೋಗುವಂತಿದ್ದರೆ ಸಾಕೇ ಅಥವಾ ಯಾವುದಾದರೂ ತಂತ್ರ, ವಿಧಾನವನ್ನು ಬಳಸಬೇಕೇ ? ಡಾ॥ ಎಂ. ಶಿವರಾಂ ಅವರು 'ಹಾಸ್ಯ'ವನ್ನು ಬೆರೆಸಿ, ವೈದ್ಯ ಸಾಹಿತ್ಯ ರಚನೆ ಮಾಡಿ, ಜನಪ್ರಿಯರಾದದ್ದು ಗಮನಾರ್ಹ.

● ಪ್ರಕಟಣೆ/ಪ್ರಚಾರ/ಮಾರಾಟ :

ವೈದ್ಯ ಸಾಹಿತ್ಯವನ್ನು ಹೇಗೋ ಕಷ್ಟಪಟ್ಟು ಸೃಷ್ಟಿಸಬಹುದು. ಆದರೆ ಅದರ ಪ್ರಕಟಣೆ, ಹಿಮಾಲಯಾ ಪರ್ವತವನ್ನು ಹತ್ತುವಷ್ಟೇ ಕಷ್ಟ ಎಂದರೆ ಉತ್ಪ್ರೇಕ್ಷೆ ಏನಲ್ಲ. ಈ ಮುಂಚೆ, ಸಾರ್ವತ್ರಿಕ–ಸಾಹಿತ್ಯದ ಪತ್ರಿಕೆಗಳಲ್ಲಿ ವೈದ್ಯ ಲೇಖನಗಳನ್ನು ಅಚ್ಚಿಸುವ ಕಷ್ಟದ ಬಗ್ಗೆ ಹೇಳಿದೆ. ನಮ್ಮಲ್ಲಿ ವೈದ್ಯಕೀಯ ಸಾಹಿತ್ಯಕ್ಕೇ ಮೀಸಲಾದ ಪತ್ರಿಕೆಗಳು ಇವೆ ಎಂದರೆ, ಹೌದೆ, ಅವುಯಾವುವು, ಯಾರು ಪ್ರಕಟಿಸುತ್ತಾರೆ ಎಂದು ಎಲ್ಲರೂ ಕೇಳುತ್ತಾರೆ ! ಇದರಿಂದ ಈ ಪತ್ರಿಕೆಗಳು ಎಷ್ಟರ ಮಟ್ಟಿಗೆ 'ಜನಪ್ರಿಯ' ಎನ್ನುವುದು ತಿಳಿದು ಹೋಗುತ್ತದೆ. ಮೈಸೂರಿನ ಡಾ॥ ಯೋಗಣ್ಣ ಅವರ 'ಆರೋಗ್ಯಯೋಗ', ಪುಣೆಯಿಂದ ಹೊರಡುವ 'ಆರೋಗ್ಯ ವಾಣಿ', ಆರೋಗ್ಯವಾಗಿ, ಕ್ರಮವಾಗಿ ಬರುತ್ತಿವೆ.

ಧಾರವಾಡದ 'ಆರೋಗ್ಯರಕ್ಷಕ' ಬೆಂಗಳೂರಿನ 'ಆನಂದ-ಆರೋಗ್ಯ' ಇತ್ಯಾದಿ ಪತ್ರಿಕೆಗಳು ಹೆಸರಿಗೆ ಮಾತ್ರ ಇವೆ. ಆಯುರ್ವೇದದ ವಿಚಾರಗಳನ್ನು ತಿಳಿಸುವ 'ವೈದ್ಯವಾರ್ತೆ' ಪ್ರಕಟವಾಗುತ್ತಿದೆ. ಸಾವಿರವೋ ಎರಡು ಸಾವಿರವೋ ಪ್ರತಿಗಳನ್ನು ಅಚ್ಚುಹಾಕಿ, ಅವು ಖರ್ಚಾಗದೆ, ಈ ಪತ್ರಿಕೆಗಳನ್ನು ಪ್ರಕಟಿಸುವವರು ಕೈಸುಟ್ಟುಕೊಂಡಿದ್ದಾರೆ. ವೈದ್ಯ ಲೇಖನಗಳಿಗೆ ಆದ್ಯತೆ ನೀಡುತ್ತಿದ್ದ ಬೆಂಗಳೂರು ವಿಶ್ವವಿದ್ಯಾಲಯದ 'ಜನಪ್ರಿಯ ವಿಜ್ಞಾನ' ಮಾಸಪತ್ರಿಕೆ, ತನ್ನ ಕೊನೆಯುಸಿರನ್ನು ಎಳೆಯುತ್ತಿದೆ. ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆಯ 'ಮಾನಸಿಕ ಆರೋಗ್ಯ' ದ್ವೈಮಾಸಿಕ ಸದ್ಯಕ್ಕೆ ನಿಂತು ಹೋಗಿದೆ. ಭಾರತೀಯ ವೈದ್ಯ ಮಂಡಲಿ (I.M.A), ಇತರ ವೈದ್ಯ ಸಂಘ ಸಂಸ್ಥೆಗಳು, ಕನ್ನಡ ಸಾಹಿತ್ಯ ಪರಿಷತ್ತು ಅಕಾಡೆಮಿ, ಪ್ರಸಾರಾಂಗಗಳು ವೈದ್ಯ ಕಾಲೇಜುಗಳು ಈ ದಿಸೆಯತ್ತ ಯೋಚಿಸಿಯೂ ಇಲ್ಲ ಎನ್ನುವುದು ಬಹಳ ನೋವಿನ ಸಂಗತಿ.

ಇನ್ನು ಪುಸ್ತಕ ಪ್ರಕಟಣೆ, ಕಥೆ ಕಾದಂಬರಿಗಳನ್ನು ಹೇಗೋ ಪ್ರಕಟಿಸಬಹುದು. ವಿಜ್ಞಾನ ಸಾಹಿತ್ಯದ ಪುಸ್ತಕ ರೂಪದ ಪ್ರಕಟಣೆ ಬಲು ಕಷ್ಟ. ಇದನ್ನು ಸರ್ಕಾರಿ/ಅರೆಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಮಾಡಲಿ. ನಷ್ಟವಾದರೆ ಅವುಗಳಿಗೆ ಚಿಂತೆ ಇಲ್ಲ (!) ಎಂಬ ಧೋರಣೆ ಇದೆ. ಖಾಸಗೀ ಪ್ರಕಾಶಕ ನೋಡುವುದು, ನೀವು ಏನು ಬರೆದಿದ್ದೀರಿ, ಅದರ ಮಹತ್ವ, ಉಪಯುಕ್ತತೆಯನ್ನಲ್ಲ. ಆತ ನಿರೀಕ್ಷಿಸುವುದು (೧) ನೀವು ಈಗಾಗಲೇ ಜನಪ್ರಿಯರಾಗಿರಬೇಕು ನಿಮ್ಮ ಹೆಸರಿನ ಮೇಲೇ ಪುಸ್ತಕ ಮಾರಾಟವಾಗಬೇಕು (೨) ನೀವು ಬರೆದಿರುವುದು ರೊಮ್ಯಾಂಟಿಕ್ ಅಥವಾ ಸಸ್ಪೆನ್ಸ್ ಥ್ರಿಲ್ಲರ್ ಕಾದಂಬರಿಯಾಗಿರಬೇಕು (೩) ನೀವು ಸಂಭಾವನೆ (Royalty)ಯನ್ನು ಕೇಳಬಾರದು, ಸಾಧ್ಯವಾದರೆ ನೀವೇ ಉಚಿತವಾಗಿ ಹಣಹೂಡಲು ಸಿದ್ಧರಾಗಿರಬೇಕು. (೪) ನೀವೇ ಅರ್ಧದಷ್ಟು ಪ್ರತಿಗಳ ಮಾರಾಟಕ್ಕೆ ವ್ಯವಸ್ಥೆ ಮಾಡಬೇಕು ಇನ್ನೂ ಕೆಲವು ಷರತ್ತುಗಳ ಮೇಲೆ ನಿಮ್ಮ ಕೃತಿಯನ್ನು ಪ್ರಕಟಿಸುವ ಕೃಪೆಮಾಡುತ್ತಾನೆ !

ನನ್ನ ಮೂರನೇ ಪುಸ್ತಕ 'ಚಿತ್ತವಿಹಾರ'ವನ್ನು ಎರಡು ಮೂರು ಕಡೆ ಪ್ರಕಟಿಸಲು ಪ್ರಯತ್ನಿಸಿ ವಿಫಲನಾಗಿದ್ದೆ. ನನ್ನ ಮಿತ್ರರಾದ ಹಿರಿಯ ಲೇಖಕರೊಬ್ಬರು, ಒಂದು ಪ್ರಕಾಶನ ಸಂಸ್ಥೆಗೆ 'ಚೆನ್ನಾಗಿದೆ ಪ್ರಕಟಿಸಿ, ಮಾರಾಟವಾಗು

ತ್ತದೆ' ಎಂದು ಶಿಫಾರಸ್ಸು ಮಾಡಿದರು. ಪ್ರಕಾಶಕರು ಸೂಚಿಸಿದ ತಿದ್ದುಪಡಿಗಳನ್ನು ಮಾಡಿಕೊಟ್ಟು, ಆರು ತಿಂಗಳುಗಳಾದರೂ, ಹಸ್ತಪ್ರತಿ ಅಚ್ಚಿನ ಮನೆಗೆ ಹೋಗದಿರುವುದನ್ನು ಕಂಡು, ನಾನು ಹೆದರಿಕೊಂಡೇ 'ಯಾವಾಗ ಮುದ್ರಿಸುತ್ತೀರಿ' ಎಂದು ಕೇಳಿದೆ. ಅಗ್ನಿಪರ್ವತ ಸಿಡಿಯಿತು. 'ಈ ಲೇಖಕರೇ ಹೀಗೆ ತಾವು ಬರೆದದ್ದೆಲ್ಲಾ ತಕ್ಷಣ ಅಚ್ಚಾಗಬೇಕು ಅಂತ ಅವಸರಿಸುತ್ತಾರೆ. ಡಾಕ್ಟರೇ ನನ್ನಲ್ಲಿ ಮೂರು ನಾಲ್ಕು ವರ್ಷದ ಹಸ್ತಪ್ರತಿಗಳಿವೆ. ಆರು ತಿಂಗಳಾಗಿರುವ ನಿಮ್ಮದು ಯಾವ ಲೆಕ್ಕ. ನಮ್ಮ ಕೆಲಸ, ಕಷ್ಟ ನಮಗೇ ಗೊತ್ತು ಸುಮ್ಮನಿರಿ' ಎಂದು ಗದರಿಬಿಟ್ಟರು ! ಹಸ್ತಪ್ರತಿಕೊಟ್ಟು ಹಲವಾರು ವರ್ಷಗಳು ಕಾಯಬೇಕು. ಕನ್ನಡ ಸಾಹಿತ್ಯ ಪರಿಷತ್ತು, ಪ್ರಸಾರಾಂಗಗಳು ನಿಧಾನಗತಿಗೆ ಹೆಸರಾದುವು. 'ಕಮಿಟಿಗೆ ಬರೆದಿದ್ದೇವೆ. ಅವರು ಸೇರೇ ಇಲ್ಲ. ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ಕಾಯಿರಿ....ಅಚ್ಚಿನ ಮನೆಗೆ ಹೋಗಿದೆ. ಅಲ್ಲಿ ದೊಡ್ಡ ಕ್ಯೂ ಇದೆ, ನೋಡಿ' ಎನ್ನುವ ಉತ್ತರಗಳು ಸಿಗುತ್ತಿರುತ್ತವೆ ! ಕನ್ನಡ ಸಂಸ್ಕೃತಿ ಇಲಾಖೆ ಪುಸ್ತಕ ಪ್ರಕಟಣೆಗೆ (ಅದೂ ೨ನೇ ಮುದ್ರಣಕ್ಕೆ) ಲೇಖಕರಿಗೆ ಸ್ವಲ್ಪ ಧನಸಹಾಯ ನೀಡುವ ಕಾರ್ಯಕ್ರಮವನ್ನು ಹೊಂದಿದೆ. ಬೇಗ ನೆರವು ಸಿಕ್ಕಿದರೆ ನಿಮ್ಮ ಪುಣ್ಯ.

ಇನ್ನು ಕೆಲವು ಪ್ರಕಾಶನ ಸಂಸ್ಥೆಗಳು ಅಂಗೈಯಲ್ಲೇ ಆಕಾಶವನ್ನು ತೋರಿಸಿ ಮರುಳು ಮಾಡುತ್ತವೆ. ನಾಡಿನ ದೊಡ್ಡ ಪ್ರಕಾಶನ ಸಂಸ್ಥೆಯವರೊಬ್ಬರು ನಮ್ಮ ಮನೆಗೇ ಬಂದು 'ಡಾಕ್ಟರೇ, ನಿಮ್ಮ ಎಲ್ಲ ಕೃತಿಗಳ ಪ್ರಕಟಣೆಯ ಜವಾಬ್ದಾರಿಯನ್ನು ನಾವು ಹೊತ್ತುಕೊಳ್ಳುತ್ತೇವೆ. ನಿಮ್ಮ ಕೆಲಸ, ಬರೆದುಕೊಡುವುದು. ಅದನ್ನು ಅಚ್ಚಿಸಿ, ಓದುಗರಿಗೆ ತಲುಪಿಸುವುದು ನಮ್ಮ ಹೊಣೆ. ಈಗ ಯಾವುದಾದರೂ ಹಸ್ತಪ್ರತಿ ಇದ್ದರೆ ಕೊಡಿ, ಒಂದು ತಿಂಗಳೊಳಗೆ ಪುಸ್ತಕ ಬಿಡುಗಡೆಯಾಗುತ್ತದೆ' ಎಂದಾಗ ನಾನು ಮರುಳಾದೆ. ಹಸ್ತಪ್ರತಿಕೊಟ್ಟೆ. ಇಂದಿಗೆ ಎಂಟು ವರ್ಷವಾಯಿತು. ಪುಸ್ತಕವಿರಲಿ, ಹಲವು ಸಲ ಪತ್ರ ಬರೆದರೂ, ಹಸ್ತಪ್ರತಿಯನ್ನೂ ಹಿಂದಿರುಗಿಸಲಿಲ್ಲ !

ಇನ್ನು ಕೆಲವು ಸಂಸ್ಥೆಗಳು, ಲೇಖಕರಿಗೆ ಮೋಸ ಮಾಡಲೂ ಹಿಂಜರಿಯುವು

ದಿಲ್ಲ. ಒಂದು ಸಾವಿರ ಪ್ರತಿಗಳನ್ನು ಅಚ್ಚಿಸಿದ್ದೇವೆ ಎಂದು ಹೇಳಿ, ಅಷ್ಟಕ್ಕೆ ಸಂಭಾವನೆಕೊಟ್ಟು (ಅದೂ ಕಂತು ಕಂತಾಗಿ) ಎರಡು ಅಥವಾ ಮೂರು ಸಾವಿರ ಪ್ರತಿಗಳನ್ನು ಅಚ್ಚು ಹಾಕಿ, ಲಾಭಗಳಿಸಲು ನೋಡುತ್ತಾರೆ. ಒಂದು ಆವೃತ್ತಿ ಮುಗಿದ ಮೇಲೆ, ಎರಡನೇ, ಮೂರನೇ ಆವೃತ್ತಿ ಮುದ್ರಿಸಲು ಮುಂದಾಗುವುದಿಲ್ಲ. ಏಕೆಂದರೆ ಮಾರಾಟದ ವೇಗ ಹೆಚ್ಚಿರುವುದಿಲ್ಲವಲ್ಲ !

ಪ್ರಕಾಶಕರು, ಲೇಖಕರಿಗೆ ಕೊಡುವ (ಅದೂ ಕೊಟ್ಟರೆ, ಗ್ಯಾರಂಟಿ ಇರುವುದಿಲ್ಲ !) ಸಂಭಾವನೆ (ರಾಯಲ್ಟಿ) ಪುಸ್ತಕದ ಮುಖ ಬೆಲೆಯ ಶೇಕಡಾ ಹತ್ತು ಮಾತ್ರ ! ಪುಸ್ತಕ ಮಾರಾಟದ ವೇಗವನ್ನು ಅನುಸರಿಸಿ, ಆರು ತಿಂಗಳಿಗೊಮ್ಮೆ ಕಂತಿನಲ್ಲಿ ಹಣಕೊಡುತ್ತಾರೆ. ಪುಸ್ತಕ ಮಾರಾಟವಾಗದಿದ್ದರೆ ಏನೂ ಇಲ್ಲ ! ಇದಕ್ಕೆ ಅಪವಾದವಾಗಿ ರಾಯಲ್ಟಿಯನ್ನು ಬಿಡುಗಡೆಯ ಸಮಯದಲ್ಲೇ, ಒಂದೇ ಗಂಟಿನಲ್ಲಿ ಕೊಡುವ ಸಂಸ್ಥೆಗಳ ಸಂಖ್ಯೆಬಹುಕಡಿಮೆ. ಅಂಥವು ಇನ್ನೂ ಇವೆ ಎನ್ನುವುದು ಸ್ವಲ್ಪ ಸಮಾಧಾನಕರ !

ಇವುಗಳಿಂದ ಬೇಸತ್ತ ಕೆಲವು ಲೇಖಕರು, ತಾವೇ ತಮ್ಮ ಪುಸ್ತಕಗಳನ್ನು ಪ್ರಕಟಿಸಿ, ಕಾದ ಬಾಣಲೆಯಿಂದ, ಉರಿವ ಬಲೆಗೆ ಬಿದ್ದಿದ್ದಾರೆ. ಹಲವು ಸಾವಿರ ರೂಪಾಯಿಗಳ ಬಂಡವಾಳ ಹೂಡಿ, ಪುಸ್ತಕವನ್ನು ಅಚ್ಚಿಸಿ, ಪ್ರತಿಗಳನ್ನು 'ಮನೆ ತುಂಬಿಸಿಕೊಂಡು', ಅವುಖರ್ಚಾಗದೆ ಕಂಗೆಟ್ಟಿದ್ದಾರೆ. ಸರ್ಕಾರಿ ಲೈಬ್ರರಿಗಳು 'ಕೃಪೆ' ಮಾಡಿ ಮುನ್ನೂರು ಪುಸ್ತಕಗಳ್ನು ಒಟ್ಟಾಗಿ ಕೊಂಡರೆ, ತಮ್ಮ ನಷ್ಟ ಕಡಿಮೆಯಾದೀತು ಎಂಬ ಆಸೆಯಿಂದ ಓಡಾಡಿದ್ದಾರೆ. 'ಮಾರಾಟಗಾರನ ಬಲೆಯಲ್ಲಿ'

ಪುಸ್ತಕ ಪ್ರಕಟಣೆ–ಮಾರಾಟದ ಕ್ಷೇತ್ರದ 'ವಿಲನ್' ಎಂದರೆ ಮಾರಾಟಗಾರ (ಇದಕ್ಕೆ ಅಪವಾದವಾದ ಮಾರಾಟಗಾರರಿದ್ದಾರೆ. ಅವರ ಸಂಖ್ಯೆ ಬಹಳ ಕಡಿಮೆ). ಈತ ಯಾವ ಪುಸ್ತಕ ಮಾರಾಟವಾಗಬೇಕು, ಯಾವುದು ಆಗದೇ ರದ್ದೀ ಕಾಗದಕ್ಕೆ ಸೇರಬೇಕು ಎಂಬುದನ್ನು ನಿರ್ಧರಿಸುತ್ತಾನೆ. ಪುಸ್ತಕದ ಮುಖ ಬೆಲೆಯ ಶೇಕಡಾ ೫೦ ರಿಂದ ೭೦ ರವರೆಗೆ ಕಮಿಶನ್ ಕೇಳುವ ಇವನು ಲೇಖಕನ

ಹಣೆ ಬರಹವನ್ನು ಬರೆಯುಬಲ್ಲ. ಹೆಚ್ಚು ಕಮಿಶನ್ ಸಿಗುವ ಎಂಥದೇ ಪುಸ್ತಕ ವನ್ನು ಅಂಗಡಿಯ ಶೋ ವಿಂಡೋದಲ್ಲಿಟ್ಟು, ಪ್ರಚಾರ ಮಾಡಿ ಖರ್ಚು ಮಾಡು ತ್ತಾನೆ. ಕಡಿಮೆ ಕಮಿಶನ್ನಿನ ಪುಸ್ತಕವನ್ನು ಗೋಡೌನಿಗೆ ತಳ್ಳಿ 'ನಿಮ್ಮ ಪುಸ್ತಕ ಖರ್ಚಾಗುವುದಿಲ್ಲ ಸ್ವಾಮಿ. ಖರ್ಚಾದರೆ ಬಂದು ಹಣ ತೆಗೆದುಕೊಳ್ಳಿ. ಜನ ಇಂತಹ ಸೀರಿಯಸ್ ಸಾಹಿತ್ಯವನ್ನು ಓದುವುದಿಲ್ಲ' ಎನ್ನುತ್ತಾನೆ !

ಎಲ್ಲಿಯವರೆಗೆ ಪ್ರಕಾಶಕರು, ಲೇಖಕರು ತಮ್ಮದೇ ಆದ 'ಮಾರಾಟ ಜಾಲ' ಅಥವಾ 'ಓದುಗರನ್ನು ಮುಟ್ಟುವ ವಿಧಾನವನ್ನು ಹೊಂದುವುದಿಲ್ಲವೋ, ಅಲ್ಲಿಯವರೆಗೆ ಮಾರಾಟಗಾರ 'ಅನಧಿಕೃತ ಸಾಮ್ರಾಟನಾಗಿ ಮುಂದುವರೆಯು ತ್ತಾನೆ. ತನಗೆ ಹೆಚ್ಚು ಹಣ ತರದ 'ವೈದ್ಯ ವಿಜ್ಞಾನ ಪುಸ್ತಕಗಳ ಕೊರಳು ಕೊಯ್ಯುತ್ತಾನೆ. ಲೈಂಗಿಕ ಸಾಹಿತ್ಯದ ಅಗ್ಗದ-ಕೀಳು ಮಟ್ಟದ ಕೃತಿಗಳನ್ನು ಸಮುದಾಯದ ಮೂಲೆ ಮೂಲೆಗೆ ತಲುಪಿಸುತ್ತಾನೆ !

'ಕನ್ನಡ ಜನ ಪುಸ್ತಕಗಳನ್ನು ಅದರಲ್ಲೂ ವಿಜ್ಞಾನ, ವೈದ್ಯಸಾಹಿತ್ಯವನ್ನು ಕೊಳ್ಳುವುದಿಲ್ಲ' ಎಂಬ ಪ್ರಕಾಶಕ-ಮಾರಾಟಗಾರರ ದೂರನ್ನು ನಾನು ಒಪ್ಪುವು ದಿಲ್ಲ. ಈ ದೂರು ಮೇಲ್ನೋಟಕ್ಕೆ ನಿಜ ಅದಕ್ಕೆ ಕಾರಣ ಜನರಂತೂ ಅಲ್ಲವೇ ಅಲ್ಲ. ಜನ ಈ ಪುಸ್ತಕಗಳನ್ನು ಖಂಡಿತ ಬಯಸುತ್ತಾರೆ. ಜನಪ್ರಿಯ ಶೈಲಿ ಯಲ್ಲಿ ಬರೆಯದೆ, ಪಠ್ಯಪುಸ್ತಕದಂತೆ ಬರೆಯುವ ವೈದ್ಯ ಲೇಖಕ, ದುಬಾರಿ ಬೆಲೆಯನ್ನಿಡುವ ಪ್ರಕಾಶಕ, ಇಂತಹ ಪುಸ್ತಕಗಳಿವೆ ಎಂದು ಪ್ರಚಾರ ಮಾಡದ ಮಾರಾಟಗಾರ, ಇತರ ಸುದ್ದಿ ಮಾಧ್ಯಮಗಳು ಇದಕ್ಕೆ ಕಾರಣ. ಇಂದಿನ ದಿನ ಗಳಲ್ಲಿ ಪುಸ್ತಕದ ಬೆಲೆ ೫ ರಿಂದ ೧೫ ರೂಪಾಯಿಯೊಳಗಿದ್ದರೆ. ಆಕರ್ಷಕ- ಗಮನ ಸೆಳೆಯುವ ಶಿರೋನಾಮೆ (ಟೈಟ್ಲ್) ಹಾಗೂ ಕವರ್ ಜಾಕೆಟ್ (ಹೊದಿಕೆ) ಇದ್ದರೆ, ಪುಸ್ತಕ ಅಕ್ಷರಸ್ಥ ಜನ ಸಾಮಾನ್ಯರ ಕಣ್ಣಿಗೆ ಬೀಳುವಂತಾದರೆ, ಜೊತೆಗೆ ಆ ವೈದ್ಯ ವಿಷಯದ ಬಗ್ಗೆ ತಜ್ಞರಿಂದ ಭಾಷಣ, ಚರ್ಚೆ ನಡೆದರೆ ಪುಸ್ತಕ 'ಬಿಸಿ ದೋಸೆ'ಯಂತೆ ಖರ್ಚಾಗುತ್ತದೆ. ಪುಸ್ತಕ ಬರೆಯುವಾಗ ಒಂದೇ ಕಾಯಿಲೆಯ ಬದಲು, ಆ ಅಂಗಕ್ಕೆ ಸಂಬಂಧಿಸಿದಂತೆ ಬರುವ ಎಲ್ಲ ಕಾಯಿಲೆಗಳ ಬಗ್ಗೆ ಮಾಹಿತಿ ಇರಬೇಕು. ಕಾಯಿಲೆಯ ಕಾರಣ ಲಕ್ಷಣಗಳ ಜೊತೆಗೆ ರೋಗಿ ಮನೆಯಲ್ಲೇ ಮಾಡಬಹುದಾದಂತಹ ಸರಳ ಚಿಕಿತ್ಸೆ ಪಾಲಿಸಬೇಕಾದ ಎಚ್ಚರಿಕೆ ಕ್ರಮಗಳು,

ಔಷಧಗಳ ಸಂಭವನೀಯ ಅಡ್ಡಪರಿಣಾಮಗಳು, ಕಾಯಿಲೆ ಮರುಕಳಿಸದಂತೆ ಮಾಡಬಲ್ಲ ವಿಧಿವಿಧಾನಗಳು ಕೆಲವು ರೋಗಿ-ಪ್ರಕರಣಗಳು (case histories) ಇದ್ದರೆ, ಅದು ಜನಾನುರಾಗಿಯಾಗಬಲ್ಲದು. ರೇಖಾ ಚಿತ್ರಗಳು ಛಾಯಾ ಚಿತ್ರಗಳು ಪುಸ್ತಕದ ಆಕರ್ಷಣೆಯನ್ನು ಹೆಚ್ಚಿಸಬಲ್ಲವು. ಒಂದು ವಿಷಯದ ಬಗ್ಗೆ ಎ ನಿಂದ ಜಡ್‌ವರೆಗೆ ಎಲ್ಲ ಮಾಹಿತಿಗಳನ್ನು ತುಂಬುವ ಬದಲು, ಸಾಮಾನ್ಯ ವ್ಯಕ್ತಿಗೆ ಅಗತ್ಯವಾದ ಕೆಲವೇ ಮುಖ್ಯ ಮಾಹಿತಿಗಳ ಬಗ್ಗೆ ವಿವರವಾದ ನಿರೂಪಣೆ ಅಪೇಕ್ಷಣೀಯ.

ಪರಿಹಾರ : ವೈದ್ಯಕೀಯ ಸಾಹಿತ್ಯದ ನಿರ್ಮಾಣ. ಪ್ರಕಟಣೆ ಪ್ರಚಾರ, ಮಾರಾಟದ ಸ್ಥಿತಿ ಉತ್ತಮಗೊಳ್ಳಲು ಕೆಳಕಾಣುವ ಬದಲಾವಣೆಗಳು ಶೀಘ್ರವಾಗಿ ನಡೆಯಬೇಕಾಗಿದೆ.

೧. ಹೆಚ್ಚೆಚ್ಚು ವೈದ್ಯರು 'ವೈದ್ಯ ಸಾಹಿತ್ಯ'ವನ್ನು ಬರೆಯಲು ಮುಂದಾಗ ಬೇಕು.

೨. 'ಜನಪ್ರಿಯ ವೈದ್ಯ ಸಾಹಿತ್ಯ ಹೇಗಿರಬೇಕು, ಅದರ ಸೃಷ್ಟಿ ಎಂತು ಎನ್ನುವುದರ ಬಗ್ಗೆ ಎಲ್ಲೆಡೆ, ಹಲವು ಸಲ ಕಾರ್ಯಾಗಾರಗಳು' ನಡೆಯ ಬೇಕು.

೩. ಇದುವರೆಗೆ ಪ್ರಕಟವಾಗಿರುವ ಈಗ ಪ್ರಕಟವಾಗುತ್ತಿರುವ ವೈದ್ಯ ಸಾಹಿತ್ಯದ ಬಗ್ಗೆ ವಿಪುಲ ಚರ್ಚೆ, ವಿಮರ್ಶೆ ನಡೆಯಬೇಕು.

೪. ವೈದ್ಯ ಲೇಖಕ, ಪತ್ರಿಕಾ ಸಂಪಾದಕ, ಪ್ರಕಾಶಕ, ಮಾರಾಟಗಾರ, ಓದುಗ ವಿಮರ್ಶಕ-ಇವರ ನಡುವೆ ಹೆಚ್ಚು ವಿಚಾರ ವಿನಿಮಯ ನಡೆಯಲು 'ವೇದಿಕೆ'ಗಳನ್ನು ವ್ಯವಸ್ಥೆ ಮಾಡಬೇಕು.

೫. ಜನಪ್ರಿಯ ವೈದ್ಯರಿಂದ ವೈದ್ಯವಿಚಾರಗಳ ಬಗ್ಗೆ ಜನರಿಗಾಗಿ ಬಾಷಣ, ಚರ್ಚೆ, ವಿಚಾರ ಸಂಕಿರಣ, ವೈದ್ಯ-ಪುಸ್ತಕಗಳ ಮಾರಾಟ ಏರ್ಪಾಟಾಗ ಬೇಕು.

೬. ಪ್ರತಿ ಚಿಕಿತ್ಸಾಲಯ, ಆಸ್ಪತ್ರೆಯಲ್ಲಿ ವೈದ್ಯ–ಸಾಹಿತ್ಯದ ಪ್ರದರ್ಶನ ಮಾರಾಟದ ವ್ಯವಸ್ಥೆಯಾಗಬೇಕು. ಪ್ರತಿ ವೈದ್ಯರೂ, ತಮ್ಮ ರೋಗಿಗಳನ್ನು ಮನೆಯವರನ್ನು ವೈದ್ಯ–ಸಾಹಿತ್ಯವನ್ನು ಓದಲು, ಅದನ್ನು ತಮ್ಮೊಂದಿಗೆ ಚರ್ಚಿಸಲು ಪ್ರೋತ್ಸಾಹಿಸಬೇಕು.

೭. ವೈದ್ಯ ಸಂಘ–ಸಂಸ್ಥೆಗಳು ವೈದ್ಯ–ನಿಯತ ಕಾಲಿಕೆಗಳನ್ನು ಪುಸ್ತಕಗಳನ್ನು ಪ್ರಕಟಿಸಲು ಮುಂದಾಗಬೇಕು.

೮. ವಿವಿಧ ಸಾಹಿತ್ಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಮತ್ತು ಸರ್ಕಾರ ವೈದ್ಯ ಸಾಹಿತ್ಯದ ಪ್ರಕಟಣೆ, ವಿಮರ್ಶೆ, ಮಾರ್ಗದರ್ಶನ ಚಟುವಟಿಕೆಗಳಿಗೆ ಹೆಚ್ಚಿನ ನೆರವನ್ನು, ಪ್ರೋತ್ಸಾಹವನ್ನು ನೀಡಬೇಕು.

೯. ನಮ್ಮ ಜನ ವೈದ್ಯ ಸಾಹಿತ್ಯವನ್ನು ಕೊಂಡು ಓದುವುದಲ್ಲದೆ, ಲೇಖಕರಿಗೆ ತಮ್ಮ ಮೆಚ್ಚುಗೆ ಮತ್ತು ಟೀಕೆಗಳನ್ನು ತಿಳಿಸಬೇಕು. ವೈದ್ಯ–ಸಾಹಿತ್ಯ ಆಸ್ವಾದನಾ ಕೂಟಗಳನ್ನು ನಡೆಸಿ, ಲೇಖಕರನ್ನು ಕರೆಸಿ, ತಮ್ಮ ಪ್ರತಿಕ್ರಿಯೆಗಳನ್ನು ನೇರವಾಗಿ ತಿಳಿಸಬೇಕು. ಇಂತಹ ಸಾಹಿತ್ಯದ ಬಗ್ಗೆ ತಾವೇ ಪ್ರಚಾರ ಮಾಡಿ, ಅದು ಮತ್ತಷ್ಟು ಜನರನ್ನು ಮುಟ್ಟುವಂತೆ ನೋಡಿಕೊಳ್ಳಬೇಕು.

* *

೯ ಪ್ರಶ್ನೆಗಳಿಗೆ ತಮ್ಮ ಉತ್ತರಗಳನ್ನು ನಾಲ್ಕು ಮಂದಿ ಪ್ರಕಾಶಕ–ವಿತರಕರು ಕಳುಹಿಸಿದ್ದಾರೆ. (ಪ್ರಶ್ನಾವಳಿಯನ್ನು ೨೦ ಮಂದಿಗೆ ಕಳುಹಿಸಲಾಗಿತ್ತು.)

ಪ್ರಶ್ನೆ	ಪ್ರಕಾಶಕ ೧	೨	೩	೪
೧. ನೀವು ವೈದ್ಯಕೀಯ ಪುಸ್ತಕಗಳನ್ನು ಪ್ರಕಟಿಸಿದ್ದೀರಾ ?	ಇಲ್ಲ	ಹೌದು	ಹೌದು	ಇಲ್ಲ
೨. ಹೌದಾದರೆ ಎಷ್ಟು ಪುಸ್ತಕಗಳು ?	—	೧೮	೮	—
೩. ಈ ಪುಸ್ತಕಗಳ ಬಗ್ಗೆ ಜನ ಉತ್ಸಾಹ ತೋರಿಸುತ್ತಾರೆಯೇ ? ಹೌದು/ಇಲ್ಲ.	ಹೌದು	ಹೌದು ಸಾಧಾರಣ	ಹೌದು	ಹೌದು
೪. ಜನ ಈ ಪುಸ್ತಕಗಳನ್ನು ಕೊಳ್ಳುವುದರ ಬಗ್ಗೆ ನಿಮ್ಮ ಅನುಭವ. ಕಷ್ಟ/ಸಾಧಾರಣ/ತೃಪ್ತಿಕರ	ತೃಪ್ತಿ	ಸಾಧಾರಣ	ತೃಪ್ತಿ	ಸಾಧಾರಣ
೫. ಒಂದು ಸಾವಿರ ಪ್ರತಿಗಳು ಖರ್ಚಾಗಬೇಕಾದರೆ ಎಷ್ಟು ಅವಧಿ ಬೇಕು ?	೧ ರಿಂದ ೩ ವರ್ಷ	೪ ರಿಂದ ೧೦ ವರ್ಷ	೧ ವರ್ಷಕ್ಕೂ ಮೇಲೆ	೧ ವರ್ಷ
೬. ಪುಸ್ತಕ ಮಾರಾಟಗಾರರು ಈ ಪುಸ್ತಕಗಳನ್ನು ಮಾರಾಟ ಮಾಡಲು ಮುಂದೆ ಬರುತ್ತಾರೆಯೇ ?	ಹೌದು	ಕಷ್ಟ	ಕಷ್ಟ	ಸಾಧಾರಣ

೭.	ವೈದ್ಯ ಲೇಖಕರ ಬಗ್ಗೆ–ಅವರ ಜನಪ್ರಿಯತೆ ಬಗ್ಗೆ ನಿಮ್ಮ ಅನಿಸಿಕೆ ಏನು ? ಈ ಪುಸ್ತಕಗಳ ಮೇಲೆ ಬಂಡವಾಳ ಹೂಡಲು ನೀವು ಸಿದ್ಧರೇ ?	ಜನಪ್ರಿಯ. ನಾವೇ ಹಿಂಜರಿಯುತ್ತೇವೆ.	ಜನಪ್ರಿಯವಾಗಿ ಬರೆಯುವವರು ಇದ್ದಾರೆ	ಕೆಲವರಿದ್ದಾರೆ	ಒಬ್ಬರು ಇದ್ದಾರೆ
೮.	ವೈದ್ಯಕೀಯ ಸಾಹಿತ್ಯ ಪ್ರಕಟಿಸಲು, ಅದನ್ನು ಮುಂದುವರೆಸಲು ಇಷ್ಟಪಡುತ್ತೀರಾ ?	ಹೌದು	ಹೌದು	ಹೌದು	ಹೌದು
೯.	ವೈದ್ಯ ಸಾಹಿತ್ಯ ಪ್ರಕಟಣೆ ಉತ್ತಮಗೊಳ್ಳಲು ನಿಮ್ಮ ಸಲಹೆಗಳೇನು ?	ಸರಳ ಬರವಣಿಗೆ ಕಡಿಮೆ ಬೆಲೆ	ಓದುವ ಹವ್ಯಾಸ ಜನರಲ್ಲಿ ಬೆಳೆಯಬೇಕು	ಸುದ್ದಿ ಮಾಧ್ಯಮಗಳ ಪ್ರಚಾರ ಸರ್ಕಾರದ ಪ್ರೋತ್ಸಾಹ	ಸರಳ ಬರವಣಿಗೆ ಕಡಿಮೆ ಬೆಲೆ. ಪುಸ್ತಕ ಪ್ರದರ್ಶನಗಳ ಏರ್ಪಾಟು

ವೈದ್ಯ ಶಿಕ್ಷಣ, ಸಾಹಿತ್ಯ ಹಾಗೂ ಪ್ರಕಟಣೆಯ ಸಮಸ್ಯೆ

—ಆರ್. ಎಸ್. ರಾಜಾರಾಮ್

ಚೆನ್ನಾಗಿ ಬದುಕಬೇಕೆಂಬ ಆಸೆ ಯಾರಿಗಿಲ್ಲ ? ಅದು ದೀರ್ಘವಾದದ್ದಾಗಿದ್ದರೆ ಇನ್ನೂ ಒಳಿತು. ಅಂಥ ಬಾಳು ಆರೋಗ್ಯಪೂರ್ಣವಾಗಿರಬೇಕು. ಇಲ್ಲವಾದಲ್ಲಿ ಬಾಳಿನುದ್ದಕ್ಕೂ ಯಾತನೆ ಅನುಭವಿಸಬೇಕಾಗುತ್ತದೆ. ಆಗ ಬದುಕು ನೀರಸವಾಗುತ್ತದೆ. ಪ್ರಕೃತಿಯ ಶಿಶುವಾದ ಮಾನವ ತನ್ನ ದೇಹಾರೋಗ್ಯದ ಬಗ್ಗೆ ಅನಾದಿ ಕಾಲದಿಂದಲೂ ತನ್ನದೇ ಆದ ರೀತಿಯಲ್ಲಿ ಪರಿಹಾರ ಕಂಡುಕೊಳ್ಳಲು ಯತ್ನಿಸಿದ್ದಾನೆ.

ನಾಗರೀಕತೆಯನ್ನೇ ಕಂಡರಿಯದ, ಆದಿಮಾನವ ತನ್ನ ಆಹಾರವನ್ನು ಒದಗಿಸಿಕೊಳ್ಳುವ ಕಾಯಕದಲ್ಲಿ, ತನಗೊದಗಿದ ಆಪತ್ತುಗಳನ್ನು ಎದುರಿಸುವಲ್ಲಿ ಉಂಟಾದ ನೋವು, ಗಾಯ, ಇತ್ಯಾದಿಗಳಿಗೆ ಬೇರು, ನಾರು, ತೊಗಟೆ, ಎಲೆ, ಚಿಗುರು ಇತ್ಯಾದಿಗಳಲ್ಲಿ ಪರಿಹಾರವನ್ನು ಅರಸಿದ. ಸಸ್ಯರಾಶಿಯಲ್ಲಿನ ರಾಸಾಯನಿಕ ಪದಾರ್ಥ ಜೀವಕ್ರಿಯೆಗೆ ಅನುಕೂಲವೆಂಬ ಸತ್ಯವನ್ನು ತನ್ನ ಅನುಭವದಿಂದ ಕಂಡುಕೊಂಡ. ಪ್ರಾಯಶಃ ಭಾಷೆಯ ಮೂಲವಾದ ಸಂಕೇತ ಮಾಧ್ಯಮದ ಕಾಲದಲ್ಲೇ ವೈದ್ಯ ವಿಜ್ಞಾನದ ಅಸ್ಪಷ್ಟ ರೂಪ ಮೈದಳೆಯಿತು. ಪ್ರಕೃತಿಯೊಂದಿಗಿನ ಸೆಣಸಾಟದಲ್ಲಿ ವೈದ್ಯ ಜ್ಞಾನ ನೆರವಿಗೆ ಬಂದು, ದೇಹವನ್ನು ಸೆಣಸಾಟಕ್ಕೆ ಸಜ್ಜುಗೊಳಿಸಿದಾಗ, ವೈದ್ಯ ವಿಜ್ಞಾನದ ಪ್ರಚಾರ, ಶಿಕ್ಷಣ

ಮೊದಲಾಯಿತು. ಅಂದಂದಿನ ಆಹಾರದ ಹುಡುಕಾಟದಲ್ಲಿ ತೊಡಗಿದ್ದ ಆದಿಮಾನವ ಸಮೂಹ, ಆಹಾರ ಶೇಖರಣೆ ಹಾಗೂ ಸೇವನೆ ಎರಡನ್ನೂ ಸಾಮೂಹಿಕವಾಗಿಯೇ ನಿರ್ವಹಿಸುತ್ತಿತ್ತು. ಈ ಸಾಮೂಹಿಕ ಕಾರ್ಯಕ್ಕೆ ಅಡ್ಡಿ–ಅಡಚಣೆಗಳು ಉಂಟಾದಾಗ ವೈದ್ಯ ವಿಜ್ಞಾನದ ಅರಿವು ಎಲ್ಲರ ನೆರವಿಗೂ ಬರುತ್ತಿತ್ತು. ಈ ವಿದ್ಯೆಯ ಪ್ರಚಾರ, ಶಿಕ್ಷಣ, ಸಮೂಹ ಸುಖಕ್ಕಾಗಿ ಬಳಕೆಯಾಗುತ್ತಿತ್ತು. ಆದ್ದರಿಂದಲೇ ಪ್ರಾಚೀನ ಸಮಾಜದಲ್ಲಿ ಈ ಜ್ಞಾನವನ್ನು ಪಡೆಯಲು ಯಾವ ಅಡ್ಡಿ ಆತಂಕಗಳೂ ಇರಲಿಲ್ಲ. ಬಾಯ್ದೆರೆಯಾಗಿ ತಲೆಮಾರೆಯಿಂದ ತಲೆಮಾರೆಗೆ ಬಳುವಳಿಯಾಗಿ ಬಂದು, ಅನುಭವಗಳಿಂದ ಸ್ಫುಟಗೊಂಡ ಈ ವೈದ್ಯ ವಿದ್ಯೆ, ಹಳ್ಳಿಗಾಡಿನ ಬುಡಕಟ್ಟುಗಳಲ್ಲಿ ಪ್ರಚಲಿತವಾಗಿದ್ದು, ಜಾನಪದ ವೈದ್ಯ, ಮನೆ ಮದ್ದು, ಅಜ್ಜಿ ವೈದ್ಯ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತಿದೆ.

ಸಮಾಜದ ಬೆಳವಣಿಗೆ :

ಪ್ರಾಚೀನ ಸಮಾಜದ ನಂತರದ ಘಟ್ಟದಲ್ಲಿ ಮಾನವ ಮಾತು ಕಲಿತ. ಬೇಟೆಗೆ ಶಿಲಾಯುಧಗಳನ್ನು ಬಳಸಿದ. ಬಿತ್ತಿದರೆ ಬೆಳೆ ಬರುವುದೆನ್ನುವುದನ್ನು ಅರಿತ. ಪ್ರಾಚೀನ ಸಮಾಜದಲ್ಲಿ ಅಂದಂದಿನ ಆಹಾರ ಹುಡುಕಾಟದ, ಶೇಖರಣೆಯ, ಸಮೂಹ ಜವಾಬ್ದಾರಿಯ ಗತಿ ಬದಲಾಗಿ, ಉತ್ಪನ್ನ ಸಲಕರಣೆಗಳ ಆವಿಷ್ಕಾರದೊಂದಿಗೆ ನಾಳೆಗೆ ಉಳಿಸುವ ಸಂಗ್ರಹ ಪ್ರವೃತ್ತಿ ಆರಂಭವಾಯಿತು. ಗುಂಪುಗಳು–ಬುಡಕಟ್ಟುಗಳಲ್ಲಿ ಕುಟುಂಬ ಪದ್ಧತಿ ತಲೆಯೆತ್ತಿತು. ಉತ್ಪನ್ನ ಸಲಕರಣೆಗಳನ್ನು ಹೊಂದಿದವ ಯಜಮಾನನೆನಿಸಿದ. ಸಮಾಜದಲ್ಲಿ ದೈಹಿಕ ದುಡಿಮೆಗೆ ಈಡಾದವರು ನಿಕೃಷ್ಟರೆನಿಸಿದರೆ, ಬೌದ್ಧಿಕ ಮತ್ತು ಮಾನಸಿಕ ದುಡಿಮೆಯ ಪುರೋಹಿತ ವರ್ಗ ಸಮಾಜದಲ್ಲಿ ಉತ್ಕೃಷ್ಟರೆನಿಸಿ ಮೆಲ್ಲಮೆಲ್ಲನೆ ಸಮಾಜದ ಮೇಲಿನ ಹಿಡಿತವನ್ನು ಬಿಗಿಗೊಳಿಸಿತು. ವೈದ್ಯರಿಗೆ ಹಿಂದಿದ್ದ ಗೌರವ ಪುರಸ್ಕಾರಗಳು ಮಾಯವಾಗಿ ಈ ಘಟ್ಟದಲ್ಲಿ ಅವರು ನಿಂದನೆಗೆ ಒಳಗಾದರು.

ವೈದ್ಯರಿಗೆ ಜಾತಿಭೇದವಿಲ್ಲ. ಮೇಲು ಕೀಳಿಲ್ಲ. ವೈದ್ಯ ವಿಜ್ಞಾನದ

ಅನ್ವೇಷಣೆಯಲ್ಲಿ ನಿರತರಾಗಿದ್ದ ವೈದ್ಯರಿಂದ ವರ್ಣ ಸಂಕರವಾಗಬಹುದೆಂಬ ಭಯ ಪುರೋಹಿತ ವರ್ಗಕ್ಕೆ. ಸಮಾಜದಲ್ಲಿ ಸ್ಪಷ್ಟವಾಗಿ ವರ್ಣ ವಿಭಜನೆಯಾಗಿತ್ತು. ಆಳುವ ವರ್ಗ ಈ ವಿಜ್ಞಾನದ ಮೇಲೆ ತನ್ನ ಹಿಡಿತವನ್ನು ಬಿಗಿಗೊಳಿಸಲು, ಸಮಾಜದ ಉತ್ಪಾದನೆಯಲ್ಲಿ ಪಡೆಯಬೇಕಾದ ಪಾಲಿನಿಂದ ಶೋಷಣೆಗೊಳಗಾದ ವರ್ಗವನ್ನು ವಂಚಿಸಲು, ಪುರೋಹಿತ ವರ್ಗವನ್ನು ಬಳಸಿಕೊಂಡಿತು. ಸ್ವರ್ಗ–ನರಕ, ಪೂರ್ವ ಕರ್ಮ ಫಲ, ಅಲೌಕಿಕ ಶಕ್ತಿ ಇತ್ಯಾದಿ ಪರಿಕಲ್ಪನೆಗಳನ್ನು ಸಮಾಜದ ಅಮಾಯಕ ಜನವರ್ಗಗಳ ಮೇಲೆ ಹೇರಲಾಯಿತು.

ಪ್ರಕೃತಿಯ ನಿಯಮಗಳೆಲ್ಲ ನಿಗದಿತ ರೂಪದಲ್ಲಿವೆ. ಅದನ್ನು ತತ್ವವೇತ್ತರು 'ಸ್ವಭಾವ' ಎನ್ನುತ್ತಾರೆ. ಆ ಸ್ವಭಾವದ ಜ್ಞಾನವೇ ಪ್ರಕೃತಿ ಜ್ಞಾನ. ಎಲ್ಲಾ ವಸ್ತುಗಳು ಭೌತ ವಸ್ತುಗಳೇ. ಯಾವ ಜ್ಞಾನವೇ ಆಗಲಿ ಪರಿಪೂರ್ಣವಲ್ಲ. ಅನ್ವೇಷಕ ಮಾರ್ಗ ಅದಕ್ಕಿದೆ. ವೈದ್ಯ ಜ್ಞಾನದ ಚರಕ ಸಂಹಿತೆ ಹೇಳುವಂತೆ "ಒಂದು ದ್ರವ್ಯದ ಕ್ರಿಯೆಯು ಆ ದ್ರವ್ಯದಿಂದ ನಿರ್ಧರಿತವಾಗುತ್ತದೆಯೇ ಹೊರತು ಆ ಕ್ರಿಯೆಗೆ ಹೊರಗಿನ ಯಾವ ಪ್ರೇರಣೆಯೂ ಇಲ್ಲ". ಈ ಸ್ಪಷ್ಟ ನಿಲುವಿನ ವೈದ್ಯ ವಿಜ್ಞಾನವನ್ನು ಪುರೋಹಿತ ವರ್ಗ ಹೇಗೆ ತಾನೇ ಸಹಿಸೀತು !

ಐದು ಸಾವಿರ ವರ್ಷಗಳ ಹಿಂದಿನ ಸಮಾಜದ ರೀತಿ ರಿವಾಜುಗಳು, ಸಮಾಜದ ರೂಪುರೇಷೆ, ಚಿಂತನೆ ಇತ್ಯಾದಿಗಳ ಆಕರ ಋಗ್ವೇದ. ಇಲ್ಲಿ ಅನೇಕ ದೇವತೆಗಳನ್ನು ಹಾಡಿ ಹೊಗಳಲಾಗಿದೆ. ಸಮಾಜಕ್ಕೆ ಅವರಿಂದ ಆಗಬೇಕಾದ ಅನುಕೂಲಗಳನ್ನು ಹಲವು ಬಾರಿ ಸ್ಮರಿಸಲಾಗಿದೆ. ಅಂತಹ ದೇವತೆಗಳಲ್ಲಿ ಅಶ್ವಿನಿ ದೇವತೆಗಳೆಂಬವರು ಒಂದು ಜೋಡಿ. ಅವರು ದೇವ ವೈದ್ಯರು. ಅವರಿಗೆ ನಾಸತ್ಯರು (ಅಂದರೆ ಸತ್ಯಸಂದರು) ಎನ್ನುವ ಹೆಸರಿದೆ. ಋಗ್ವೇದ ನಂತರದ ಪ್ರಾಚೀನ ಸಾಹಿತ್ಯ ಯಜುರ್ವೇದ, ಶತಪಥ ಬ್ರಾಹ್ಮಣ ಇತ್ಯಾದಿಗಳಲ್ಲಿ ವೈದ್ಯರು ಅಪವಿತ್ರರು ಎಂಬ ನಿಂದನೆಯಿದೆ. ನೀಚ ಜಾತಿಯವರು ಮಾತ್ರವೇ ಅನುಸರಿಸಬಹುದಾದ ವೃತ್ತಿ ವೈದ್ಯಕೀಯ ಎನ್ನುವ ನಿಂದನೆ ಮನುಧರ್ಮ ಶಾಸ್ತ್ರದಲ್ಲಿದೆ. ವಾಸಿಷ್ಠ ಧರ್ಮ ಶಾಸ್ತ್ರದಂತೆ ವೈದ್ಯಕೀಯದಿಂದ ಜೀವನ ಮಾಡುವವರನ್ನು ಬ್ರಾಹ್ಮಣರೆಂದೆಣಿಸಲಾಗುವುದಿಲ್ಲ. ಅಶ್ವಿನಿ ದೇವತೆಗಳು ದೇವತೆಗಳಲ್ಲಿ ಕನಿಷ್ಠರು.

ಹವಿಭಾಗಕ್ಕೆ ಅನರ್ಹರು. ಇವೆಲ್ಲವುಗಳನ್ನು ಪರಿಗಣಿಸಿದಾಗ ವೈದ್ಯ ವಿಜ್ಞಾನಿಗಳನ್ನು ನಿಕೃಷ್ಟರೆಂದು ಹೆಸರಿಸಿ ಮತಧರ್ಮಕ್ಕೆ ಅವರನ್ನು ಶರಣಾಗಿಸುವ ಕಾರ್ಯವನ್ನು ಅಂದಿನ ಆಳುವ ವರ್ಗ ಕೈಗೆತ್ತಿಕೊಂಡಿತು. ನಂತರದ ಕಾಲದಲ್ಲಿ ಚಿಕಿತ್ಸೆಯ ಸಮಯದಲ್ಲಿ ಔಷಧವನ್ನು ಮಂತ್ರಿಸಿಕೊಡುವ ಕ್ರಮ ಆರಂಭವಾಯಿತು. ವೈದ್ಯಕೀಯಕ್ಕೆ ದೈವ ನಿಯಮ, ನಿಗೂಢತೆ, ಅಲೌಕಿಕ ಶಕ್ತಿಗಳನ್ನು ಆರೋಪಿಸಿ ಅದೊಂದು ವರಸಿದ್ಧಿಯೆಂಬ ಪ್ರಚಾರವನ್ನು ಮಾಡಲಾಯಿತು. ವೈದ್ಯ ಜ್ಞಾನದೊಂದಿಗೆ ಅಲೌಕಿಕ ಶಕ್ತಿಯ ಆವಾಹನೆ ತಮಗಾಗಿದೆಯೆಂಬ ಪ್ರಚಾರದೊಡನೆ, ಬಾಬಾಗಳು, ಸಂನ್ಯಾಸಿಗಳು ವೈದ್ಯಕ್ಷೇತ್ರಕ್ಕೆ ಪ್ರವೇಶ ಪಡೆಯುವುದರೊಂದಿಗೆ ಮೂಢನಂಬಿಕೆಗಳನ್ನು ಜನಮನದಲ್ಲಿ ಬಿತ್ತಿದರು. ವೈದ್ಯರನ್ನು ರಾಜಾಶ್ರಯಕ್ಕೆ ಒಳಪಡಿಸುವ ಪ್ರಯತ್ನ ನಡೆಯಿತು. ಪ್ರಭುತ್ವ ವಿರೋಧಿಗಳ, ಪ್ರಜೆಗಳ, ಬನ್ನಬವಣೆ, ನೋವು ನರಳಾಟಗಳು ಪೂರ್ವಕರ್ಮದ ಫಲವೆಂದು ಅವರಿಗೆ ವೈದ್ಯೋಪಚಾರವನ್ನು ನಿರಾಕರಿಸಲಾಯಿತು. ವಿಜ್ಞಾನದ ಗತಿಯನ್ನು ನಿಯಂತ್ರಿಸಲು ವಿಜ್ಞಾನೇತರ ಶಕ್ತಿಗಳು ಹೆಣಗಿದವು. ವೈದ್ಯ ವಿದ್ಯೆಗೆ ಆದರ ಪ್ರಚಾರಕ್ಕೆ ತಾತ್ಕಾಲಿಕವಾದ ತೊಂದರೆಗಳನ್ನು ಪುರೋಹಿತ ವರ್ಗ ಉಂಟು ಮಾಡಿತು. ಮತಧರ್ಮದಲ್ಲಿ ಪ್ರಚಲಿತವಾಗಿದ್ದ ನಿರಾಧಾರ ಕಲ್ಪನೆಗಳನ್ನು ತಮ್ಮ ಅನುಭವದ ಸತ್ಯದಿಂದ ಎದುರಿಸಿದ ಹಲವು ವಿಜ್ಞಾನಿಗಳ ಪಾಡನ್ನು ಇತಿಹಾಸ ಕಂಡಿದೆ. ಯಾವುದೇ ಫಲಿತಾಂಶವು ವಿಮರ್ಶೆಯಿಲ್ಲದೆ, ಪ್ರಯೋಗಕ್ಕೆ ಈಡಾಗದೇ ಸತ್ಯವೆಂದು ನಿರ್ಧಾರಿತವಾಗಲಾರದು. ಜ್ಞಾನವು ಕಾಲ ಮತ್ತು ಅನುಭವಗಳ ಶಿಶು. ಅದನ್ನು ಯಾವುದೇ ಅಧಿಕಾರವೂ ಬಗ್ಗುಬಡಿಯಲಾರದು ಎಂಬುದನ್ನು ೧೬ನೇ ಸತಮಾನದ ಗೆಲಿಲಿಯೋ, ಬ್ರೂನೊರಂತಹ ಹಲವಾರು ವಿಜ್ಞಾನಿಗಳು ಶ್ರುತಪಡಿಸಿದರು. ಇವರೆಲ್ಲರ ನೈತಿಕ ಧೈರ್ಯವೇ ವಿಜ್ಞಾನ ಮುನ್ನಡೆಯಲು ಕಾರಣವಾಯಿತು. ಮತಧರ್ಮ ಮತ್ತು ವಿಜ್ಞಾನಗಳ ನಡುವಿನ ಸಂಘರ್ಷದಲ್ಲಿ ಹಲವಾರು ವಿಜ್ಞಾನಿಗಳು ತಾವು ಪ್ರಮಾಣೀಕರಿಸಿದ ಸತ್ಯಕ್ಕಾಗಿ ತಮ್ಮ ಜೀವವನ್ನೇ ತೆತ್ತರು. ಇದರ ಫಲವೇ ವೈದ್ಯ ವಿಜ್ಞಾನ ಇಂದು ಬೆಳೆದು ಮಾನವ ಸುಖಕ್ಕೆ ಆಸರೆಯಾಗಿ ನಿಂತಿದೆ. ಈ ಬಗ್ಗೆ ಸಾಕಷ್ಟು ಸಂಶೋಧನೆಗಳನ್ನು ನಡೆಸಿರುವ ಡಾ॥ ದೇವಿಪ್ರಸಾದ್ ಚಟ್ಟೋಪಾಧ್ಯಾಯರು ಇಂತಹ ಹಲವು ವಿಷಯಗಳನ್ನು ನಮ್ಮ ಮುಂದಿರಿಸಿದ್ದಾರೆ.

ಮತಧರ್ಮದ, ಪುರೋಹಿತ ವರ್ಗದ ಕೃಪಾಶ್ರಯದಲ್ಲಿ ನರಳಿದ ವೈದ್ಯ ವಿಜ್ಞಾನ, ಸಮಾಜದ ನಂತರದ ಘಟ್ಟವಾದ ಸಾಮ್ರಾಜ್ಯ ವಿಸ್ತರಣೆಯ ಕಾಲದಲ್ಲಿ ಪುನಃ ಒಂದಿಷ್ಟು ಚೇತನವನ್ನು ಪಡೆಯಿತು. ದೇಶಗಳನ್ನು ಗೆಲ್ಲಲು ಸೈನ್ಯ ಕಟ್ಟುವ, ಗೆದ್ದ ದೇಶಗಳ ಪ್ರಜೆಗಳನ್ನು ಓಲೈಸುವ ಕಾರ್ಯಕ್ಕೆ ವೈದ್ಯ ವಿಜ್ಞಾನದ ನೆರವನ್ನು ಪಡೆಯಲಾಯಿತು. ಸೇನೆಗಳಲ್ಲಿ ಸೈನಿಕರ ದೇಹಾರೋಗ್ಯವನ್ನು ಕಾಪಾಡುವ ಕೆಲಸದಿಂದಾಗಿ ಪುನಃ ವೈದ್ಯ ವಿಜ್ಞಾನ ಜನಸಾಮಾನ್ಯರ ಮಧ್ಯೆ ನುಸುಳುವಂತಾಯಿತು. ಪರದೇಶಗಳ ಮೇಲಿನ ಧಾಳಿಗಾಗಿ, ಸಂಪತ್ತಿನ ಲೂಟಿಗಾಗಿ ಸೈನಿಕರ ದೇಹಾರೋಗ್ಯವನ್ನು ಕಾಪಾಡುವ ಕೆಲಸ ವೈದ್ಯರದಾಯಿತು. ಈ ಕಾಲಾವಧಿಯಲ್ಲಿ ವೈದ್ಯ ವಿಜ್ಞಾನ ಒಂದಿಷ್ಟು ಪ್ರಗತಿಯನ್ನು ಸಾಧಿಸುವಲ್ಲಿ ಸಫಲವಾಯಿತು. ಆರೋಗ್ಯ ಕೇಂದ್ರಗಳಿಗೂ ವೈದ್ಯ ಶಾಲೆಗಳಿಗೂ ಮನ್ನಣೆ ದೊರೆಯಿತು.

ವೈದ್ಯ ವಿಜ್ಞಾನದ ಹಲವು ಪದ್ಧತಿಗಳು ರೂಪುಗೊಂಡವು. ಈ ಹಲವು ವೈದ್ಯ ಪದ್ಧತಿಗಳು ತಮ್ಮ ಚಿಕಿತ್ಸಾ ಪದ್ಧತಿಯ ಶ್ರೇಷ್ಠತೆಯನ್ನು ಎತ್ತಿಹಿಡಿಯುವುದರೊಂದಿಗೆ ಇನ್ನುಳಿದ ಚಿಕಿತ್ಸಾ ಪದ್ಧತಿಯನ್ನು ತಿರಸ್ಕರಿಸುವಂತೆ ಸಂಶಯದಿಂದ ನೋಡುವಂತೆ ಮಾಡುವ ಮೂಲಕ ಜನಮನದಲ್ಲಿ ಗೊಂದಲವನ್ನು, ಅಪನಂಬಿಕೆಯನ್ನು ಉಂಟುಮಾಡಿದವು. ಹಾಗಿದ್ದರೂ, ಈ ಹಲವು ಪದ್ಧತಿಗಳ ಪ್ರಚಾರ, ಶಿಕ್ಷಣ, ತ್ವರಿತಗತಿಯಲ್ಲಿ ಮುಂದುವರಿಯಿತು. ಈ ಹಲವು ಪದ್ಧತಿಗಳಲ್ಲಿ ಪ್ರಯೋಗಗಳಿಂದ ಸ್ಫುಟಗೊಂಡ ಉತ್ತಮ ಚಿಕಿತ್ಸಾ ವಿಧಾನಗಳನ್ನು ಸಮನ್ವಯಿಸಿ ಸಮಗ್ರ ಪದ್ಧತಿಯೊಂದನ್ನು ರೂಪುಗೊಳಿಸುವ ಕಾರ್ಯ ಇನ್ನೂ ನಡೆಯದಿರುವುದು ಈ ಪದ್ಧತಿಗಳ ಮಧ್ಯೆ ಇರಬಹುದಾದ ತಾತ್ವಿಕ ಅಂತರವನ್ನು ಎತ್ತಿ ತೋರಿಸುತ್ತದೆ. ಮಾನವನ ಒಳಿತಿಗಾಗಿ ಇಂತಹ ಯೋಜನೆಯೊಂದರ ಅವಶ್ಯಕತೆ ಇದೆಯೆಂಬುದನ್ನು ವೈದ್ಯ ವಿಜ್ಞಾನಿಗಳು ಗಮನಿಸಬೇಕಲ್ಲವೆ ? ಇದನ್ನು ಆಗುಮಾಡಲು ಪ್ರಚಾರ, ಪ್ರಕಟಣೆ ಇತ್ಯಾದಿಗಳೂ ಅಗತ್ಯ ಎನ್ನುವುದನ್ನು ನಾವು ಮನಗಾಣಬೇಕಾಗಿದೆ.

ವೈದ್ಯ ಸಾಹಿತ್ಯ :

ಪ್ರಾಚೀನ ಕಾಲದ ಕೀಳು ಜನರ ವೈದ್ಯ ವೃತ್ತಿ ಕಳೆದ ಮುನ್ನೂರು ವರ್ಷ

ಗಳಲ್ಲಿ ಗೌರವ ಪ್ರತಿಷ್ಠೆಗಳನ್ನು ಸಮಾಜದಲ್ಲಿ ಪಡೆಯಿತು. ವೈದ್ಯೋಪಚಾರ, ಆಸ್ಪತ್ರೆ ಇತ್ಯಾದಿಗಳು ಮತಧರ್ಮದ ಪ್ರಚಾರಕ್ಕೆ ಇಂಬುಕೊಟ್ಟವು. ವೈದ್ಯ ಶಿಕ್ಷಣಕ್ಕೆ ಮಹತ್ವ ಬಂದಿತು. ವೈದ್ಯ ಸಾಹಿತ್ಯ ವಿಪುಲವಾಗಿ ಹೊರಬಂದಿತು. ವೈದ್ಯ ವಿಜ್ಞಾನಿಗಳ ಸಂಶೋಧನಾ ಕಾರ್ಯಕ್ಕೆ ಪೂರಕವಾಗಬಲ್ಲ ಸಾಹಿತ್ಯ, ವೈದ್ಯ ವಿದ್ಯಾರ್ಥಿಗಳಿಗಾಗಿ ಪಠ್ಯ ಪುಸ್ತಕ ಇತ್ಯಾದಿಗಳು ಪ್ರಕಟಗೊಂಡವು. ಸಾಮಾನ್ಯ ಓದುಗರಿಗಾಗಿ ಆರೋಗ್ಯ, ವೈದ್ಯಕೀಯ ಸಾಹಿತ್ಯಗಳ ಪ್ರಕಟಣೆ ತೀರ ತಡವಾಗಿ ಹೊರಬಂದಿತು. ವೈದ್ಯ ವಿಜ್ಞಾನಕ್ಕೆ ಸೇರಿದ ಹೊಸ ಹೊಸ ಸಂಶೋಧನೆಗಳ ಫಲಿತಾಂಶ ಆರೋಗ್ಯ ವೆಚ್ಚವನ್ನು ದುಬಾರಿಯಾಗಿಸಿ, ಸಾಮಾನ್ಯರಿಗೆ ಸೂಕ್ತ ಚಿಕಿತ್ಸೆ ಸಿಗುವುದು ಕಷ್ಟಸಾಧ್ಯವಾಯಿತು. ರೋಗ ಬರಿಸಿ ಕೊಳ್ಳುವ ಮುನ್ನವೇ ಅದನ್ನು ತಡೆಹಾಕುವ ಕುರಿತ ಆರೋಗ್ಯ–ವೈದ್ಯಕೀಯ ಪ್ರಕಟಣೆಗಳು ಈ ಸಂದರ್ಭದಲ್ಲಿ ಹೊರಬಂದವು. ಈ ಕಾಲಕ್ಕೆ ಪುಸ್ತಕ ಪ್ರಕಟಣೆ ಒಂದು ಉದ್ಯಮವಾಗಿ ರೂಪುಗೊಳ್ಳಲಾರಂಭಿಸಿತು.

ಪಠ್ಯ ಪುಸ್ತಕಗಳು, ಸಂಶೋಧನಾ ಸಾಹಿತ್ಯ, ಹಾಗೂ ಶ್ರೀಸಾಮಾನ್ಯರಿಗಾಗಿ ಎಂದು ವೈದ್ಯ ಸಾಹಿತ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಮೊದಲೆರಡು ವೈದ್ಯ ಕ್ಷೇತ್ರಕ್ಕೆ ಮೀಸಲಾಗಿದ್ದು, ಮೂರನೆಯದು ಸಾಮಾನ್ಯ ಓದುಗನಿಗಾಗಿ ವೈದ್ಯ ತಜ್ಞರು ಬರೆದ ಪುಸ್ತಕಗಳು.

ಕನ್ನಡದಲ್ಲಿ ವೈದ್ಯ ಸಾಹಿತ್ಯ :

ಶಿಕ್ಷಣ ಮಾಧ್ಯಮ ಇನ್ನೂ ಇಂಗ್ಲಿಷ್ ಭಾಷೆಯಲ್ಲಿಯೇ ಇರುವುದರಿಂದ, ಪಠ್ಯ ಪುಸ್ತಕಗಳು ಪ್ರೌಢ ವ್ಯಾಸಂಗ ಗ್ರಂಥಗಳು ಕನ್ನಡದಲ್ಲಿನ್ನೂ ಹೊರಬಂದಿಲ್ಲ. ಆರೋಗ್ಯ ಕಾರ್ಯಕರ್ತರಿಗಾಗಿ, ದಾದಿಯರಿಗಾಗಿ ಪ್ರಕಟಣೆಗೊಂಡ ಪೂರಕ ಪಠ್ಯ ಪುಸ್ತಕಗಳೂ ಸಹ ನಮ್ಮ ಭಾಷೆಯಲ್ಲಿ ವಿರಳವೆನ್ನಬಹುದು. ಉಳಿದಂತೆ ಜನಸಾಮಾನ್ಯರಿಗಾಗಿ ವೈದ್ಯರು, ಆರೋಗ್ಯ ತಜ್ಞರು ಬರೆದ ಪುಸ್ತಕಗಳು ಆಗಿಂದಾಗ್ಗೆ ಪ್ರಕಟವಾಗುತ್ತಲೇ ಇವೆ. ಕನ್ನಡದಲ್ಲಿ ವೈದ್ಯ ಸಾಹಿತ್ಯಕ್ಕೆ ಸ್ಥಾನ ದೊರಕಿಸಿಕೊಟ್ಟವರು ಹಲವರು. ಡಾ॥ ತಾರಾನಾಥ್, ಡಾ॥ ಕೆ. ಗೋಪಾಲ ಕೃಷ್ಣರಾವ್, ಡಾ॥ ರಾ. ಶಿ., ಡಾ॥ ದೊಡ್ಡೇರಿ ವೆಂಕಟಗಿರಿರಾವ್, ಡಾ॥ ಅನುಪಮಾ ನಿರಂಜನ, ಡಾ॥ ಸಿ. ಆರ್. ಚಂದ್ರಶೇಖರ್, ಡಾ॥ ಪಿ. ಎಸ್.

ಶಂಕರ್, ಡಾ॥ ನಾಗಲೋಟಿ ಮಠ, ಡಾ॥ ಸಿ. ಅನ್ನಪೂರ್ಣಮ್ಮ, ಡಾ॥ ಎಚ್. ಗಿರಿಜಮ್ಮ, ಡಾ॥ ಡಿ. ಎಸ್. ಶಿವಪ್ಪ, ಡಾ॥ ಎಚ್. ಡಿ. ಚಂದ್ರಪ್ಪ ಗೌಡ, ಡಾ॥ ಕೆ. ಎ. ಅಶೋಕ ಪೈ, ಡಾ॥ ಎಚ್. ಎಸ್. ಮೋಹನ್ ಇನ್ನೂ ಹಲವಾರು ನುರಿತ ವೈದ್ಯರು ಹಾಗೂ ಬರೆಹಗಾರರು. ವೈದ್ಯ ಕ್ಷೇತ್ರಕ್ಕೆ ತಮ್ಮನ್ನು ಸಮರ್ಪಿಸಿ ಕೊಂಡ ಈ ಹಿರಿಯರು, ಪ್ರೌಢ ವಯಸ್ಕರನ್ನು ಹೊರತುಪಡಿಸಿದರೆ, ಇಂದಿನ ಯುವ ಪೀಳಿಗೆಯ ಬರೆಹಗಾರರ ಸಂಖ್ಯೆ ತೀರಾ ಕಮ್ಮಿಯೆನ್ನಬಹುದು.

ಡಾ॥ ಅನುಪಮಾ ಅವರ 'ತಾಯಿ–ಮಗು' ೧೬ ಮುದ್ರಣಗಳನ್ನು ಕಂಡಿದ್ದು ಕನ್ನಡ ವೈದ್ಯ ಸಾಹಿತ್ಯದಲ್ಲೇ ಒಂದು ದಾಖಲೆಯನ್ನು ಸ್ಥಾಪಿಸಿದೆ. ಅವರ ಇತರ ಪುಸ್ತಕಗಳೂ ಸಹ ಹಲವಾರು ಮುದ್ರಣಗಳನ್ನು ಕಂಡಿವೆ. ರಾ. ಶಿ. ಅವರ 'ಮನೋನಂದನ', 'ಮನ ಮಂಥನ', ಡಾ॥ ಸಿ. ಆರ್. ಚಂದ್ರಶೇಖರ್ ಹಾಗೂ ಇನ್ನೂ ಕೆಲವರ ಪುಸ್ತಕಗಳೂ ಸಹ ಹಲವಾರು ಮುದ್ರಣಗಳನ್ನು ಕಂಡಿವೆ. ಹಾಗಿದ್ದರೂ ಯುವ ವೈದ್ಯ ಬರೆಹಗಾರರಿಗೆ ಸಾಕಷ್ಟು ಪ್ರೋತ್ಸಾಹ ಸಿಗುತ್ತಿಲ್ಲವೆ? ಅಥವಾ ಬರೆಹಗಾರರೇ ಮುಂದಕ್ಕೆ ಬರುತ್ತಿಲ್ಲವೆ ಎನ್ನುವುದು ತಿಳಿಯದ ಸಮಸ್ಯೆ ಯಾಗಿದೆ. ವೈದ್ಯ ಶಿಕ್ಷಣ ದುಬಾರಿಯಾಗುತ್ತಿದ್ದು, ಶಿಕ್ಷಣ ಪಡೆದು ಹೊರ ಬೀಳುತ್ತಿರುವ ವೈದ್ಯ ವಿದ್ಯಾರ್ಥಿ ಪಡೆಗೆ ಶಿಕ್ಷಣ ವೆಚ್ಚವನ್ನು ಬಡ್ಡಿ ಸಮೇತ ಮರಳಿ ಪಡೆಯುವ ನವಕವೂ ಈ ನಿಷ್ಕ್ರಿಯತೆಗೆ ಕಾರಣವಾಗಿರಬಹುದೇನೋ ? ಇದು ಚಿಂತಿಸಿ ಪರಿಹಾರ ಕಂಡುಕೊಳ್ಳಬೇಕಾದ ವಿಷಯ.

ನಮ್ಮ ಹಲವು ಲೇಖಕರು ಪತ್ರಿಕೆಗಳಲ್ಲಿ ಪ್ರಕಟಗೊಂಡ ಅಂಕಣ ಬರೆಹ ಗಳನ್ನೆಲ್ಲಾ ಸಂಕಲಿಸಿ ಪುಸ್ತಕ ಮಾಡಬೇಕೆನ್ನುವ ಆತುರದ ನಿರ್ಧಾರಕ್ಕೆ ಬರುತ್ತಾರೆ. ಪ್ರಕಾಶಕರು, ಲೇಖಕರ ಹೆಸರಿನ ಮೇಲೆ ಪುಸ್ತಕ ಮಾರಾಟವಾಗಬಹುದೆಂಬ ಒಂದೇ ನಿರೀಕ್ಷೆಯಿಂದ ಮಾತ್ರವೇ ಪುಸ್ತಕವನ್ನು ಹೊರತರುತ್ತಾರೆ. ಹಲವು ಸಾವಿರ–ಲಕ್ಷ ಪ್ರತಿಗಳ ಪ್ರಸಾರವಿರುವ ಪತ್ರಿಕೆಗಳು ಉಣಬಡಿಸಿದ ವಸ್ತುವನ್ನೇ ಪುನಃ ಒಂದೆರಡು ಸಾವಿರ ಪುಸ್ತಕಗಳಲ್ಲಿ ಪುನಃ ಉಣಬಡಿಸುತ್ತಾರೆ. ಇಂಥಹ ಪುಸ್ತಕಗಳ ಮಾರಾಟ ನಿಧಾನಗತಿಯದಾಗಿರುತ್ತದೆ ಅಥವಾ ಮಾರುಕಟ್ಟೆಯಲ್ಲಿ ಸೋಲನ್ನು ಅನುಭವಿಸುತ್ತದೆ. ಲೇಖಕ ಪ್ರಕಾಶಕರನ್ನು ನಿರಾಸೆಗೆ ತಳ್ಳುತ್ತದೆ. ಇದಕ್ಕೆ ಕಾರಣವೇನು ? ಪತ್ರಿಕೆಗಳ ಅಂಕಣಗಳಿಗೆ ಬರೆಯುವ ಬರೆವಣಿಗೆಗೂ

ಪುಸ್ತಕ ಬರವಣಿಗೆಗೂ ಇರುವ ಅಂತರವನ್ನು ನಮ್ಮ ಹಲವು ಲೇಖಕರು-ಪ್ರಕಾಶಕರು ಮನಗಂಡಂತೆ ಕಾಣುವುದಿಲ್ಲ. ಆದರೆ ಈ ವ್ಯೂಹ ರಚನೆಯನ್ನು ಜಾಣ ಓದುಗ ಬಲ್ಲ. ಪತ್ರಿಕೆಯ ಬರವಣಿಗೆ, ಅದರ ಪುಟಸಂಖೆ, ಗಾತ್ರ, ಕಾಲಾವಧಿ ಮತ್ತು ಸಂಪಾದಕರು ನೀಡಬಹುದಾದ ಪುಟಮಿತಿಯನ್ನು ಅವಲಂಬಿಸಿರುತ್ತದೆ. ಹೇಳಬೇಕಾದ ವಿಷಯವನ್ನು ಸಂಕ್ಷೇಪಿಸಿ, ಮುಂದಿನ ಸಂಚಿಕೆಯವರೆಗೆ-ಅಂದರೆ ವಾರಕ್ಕೊ-ತಿಂಗಳಿಗೊ-ಮಾತ್ರ ನೆನಪಿನಲ್ಲಿ ಉಳಿಯಬಹುದಾದಷ್ಟನ್ನು ನೀಡುವ ಈ ಬರವಣಿಗೆ ಪುಸ್ತಕಕ್ಕೆ ಶೋಭಿಸುವುದಿಲ್ಲ. ಪುಸ್ತಕದ ಬರವಣಿಗೆಯಲ್ಲಿ ಉದಾಹರಣೆಗಳು, ಅನುಭವಗಳು, ವಿಷಯ ಕುರಿತ ನಿರೂಪಣೆ ಇತ್ಯಾದಿ ಓದುಗನ ಮನಸ್ಸಿನಾಳಕ್ಕೆ ಇಳಿಯುವಂತಿರಬೇಕು. ಪುಸ್ತಕದ ವಸ್ತು ಜೀವನ ಕ್ರಮಕ್ಕೆ ಪೂರಕವಾಗಬೇಕಾದರೆ ಅಂಕಣ ಬರೆಹವನ್ನು ತಿದ್ದಿ, ಪರಿಷ್ಕರಿಸಿದರೆ ಮಾತ್ರವೇ ಅದೊಂದು ಉತ್ತಮ ಪುಸ್ತಕವಾಗಬಲ್ಲದೆಂಬುದನ್ನು ಲೇಖಕರು ಪ್ರಕಾಶಕರು ಗಮನಿಸಬೇಕು.

ಪ್ರಕಾಶಕರ ಸಮಸ್ಯೆಗಳು :

ನವಕರ್ನಾಟಕ ಪ್ರಕಾಶನ ಇದುವರೆಗೆ ವೈದ್ಯಕೀಯ-ಆರೋಗ್ಯ ಕುರಿತ ಹಲವಾರು ಪುಸ್ತಕಗಳನ್ನು ಪ್ರಕಟಿಸಿದೆ. ಮಾಸ್ಕೋದ ಮಿರ್ ಪ್ರಕಾಶನದ ಸಹಯೋಗದೊಂದಿಗೆ ನಾಲ್ಕು ಪುಸ್ತಕಗಳನ್ನು ಹೊರತಂದಿದೆ. ವಿಶ್ವ ಆರೋಗ್ಯ ಸಂಸ್ಥೆಯ ಎರಡು ಪ್ರಕಟಣೆಗಳನ್ನು ಕನ್ನಡದಲ್ಲಿ ಪ್ರಕಟಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ. ಮೂಢನಂಬಿಕೆಗಳನ್ನು ದೂರ ಮಾಡುವ, ಜನತೆಯಲ್ಲಿ ಅರಿವು ಮೂಡಿಸುವ, ಆರೋಗ್ಯ ಪ್ರಜ್ಞೆಯನ್ನು ಬೆಳೆಸುವ ಸಾಹಿತ್ಯವನ್ನು ಹೊರತರುವ ಉದ್ದೇಶ ನಮ್ಮದು. ಇತರ ಪ್ರಕಾಶಕರು ಹೊರತಂದ ಇಂಥ ಸಾಹಿತ್ಯವನ್ನು ಮಾರುಕಟ್ಟೆಗೆ ಒದಗಿಸುವ ಕಾರ್ಯಕ್ಕೂ ನಾವು ಸಿದ್ಧರೇ.

ತಲೆನೋವು, ಹೊಟ್ಟೆ ನೋವು, ವಾಂತಿ-ಭೇದಿ, ಸಿಹಿಮೂತ್ರ, ಪಥ್ಯಾಹಾರ, ಇಂಥ ಹಲವಾರು ವಿಷಯಗಳ ಕುರಿತು ಹಲವಾರು ಕೃತಿಗಳು ಹೊರಬಂದಿವೆ. ಬರುತ್ತಲೇ ಇವೆ. ಒಂದೇ ವಿಷಯ ಕುರಿತ ಪುಸ್ತಕಗಳನ್ನು ಹಲವು ಪ್ರಕಾಶಕರು ಬರೆಸಿ ಪ್ರಕಟಿಸಿದ್ದಾರೆ. ಒಬ್ಬರೇ ಲೇಖಕರು ಒಂದೇ

ವಿಷಯದ ಬಗ್ಗೆ ಬೇರೆ ಬೇರೆ ಪ್ರಕಾಶಕರಿಗೆ ಬೇರೆ ಬೇರೆ ಶೀರ್ಷಿಕೆಗಳಡಿಯಲ್ಲಿ ಬರೆದುಕೊಟ್ಟ ನಿದರ್ಶನಗಳೂ ಇವೆ. ಇದರಿಂದಾಗಿ ಮಾರುಕಟ್ಟೆ ಸಂಕುಚಿತ ಗೊಳ್ಳುತ್ತದೆ. ಮಾರುಕಟ್ಟೆಯ ಸಮೀಕ್ಷೆ ನಡೆಸಿ ಪುಸ್ತಕಗಳನ್ನು ಬರೆಸುವುದು, ಮಾರುಕಟ್ಟೆಗೆ ಒದಗಿಸುವುದು ಪ್ರಕಾಶಕರ ಕೆಲಸವಾಗಬೇಕು. ಇಲ್ಲಿ ಒಂದು ವಿಷಯದ ಬಗ್ಗೆ ಪ್ರಸ್ತಾಪ ಅವಶ್ಯವೆನಿಸಿದೆ. ನಾಲ್ಕು ವರ್ಷಗಳ ಹಿಂದೆ ಲೇಖಕರೊಬ್ಬರು ದೂರವಾಣಿಯ ಮೂಲಕ ತಾನು ಬರೆದ ಕೃತಿಯೊಂದರ ಕುರಿತು ಪ್ರಸ್ತಾಪಿಸಿದರು. ಪ್ರಕಟಣೆಯ ಬಗ್ಗೆ ಆಸಕ್ತಿ ಇದೆಯೆ ? ಇಲ್ಲವೆ ? ಎನ್ನುವ ಚುಟುಕು ಉತ್ತರ ಮಾತ್ರವೇ ಸಾಕೆಂದರು. ಅವರ ಮಾತಿನಲ್ಲಿ ನಿರಾಸೆಯ ಛಾಯೆಯಿತ್ತು. ಅವರನ್ನು ಭೇಟಿ ಮಾಡುವ, ಹಸ್ತಪ್ರತಿಯನ್ನು ನೋಡುವ ಆಸಕ್ತಿಯನ್ನು ವ್ಯಕ್ತಪಡಿಸಿದೆ. ಹಸ್ತಪ್ರತಿ ಮೂರು ವರ್ಷಗಳಷ್ಟು ಹಿಂದೆಯೇ ಸಿದ್ಧವಾಗಿದ್ದರೂ ಅದನ್ನು ಬಿಡಿಸಿ ನೋಡುವ ಗೋಜಿಗೆ ಯಾವ ಪ್ರಕಾಶಕರೂ ಹೋಗಿಲ್ಲವೆಂದವರು ತಿಳಿಸಿದರು. ಕಾರಣ ಅವರಿಂದ ಅವರೆಗೆ ಯಾವೊಂದು ಲೇಖನ ಕೂಡ ಪ್ರಕಟವಾಗಿರಲಿಲ್ಲ. ಅವರ ಚೊಚ್ಚಲ ಕೃತಿಯ ಗಾತ್ರ ಸುಮಾರು ೩೫೦ ಪುಟಗಳು, ಹೆಸರಾಂತವರಲ್ಲ ಲೇಖಕರು. ಹಣ ಹೂಡಲು ಯಾವ ಪ್ರಕಾಶಕರೂ ಮುಂದೆ ಬರಲಿಲ್ಲ. ಅವರಂದಂತೆ, ನಾವು 'ಇಲ್ಲ'ವೆಂದಿದ್ದರೆ ಆ ಹಸ್ತಪ್ರತಿ ನೀರೊಲೆಯ ಪಾಲಾಗುತ್ತಿತ್ತು. ವಿಷಯ ತಿಳಿದ ನಮ್ಮ ಸಂಪಾದಕ ಮಂಡಳಿ ಸದಸ್ಯರು ಹಸ್ತಪ್ರತಿಯ ಪರಿಶೀಲನೆ ನಡೆಸಿದರು. ಮಾರುಕಟ್ಟೆಯಲ್ಲಿ ಆ ವಿಷಯದ ಕುರಿತು ಪುಸ್ತಕಗಳೇ ಇಲ್ಲ. ಬರೆವಣಿಗೆ, ನಿರೂಪಣೆಯನ್ನು ಗಮನಿಸಿದರೆ ನುರಿತ ಬರೆಹದಂತಿದೆ. ಮನೋ ವಿಶ್ಲೇಷಣ ಶಾಸ್ತ್ರಕ್ಕೆ ಇತ್ತೀಚೆಗೆ ಸೇರ್ಪಡೆಗೊಂಡ ಚಿಕಿತ್ಸಾ ಸಿದ್ಧಾಂತಗಳಾದ ಟ್ರಾನ್ಸಾಕ್ಷನಲ್ ಅನಾಲಿಸಿಸ್ ಮತ್ತು ಗೆಸ್ಟಾಲ್ಟ್ ಥೆರಪಿ ಕುರಿತಾದ 'ಮನಸ್ಸು ಇಲ್ಲದ ಮಾರ್ಗ' ನಮ್ಮ ಇತರ ಮನೋ ವೈದ್ಯಕೀಯ ಸಾಹಿತ್ಯಕ್ಕೆ ಇನ್ನೊಂದು ಒಳ್ಳೆಯ ಸೇರ್ಪಡೆಯಾಗುತ್ತದೆಂಬ ಆಶಯದಲ್ಲಿ ಪ್ರಕಟಣೆಯನ್ನು ಕೈಗೆತ್ತಿ ಕೊಂಡೆವು. ಪುಸ್ತಕ ಪ್ರಕಟವಾಯಿತು. ಮೆಚ್ಚುಗೆ ಪಡೆಯಿತು. ಎರಡನೇ ಮುದ್ರಣವೂ ಈಗ ಹೊರಬಂದಿದೆ. ಇಲ್ಲಿ ಮಾರುಕಟ್ಟೆಯ ಸಮೀಕ್ಷೆ, ಹಸ್ತಪ್ರತಿಯ ಆಯ್ಕೆಯಿಂದಾಗಿ ಒಂದು ಒಳ್ಳೆಯ ಕೃತಿ ಹೊರಬರುವಂತಾಯಿತು. ಹೊಸ ಲೇಖಕ ಡಾ|| ಎಮ್. ಸುಬ್ರಹ್ಮಣ್ಯಂ ಅವರ ಪರಿಚಯವೂ ಓದುಗರಿಗೆ ಆಯಿತು.

ದಾದಿಯರ ತರಬೇತಿ ಶಾಲೆಯಲ್ಲಿ ಶಿಕ್ಷಣ ಮಾಧ್ಯಮ ಇಂಗ್ಲಿಷ್ ಆಗಿದ್ದರೂ, ಪ್ರೌಢಶಾಲೆಯಿಂದ ಹೊರಬಿದ್ದು ತರಬೇತಿ ಪಡೆಯುವವರಿಗೆ ಇಂಗ್ಲಿಷ್‌ಗಿಂತಲೂ ಕನ್ನಡದ ಮೂಲಕ ತಿಳಿಹೇಳುವುದು ಸುಲಭವೆಂದು ನಾವು ಮನಗಂಡಿದ್ದರಿಂದ ಹೊರಬಂದ ಪುಸ್ತಕ ಮಾನವ ಶರೀರ ರಚನಾಶಾಸ್ತ್ರ ಮತ್ತು ಶರೀರ ಕ್ರಿಯಾಶಾಸ್ತ್ರ. ೧೬೫ ಚಿತ್ರಗಳಿಂದ ವಿಸ್ತೃತವಾಗಿ ದಾದಿಯರಿಗಾಗಿಯೇ ಅನುವಾದಿಸಲ್ಪಟ್ಟ ಈ ಪುಸ್ತಕ ಕನ್ನಡದಲ್ಲಿ ಮೊದಲನೆಯದಾಗಿದ್ದು ಜನಪ್ರಿಯವಾಗಿದೆ. ಅದೇ ರೀತಿ ಏಡ್ಸ್ ರೋಗದ ಭೀತಿ ಆವರಿಸಿದ್ದಾಗ ಹೊರಬಿದ್ದ ಡಾ|| ಪಿ. ಎಸ್. ಶಂಕರ್ ಅವರ ಪುಸ್ತಕ ಮತ್ತೊಂದು ಮರುಮುದ್ರಣವನ್ನು ಕಂಡಿತಲ್ಲದೆ, ತೆಲುಗಿನಲ್ಲೂ ಪ್ರಕಟಗೊಂಡಿತು. ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಡಾ|| ಸಿ. ಆರ್. ಚಂದ್ರಶೇಖರ್ ಅವರ ಪುಸ್ತಕಗಳು ಹಲವಾರು ಪುನರ್ಮುದ್ರಣಗಳನ್ನು ಕಂಡಿತಲ್ಲದೆ ತೆಲುಗಿನಲ್ಲೂ ಇಂಗ್ಲಿಷ್‌ನಲ್ಲೂ ಮುದ್ರಣಗೊಂಡು ಜನಪ್ರಿಯವಾಗಿವೆ. ಇದೇ ಲೇಖಕರ 'ಭಾನಾಮತಿ', 'ದೇವರು ದೆವ್ವ ಮೈಮೇಲೆ ಬರುವುದೆ ?' ಎಂಬ ಕಿರು ಹೊತ್ತಿಗೆಗಳ ಪ್ರಕಾಶಕರು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು. ಇವರ ಪುಸ್ತಕಗಳ ಅಧಿಕೃತ ವಿತರಕರಾದ ನವಕರ್ನಾಟಕ ಪ್ರಕಾಶನ ಈ ಪುಸ್ತಕಗಳನ್ನು ವರ್ಷಕ್ಕೆ ಸರಾಸರಿ ಎರಡು ಸಾವಿರ ಪ್ರತಿಗಳಂತೆ ರಾಜ್ಯಾದ್ಯಂತ ೫–೬ ವರ್ಷಗಳ ಕಾಲ ವಿತರಿದೆ. ಈಗ 'ದೇವರು ದೆವ್ವ ಮೈಮೇಲೆ ಬರುವುದೆ ?' ಮುದ್ರಣದಲ್ಲಿಲ್ಲ. ಪ್ರಕಾಶಕರಲ್ಲಿ ಮರುಮುದ್ರಣಕ್ಕೆ ಕೋರಿದಾಗ ೫ ಮರು ಮುದ್ರಣದ ನಂತರವೂ ಪುನಃ ಇದನ್ನು ಹೊರತರಬೇಕೆ ? ಹೊಸ ಪುಸ್ತಕಗಳು ಸಾಕಷ್ಟಿಲ್ಲವೆ ? ಎಂಬ ಉತ್ತರ ಬಂತು. ದೇವರು ದೆವ್ವ ಮೈಮೇಲೆ ಬರುವ ಕಾಲದವರೆಗೂ ಅದರ ಅವಶ್ಯಕತೆ ಇದೆ ಎನ್ನುವುದನ್ನು ಅವರಿಗೆ ಮನದಟ್ಟು ಮಾಡಿದ ನಂತರ ಅದರ ಇನ್ನೊಂದು ಮುದ್ರಣ ಹೊರಬರುವ ಸೂಚನೆಯಿದೆ. ಹೀಗೆ ಒಳ್ಳೆಯ ಓದಿಗೆ, ವೈಜ್ಞಾನಿಕ ಮನೋಧರ್ಮಕ್ಕೆ ಬದ್ಧವಾಗಿರುವ ನವಕರ್ನಾಟಕ ಪ್ರಕಾಶನ, ತಮ್ಮ ಪ್ರಕಟಣೆಗಳಲ್ಲದೆ, ಇತರರ ಪುಸ್ತಕಗಳನ್ನೂ ತನ್ನ ೫ ಮಳಿಗೆಗಳ ಮೂಲಕ, ರಾಜ್ಯಾದ್ಯಂತ ಪುಸ್ತಕ ಪ್ರದರ್ಶನಗಳನ್ನು ನಡೆಸುವುದರ ಮೂಲಕ ವಿತರಿಸುತ್ತಾ ಬಂದಿದೆ. ಕಳೆದ ೨೦ ವರ್ಷಗಳಿಂದ ಪುಸ್ತಕ ಪ್ರದರ್ಶನ ನಡೆಸಿದ ಅನುಭವ, ನಮ್ಮ ಓದುಗರಿಗೆ ಏನು ಬೇಕು ಎನ್ನುವ ಪಾಠವನ್ನು ಓದುಗರಿಂದಲೇ ನಮಗೆ ಕಲಿಸಿದೆ.

ಜನಪ್ರಿಯಗೊಳ್ಳುತ್ತಿರುವ ವೈದ್ಯಕೀಯ ಸಾಹಿತ್ಯದ ಪ್ರಚಾರ ಹಾಗೂ ಪ್ರಕಟಣೆಯನ್ನು ಸರಕಾರದ ಸಂಬಂಧಿತ ಆರೋಗ್ಯ ಇಲಾಖೆಗಳು ವಿಶ್ವವಿದ್ಯಾಲಯಗಳು ಹಾಗೂ ವಿಜ್ಞಾನ ಸಂಘ ಸಂಸ್ಥೆಗಳು ಸಹ ಹೊರತಂದಿವೆ. ಖಾಸಗಿ ಪ್ರಕಾಶಕರ ಪ್ರೋತ್ಸಾಹ ದೊರಕದಿದ್ದಾಗ ತಜ್ಞ ವೈದ್ಯರು ತಾವೇ ಬರೆದು ಪ್ರಕಟಿಸಿದ ಪುಸ್ತಕಗಳೂ ಇಲ್ಲಿ ಸೇರಿವೆ. ಆರೋಗ್ಯಕ್ಕಾಗಿ ಇರುವ ಪತ್ರಿಕೆಗಳೂ ವಿರಳವೇ. ಇರುವ ಪತ್ರಿಕೆಗಳಲ್ಲಿ ಆರೋಗ್ಯವಾಣಿ ಭಾರತದ ಹಲವು ಭಾಷೆಗಳಲ್ಲಿ ಪ್ರಕಟಗೊಂಡು ಜನಪ್ರಿಯವಾಗುತ್ತಿದೆ. ಓದು ಬಲ್ಲ ಪ್ರತಿಯೊಬ್ಬರು ತಿಳಿದುಕೊಳ್ಳಬೇಕಾದ ವೈದ್ಯ ಸಾಹಿತ್ಯ ಸಾಕಷ್ಟು ಬರುತ್ತಿದೆಯೆ ? ಎಂದರೆ ಇಲ್ಲವೆಂದೇ ಹೇಳಬೇಕು. ಇದಕ್ಕೆ ಕಾರಣಗಳೇನು ? ಕಾರಣಗಳಿಗೆ ಉತ್ತರ ಇದೆಯೆ ? ಪರಿಶೀಲಿಸೋಣ.

ನಮ್ಮ ಹೆಚ್ಚಿನ ಖಾಸಗಿ ಪ್ರಕಾಶಕರು ಕಥಾ ಸಾಹಿತ್ಯ ಪ್ರಕಟಣೆಗಿಂತ ಆಚೆ ತಮ್ಮ ದೃಷ್ಟಿ ಹರಿಸಿಲ್ಲ. ಯಾವುದೇ ವಿಜ್ಞಾನ–ತಂತ್ರಜ್ಞಾನ ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳು ಕೈಗೆ ಬಂದಾಗ ಅವುಗಳನ್ನು ಪರಿಶೀಲಿಸುವ, ಪರಿಷ್ಕರಿಸುವ, ಆ ಕುರಿತು ಚರ್ಚಿಸಿ ಹಸ್ತಪ್ರತಿಯನ್ನು ಸಿದ್ಧಗೊಳಿಸಲು ಕೆಲಸ ಮಾಡುವ ಪರಿಣತ ಸಂಪಾದಕ ಮಂಡಳಿ ಇಲ್ಲದಿರುವುದು ಒಂದು ಕಾರಣವಾದರೆ, ಹೆಚ್ಚಿನ ಪ್ರಕಾಶಕರು ಮಾರಾಟಗಾರರಾಗಿರದೆ ಗ್ರಾಹಕರನ್ನು ತಲುಪಲು ಸಾಧ್ಯವಾಗದಿರುವುದು ಇನ್ನೊಂದು ಕಾರಣ. ಓದಿಗೆ ಪ್ರಚೋದನೆ ನೀಡಬೇಕಾದ ವೈದ್ಯ ಕ್ಷೇತ್ರದ ಪರಿಣತರ ಮೌನ ಕೂಡ ವೈದ್ಯ ಸಾಹಿತ್ಯ ಪ್ರಕಟಣೆಗೆ ಅಡ್ಡಿಯಾಗಿದೆ.

ವೈದ್ಯರು ರೋಗಿಯನ್ನು ಪರೀಕ್ಷಿಸುವ ಸಮಯದಲ್ಲಿ ರೋಗ ಕುರಿತಾದ ಪುಸ್ತಕಗಳಿದ್ದರೆ, ಆ ಬಗ್ಗೆ ಮಾಹಿತಿ ನೀಡುವುದು, ಓದಲು ಪ್ರಚೋದಿಸುವುದು, ವೈದ್ಯರ ಕರ್ತವ್ಯವಾಗಬೇಕು. ವಿಶೇಷ ತಜ್ಞ ವೈದ್ಯರು ಪುಸ್ತಕಗಳನ್ನು ಮಾರಾಟ ಮಾಡಿದರೆ ರೋಗದ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ರೋಗಿಗೆ ಮೂಡುತ್ತದೆ. ವೈದ್ಯೋಪಚಾರದ ಸಮಯದಲ್ಲಿ ತಿಳುವಳಿಕೆಯುಳ್ಳ ರೋಗಿ ವೈದ್ಯರ ಕೆಲಸವನ್ನು ಹಗುರ ಮಾಡಬಲ್ಲ. ವೈದ್ಯ ಸೇವೆಯೂ ಹೆಚ್ಚು ಪರಿಣಾಮಕಾರಿಯಾಗಬಲ್ಲದು. ಆರೋಗ್ಯವಂತ ಪ್ರಜೆಗಳು ದೇಶದ ಉತ್ಪಾದನೆ

ಯನ್ನು ಹೆಚ್ಚಿಸಬಲ್ಲರು. ಆದ್ದರಿಂದ ಆರೋಗ್ಯ–ವೈದ್ಯಕೀಯ ಪುಸ್ತಕಗಳನ್ನು ನಮ್ಮ ಎಲ್ಲಾ ಸಾರ್ವಜನಿಕ ಗ್ರಂಥಾಲಯಗಳು ಕಡ್ಡಾಯವಾಗಿ ಕೊಳ್ಳುವಂತೆ ಸರಕಾರ ಆದೇಶ ನೀಡಬೇಕು. ಆರೋಗ್ಯಶಾಸ್ತ್ರ ನಮ್ಮ ಶಾಲೆಯ ಪಠ್ಯ ಪುಸ್ತಕಗಳಲ್ಲಿ ಒಂದು ಭಾಗವಾಗಬೇಕು. ಅಕಾಡೆಮಿಗಳಲ್ಲಿ, ಪರಿಷತ್ತುಗಳಲ್ಲಿ ಕಥಾ ಸಾಹಿತ್ಯಕ್ಕೆ ದೊರೆಯುವ ಮೊದಲ ಸ್ಥಾನಮಾನ ಗೌರವ ಪುರಸ್ಕಾರಗಳು ವಿಜ್ಞಾನ ಸಾಹಿತ್ಯಕ್ಕೂ ದೊರೆಯುವಂತಾದರೆ ವಿಜ್ಞಾನ ಸಾಹಿತ್ಯ ಬರೆಹಗಾರರಿಗೂ ಪ್ರೋತ್ಸಾಹ ಸಿಕ್ಕಿದಂತಾಗುತ್ತದೆ. ಪತ್ರಿಕೆಗಳು–ನಿಯತಕಾಲಿಕೆಗಳು ತಮ್ಮ ಆರೋಗ್ಯ ಭಾಗ್ಯ ಕುರಿತಾದ ಅಂಕಣಗಳಲ್ಲಿ ಚಿಕಿತ್ಸೆ–ರೋಗ ಇತ್ಯಾದಿಗಳ ಬಗ್ಗೆ ಬರೆಯುವಾಗ ಪ್ರಕಟಗೊಂಡ ಸಾಹಿತ್ಯದ ಬಗೆಗೂ ಪರಿಚಯ ನೀಡಿದರೆ ಓದುಗನಿಗೆ ಮುಂದಿನ ಓದನ್ನು ಒದಗಿಸಿದಂತಾಗುತ್ತದೆ. ವೈದ್ಯ ವಿಜ್ಞಾನಕ್ಕೆ ಸಂಬಂಧಿಸಿದ ಯಾವುದೇ ವೃತ್ತಿನಿರತ ವಿಚಾರ ಸಂಕಿರಣಗಳು, ಸಮ್ಮೇಳನಗಳಲ್ಲಿ ಆಯಾ ವಿಶೇಷ ವೈದ್ಯ ಜ್ಞಾನಕ್ಕೆ ಸಂಬಂಧಿಸಿದ 'ಜನಪ್ರಿಯ ವೈದ್ಯ ಸಾಹಿತ್ಯ'ದ ಪ್ರದರ್ಶನ ಮತ್ತು ಚರ್ಚೆಯಾಗಬೇಕು. ವೈದ್ಯಕೀಯ ಪ್ರೌಢ ಪ್ರಬಂಧಕ್ಕೆ ಎಷ್ಟು ಆದ್ಯತೆ ಇರುತ್ತವೆಯೋ ಅಷ್ಟೇ ಆದ್ಯತೆ–ಜನಪ್ರಿಯ ಲೇಖನಕ್ಕೂ ಇರಬೇಕು. ಇಂಥ ಹಲವಾರು ಸಲಹೆಗಳನ್ನು ಓದುಗರಿಂದಲೇ ಪಡೆಯಲು ಪ್ರಯತ್ನಿಸೋಣ.

ವೈದ್ಯಕೀಯ ಸಾಹಿತ್ಯ ಮತ್ತು ಮಹಿಳೆ

—ಡಾ|| ಎಚ್. ಗಿರಿಜಮ್ಮ

ಕನ್ನಡದಲ್ಲಿ ವೈದ್ಯ ವಿಜ್ಞಾನಕ್ಕೆ ಸಂಬಂಧಿಸಿದಂತೆ, ಗ್ರಂಥಗಳೂ, ಲೇಖನಗಳು ಕಡಿಮೆ ಎಂಬ ಕೊರಗು, ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ. ಪ್ರತಿಯೊಂದು ವಾರಪತ್ರಿಕೆಗಳಲ್ಲಿ, ದಿನಪತ್ರಿಕೆಗಳಲ್ಲಿ, ವಿಶೇಷವಾಗಿ 'ಆರೋಗ್ಯ'ಕ್ಕೆಂದೇ ಮೀಸಲಾದ ಪತ್ರಿಕೆಗಳಲ್ಲಿ ಆರೋಗ್ಯದ, ಅದರ ಸಮಸ್ಯೆ ಪರಿಹಾರ ಕುರಿತಾದ ಲೇಖನಗಳು ಇದ್ದೇ ಇರುವುದನ್ನು ಕಾಣಬಹುದು. ಆರೋಗ್ಯ ಮತ್ತು ಅದರ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡುತ್ತಿರುವುದರ ಸಂಕೇತ.

ವೈದ್ಯಕೀಯ ಸಾಹಿತ್ಯವನ್ನು ವೈದ್ಯರೇ ಬರೆಯಬೇಕೆಂದಿಲ್ಲ. ವೈದ್ಯರಲ್ಲದವರೂ, ವೈದ್ಯಕೀಯದ ಬಗ್ಗೆ ಬರೆದು ಆರೋಗ್ಯದ ಅರಿವು ಮೂಡಿಸುತ್ತಿರುವುದಕ್ಕೆ ವಿವಿಧ ಲೇಖಕರೂ ಬರೆದು ಜನಪ್ರಿಯ ವಾಗುತ್ತಿರುವುದರಿಂದ ತಿಳಿಯುತ್ತದೆ. ವೈದ್ಯಕೀಯ ವಿಜ್ಞಾನ ಸಾಹಿತ್ಯ ಇಂದು ವಿಪುಲವಾಗಿದೆ. ಹಾಗೆಯೇ ವೈದ್ಯಕೀಯ ಲೇಖನಗಳನ್ನು ಬರೆಯುವವರು, ವೈದ್ಯರೇ ಬರೆದುದನ್ನು ವೈದ್ಯರಲ್ಲದವರು ಬರೆದುದನ್ನು ಓದುಗರು ಹೋಲಿಸಿ ನೋಡಿದಾಗ ಅವರ ಅಭಿಪ್ರಾಯ, ನಂಬಿಕೆಗಳು ಅತ್ಯಂತ ಭಿನ್ನವಾಗಿರುವುದು ಕಂಡು ಬರುತ್ತದೆ. 'ಕಾಲ್ಪನಿಕ ಕಥೆ' ಮತ್ತು 'ಸತ್ಯಕಥೆ'ಯನ್ನೋದಿದ ಓದುಗನ ಅಭಿಪ್ರಾಯ ಮತ್ತು ಮನೋಭಾವದಂತೆಯೇ ಇರುತ್ತದೆ ಎಂಬುದನ್ನು, ವೈದ್ಯರೇ ಬರೆದ ವೈದ್ಯಕೀಯ ಲೇಖನಗಳನ್ನು ಓದುವ ಓದುಗರ ಅಭಿಪ್ರಾಯ ತಿಳಿದಾಗ ಕಂಡು

ಬಂದ ಅಂಶ. ಹೀಗಿದ್ದಾಗ ಆ ವೈದ್ಯ ಲೇಖಕನ ಜವಾಬ್ದಾರಿಯು ಹೆಚ್ಚಾಗಿಯೇ ಇರುತ್ತದೆ. ಅಂತಹ ವೈದ್ಯ ಲೇಖಕ ಅಥವಾ ಲೇಖಕಿ, ಜನಪ್ರಿಯ ಸಾಹಿತಿಯಾಗಿದ್ದರಂತೂ, ಇಮ್ಮಡಿಯಾದ ಜವಾಬ್ದಾರಿ ಬೇಕಾಗುತ್ತದೆ. ತಮ್ಮ ಮೆಚ್ಚಿನ ಸಾಹಿತಿ, ಮೇಲಾಗಿ ವೈದ್ಯರೆಂದರೆ, ಅವರು ಏನೇ ಬರೆದರೂ ಓದುಗರಿಗೆ ಪ್ರಿಯವಾಗುವುದರ ಜೊತೆಗೆ, ಸತ್ಯವನ್ನೇ ಬರೆಯುತ್ತಾರೆಂಬ ಬಲವಾದ ನಂಬಿಕೆಯೂ ವಿಶ್ವಾಸವೂ ಇರುವುದೇ ಕಾರಣ. ಇಂತಹ ಸಂದರ್ಭಗಳಲ್ಲಿ, ವೈದ್ಯ ಸಾಹಿತಿಗಳ ಹೊಣೆಗಾರಿಕೆ ಅತ್ಯಂತ ಗುರುತರವಾದದ್ದು.

೧೯೬೦ರಲ್ಲಿ, ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಮೂಲಕ ವೈದ್ಯ ಸಾಹಿತ್ಯಕ್ಕೆ ನಾಂದಿ ಹಾಡಿದ ಕೀರ್ತಿ, ದಿವಂಗತ, ಶ್ರೀಮತಿ ಡಾ॥ ಅನುಪಮಾ ನಿರಂಜನ ಅವರದ್ದು. ನಂತರ ಬರೆದವರು, ಬರೆಯುತ್ತಿರುವವರ ಸಂಖ್ಯೆ ಕ್ರಮೇಣದಲ್ಲಿ ಹೆಚ್ಚಾಗುತ್ತಿರುವುದನ್ನು ಗಮನಿಸಬಹುದು.

ವೈದ್ಯ ಸಾಹಿತ್ಯ ರಚನೆಯಲ್ಲಿ ಈಗಿರುವ ಪ್ರಮುಖರಲ್ಲಿ, ಡಾ॥ ಪಿ. ಎಸ್. ಶಂಕರ್, ಡಾ॥ ನಾಗಲೋಟಿಮಠ್, ಡಾ॥ ಅಶೋಕ್ ಪೈ, ಡಾ॥ ಸಿ. ಆರ್. ಚಂದ್ರಶೇಖರ್, ಡಾ॥ ಸಿ. ಅನ್ನಪೂರ್ಣಮ್ಮ, ಡಾ॥ ಶ್ಯಮಂತಕ ಮಣಿ ನರೇಂದ್ರನ್ ಮುಂತಾದವರು, ಡಾ॥ ದೇಶಿಕಾಚಾರ್ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿರುವ ಹೆಸರುಗಳು. ಡಾ॥ ಅನುಪಮಾನಿರಂಜನ ಅವರ ಇತರೇ ಕೃತಿಗಳಿಗಿಂತ, ಹೆಚ್ಚು ಜನಪ್ರಿಯವಾದದ್ದು ಅವರ ವೈದ್ಯಕೀಯ ಸಾಹಿತ್ಯ ೧೯೭೨ ರಿಂದ ಮರು ಪ್ರಕಟಣೆಗಳು ನಡೆಯುತ್ತಲೇ ಇರುವುದು ಓದುಗರ ಆಸಕ್ತಿ, ಅಭಿರುಚಿಯನ್ನು ವ್ಯಕ್ತಪಡಿಸುತ್ತದೆ.

ಸಮಾಜದ, ಯಾವ ಸಮಸ್ಯೆಗಳೇ ಇರಲಿ, ಮೊದಲು ಅದರ ಬಿಸಿ ತಟ್ಟುವುದು, ಮಧ್ಯಮ ವರ್ಗದ ಕುಟುಂಬದವರಿಗೇನೇ. ಕಾರಣ ಎಲ್ಲರಿಗೂ ಗೊತ್ತಿದ್ದದ್ದೇ ಆದರೂ, ಸಮಸ್ಯೆಗೆ ಯಾವುದೇ ರೀತಿಯ ಪರಿಹಾರ ಮಾತ್ರ ಸಿಗುತ್ತಿಲ್ಲವೆಂಬುದಕ್ಕೆ ಕಾರಣವೂ ಕೂಡ ವಿಚಿತ್ರವೇ ! ತ್ರಿಶಂಕುವಿನ ಸ್ಥಿತಿಯಂತೆ, ಅತ್ತವಾಲದೇ, ಇತ್ತ ಇರಲಾರದೆ, ಬದುಕುವ ಜನ ಮಧ್ಯಮ ವರ್ಗದವರು ಇಂತಹುದೇ ಕಾರಣವಿದ್ದಿದ್ದರೆ, ಇಂತಹದ್ದೇ ನಿರ್ಧಾರ ತಳೆಯುವುದು ಸುಲಭ.

ಆದರೆ, ಖಚಿತ ನಿರ್ಧಾರಕ್ಕೆ ಬಾರದೆ, ಬಾರದಿರಲು ಆಗದೇ, ತೊಳಲಾಡುವ ಪರಿಸ್ಥಿತಿಯಿಂದಲೂ ಇರಬಹುದು. ಇಂತಹ ಅನೇಕ ಸಮಸ್ಯೆಗಳಲ್ಲಿ ಆರೋಗ್ಯ ಸಮಸ್ಯೆಯೂ, ಒಂದು ದೊಡ್ಡ ಸಮಸ್ಯೆಯೂ ಹೌದು.

ಎಲ್ಲಾ ವರ್ಗದ ಜನರಿಗೂ, ಎಲ್ಲಾ ವಿಧದವರಿಗೂ ಬರುವಂತೆ ರೋಗ ರುಜಿನಗಳು ಬಂದರೂ, ಮಧ್ಯಮ ವರ್ಗದ (ಕೆಲವರಲ್ಲಿ) ಕೆಲವರು ತೆಗೆದು ಕೊಳ್ಳುವ ರೀತಿಯೇ ಬೇರೆ ವಿಧವಾದದ್ದೆಂದು ಕಂಡು ಬಂದ ಅಂಶಗಳಲ್ಲಿ ಒಂದು. ಇಡೀ ಕುಟುಂಬದ ಹೊಣೆ, ಹೆಚ್ಚಾಗಿ ಮಹಿಳೆಯ ಮೇಲಿರುವುದ ರಿಂದ ಆಕೆಗೆ; ಸಮಸ್ಯೆಗಳ ಜೊತೆಗೆ ಮಾನಸಿಕ ಒತ್ತಡವೂ ಸೇರಬಹುದು. ದೊಡ್ಡ ದೊಡ್ಡ ಖಾಸಗಿ ನರ್ಸಿಂಗ್ ಹೋಮ್‌ಗಳಿಗೆ ಹೋಗಿ ಚಿಕಿತ್ಸೆ ಪಡೆದು ಕೊಳ್ಳಲು ಆರ್ಥಿಕ ಸಮಸ್ಯೆ ಅಡ್ಡಬಂದರೆ, ಸರ್ಕಾರಿ ಆಸ್ಪತ್ರೆಗಳಿಗೆ ಹೋಗಿ, ಸಾಲುಕಟ್ಟಿ ನಿಂತು ಚಿಕಿತ್ಸೆ ಪಡೆಯಲು ಒಂದು ವಿಧದ ಹಿಂಜರಿಕೆ, ಒಮ್ಮೊಮ್ಮೆ ಕೆಲವರಿಗೆ, ಹೀನಾಯವೆನ್ನಿಸಿದರೂ ಆಶ್ಚರ್ಯ ಪಡಬೇಕಾದುದಿಲ್ಲ. ಕೊನೆಗೇ, ಖಾಸಗಿ ನರ್ಸಿಂಗ್ ಹೋಮ್‌ಗೂ ಹೋಗಲಾರದೆ, ಸರ್ಕಾರಿ ಆಸ್ಪತ್ರೆಗೂ ಬಾರದೇ, ಎಲ್ಲೋ ಯಾರೋ ಹೇಳಿದ್ದೋ, ಓದಿದ್ದೋ ನೆನಪಾಗಿ, ನೇರವಾಗಿ ಔಷಧಿ ಅಂಗಡಿಗಳಿಗೆ ಹೋಗಿ, ಔಷಧಿಯನ್ನು ಪಡೆದುಕೊಳ್ಳಲು ಪ್ರಯತ್ನಿಸು ತ್ತಾರೆ. ಇಂತಹ ಸಂದರ್ಭಗಳಿಗೇ ಕಾಯುತ್ತಿರುವವರಂತಿರುವ, ಕೆಲವು ಔಷಧಿ ಅಂಗಡಿಗಳ ಮಾಲಿಕರು, ಇಮ್ಮಡಿಯಾದ ಬೆಲೆಗಳಿಗೆ, ರೋಗಿಗಳು ಕೇಳಿದ ಔಷಧಿಯನ್ನು ಕೊಡುತ್ತಾರೆ. ವೈದ್ಯರ ಅನುಮತಿ ಚೀಟಿಯಿಲ್ಲದೇ ಮಾತ್ರೆ ಯನ್ನಾಗಲೀ ಔಷಧಿಯನ್ನಾಗಲೀ ನೀಡಬಾರದೆಂದು, ಕಾನೂನಿನ ಆಜ್ಞೆ ಯಿದ್ದರೂ, ವ್ಯಾಪಾರ ಮಾಡುವ ಔಷಧಿ ವ್ಯಾಪಾರಿಗಳಿಂದ ಎರಡರಷ್ಟು ಬೆಲೆಗೆ ಔಷಧಿ ಪಡೆದುಕೊಂಡು, ತಾವೇನೋ ಉಳಿಸಿಕೊಂಡು ಹೋದೆನೆಂಬ ಭಾವನೆ ಯಿಂದ ಹೋಗುವಾಗ, ತಮಗಾದ ವೈಯುಕ್ತಿಕ ನಷ್ಟದ ಬಗ್ಗೆ ತಿಳಿದರೂ, ಆಗ ಅವರಿಗೆ ಬೇಸರವೆನ್ನಿಸುವುದಿಲ್ಲ. ವೈದ್ಯರ ಬಳಿಗೆ ಹೋಗುವುದನ್ನು 'ತಪ್ಪಿಸಿ ಕೊಂಡುದುದರ ಜೊತೆಗೆ' ವೈದ್ಯರ ಶುಲ್ಕವನ್ನೂ ಉಳಿಸಿಕೊಂಡುದುದರ ಬಗ್ಗೆ ಒಂದು ವಿಧದ ಸಮಾಧಾನಕರ ಭಾವನೆಯೂ ಉಂಟಾಗಿರುತ್ತದೆ. ಹೀಗಾಗಿ, ಬೀಡಿ, ಸಿಗರೇಟು, ದೊರಕುವ ಅಂಗಡಿಗಳಲ್ಲೂ ನಮಗೆ, ತಲೆನೋವು, ಶೀತ, ಕೆಮ್ಮು ಜ್ವರದ ಮಾತ್ರೆ, ಔಷಧಿಗಳು ಕೊಳ್ಳಲು ಸಿಗುತ್ತವೆ.

ಯಾವ ಯಾವ ಮಾತ್ರೆಗಳೂ ಯಾರ ಯಾರ ದೇಹ ಪ್ರಕೃತಿಗೆ ಹೊಂದಿಕೊಳ್ಳುತ್ತವೋ ಇಲ್ಲವೋ ಎಂಬ ಪರೀಕ್ಷೆಯೂ ಮಾಡದೆ 'ಸ್ವಯಂ ವೈದ್ಯಕೀಯ ಮಾಡಿಕೊಂಡು ಅಪಾಯಕ್ಕೊಳಗಾದವರೂ ಇದ್ದಾರೆ.

ಈ ಘಟನೆಗಳು, ಪ್ರತಿದಿನಾ, ಪ್ರತಿಕ್ಷಣ, ನಡೆಯುತ್ತಿದ್ದರೂ ಯಾರೂ ಅಷ್ಟಾಗಿ ಗಣನೆಗೆ ತೆಗೆದುಕೊಳ್ಳದೇ ಇರುವುದು ಆಶ್ಚರ್ಯವೆನ್ನಿಸುತ್ತದೆ. ಅತಿ ಬುದ್ಧಿವಂತಿಕೆಯಿಂದು, ಸ್ವಯಂ ವೈದ್ಯಕೀಯ ಮಾಡಿಕೊಳ್ಳುವವರ ಅಮಾಯಕತೆಯೋ, ಅಥವಾ ಅಂತಹ ವೈದ್ಯಕೀಯ ಲೇಖನಗಳನ್ನು ಬರೆದು, ಚಿಕಿತ್ಸೆಯ ಸ್ವರೂಪ, ಔಷಧಿಗಳ ಹೆಸರನ್ನು ಬರೆದು ಪ್ರಕಟಗೊಂಡ ಲೇಖನ ಪ್ರಭಾವವೋ? ಎರಡೂ ಒಂದೇ ಬಗೆಯ ಪರಿಣಾಮ ಬೀರುವುದರಿಂದ, ಅಪಾಯ ಖಂಡಿತಾ ತಪ್ಪಿದ್ದಲ್ಲ. ಸುಲಭವಾದ ಸಲಹೆಗಳು ಸಹ್ಯ ನಿಜ. ಆದರೆ ಅದೆಷ್ಟು ಸಮಂಜಸವಾದದ್ದೆಂದು ಯೋಚಿಸಬಾರದೇಕೆ ?

ಸಾಹಿತ್ಯ ಇಂದು ತನ್ನದೇ ಆದ ಪ್ರಭಾವವನ್ನು ಬೀರುವ ಮಾಧ್ಯಮವಾಗಿದೆ. ತಮ್ಮ ಬದುಕಿನಲ್ಲಿ ಸಿಗಲಾರದ ಯಾವುದೋ ಚಿಕ್ಕ ಬಯಕೆಗಳೇ ಇರಲಿ, ಕನಸುಗಳೇ ಇರಲಿ, ಇಂದು ಸಾಹಿತ್ಯ ಓದಿ, ಚಲನಚಿತ್ರ ನೋಡಿ, ತೃಪ್ತಿಪಟ್ಟುಕೊಳ್ಳುವ, ನಾಯಕ–ನಾಯಕಿಯರೊಂದಿಗೆ ತಮ್ಮನ್ನು ಗುರುತಿಸಿಕೊಂಡು ಸುಖಿಸುವ ಮಾಧ್ಯಮ ವರ್ಗದ, ಅದೂ ಮಹಿಳೆಯರಲ್ಲಿ, ಸತ್ಯಾಸತ್ಯಗಳ ವಿಶ್ಲೇಷಣೆಗೆ ಆಸಕ್ತಿ ಇಲ್ಲದಿರುವುದು ಕಾಣುತ್ತದೆ. ಮನಸ್ಸಿಗೆ, ದೇಹಕ್ಕೆ, ಹಿತವಾಗುವ ಎಲ್ಲದನ್ನು ಎಲ್ಲವನ್ನು ಒಪ್ಪಿಕೊಂಡು ಬಿಡುವ ಮಹಿಳೆಯ ಸ್ಥಿತಿ ಒಂದು ವಿಧದ ಗೊಂದಲಮಯದಲ್ಲಿರುತ್ತದೆ. ಕುಟುಂಬದ ಸೂತ್ರಧಾರಿಣಿಯೇ ತಾನಾಗಿರುವುದರಿಂದ, ತಂತಾನೇ ಜೇಡನಂತೆ ಅಮಾಯಕತೆ ಮೌಢ್ಯತೆಯ ಬಲೆ ನೇಯ್ದುಕೊಂಡು, ಬಂದಿಯಾಗಿರುತ್ತಾಳೆ. ಇಂತಹ ಅನಿಶ್ಚಿತ ಮನೋಭಾವದ ಮಹಿಳೆಯರಿಗೆ ಆಗಲಿ ಉಳಿದವರಿಗೇ ಆಗಲಿ, ಯಾವುದೇ ಸಾಹಿತ್ಯ ಅದರಲ್ಲೂ ವೈದ್ಯಕೀಯ ಸಾಹಿತ್ಯ ಗೊಂದಲವನ್ನುಂಟು ಮಾಡುವಂತಿರಬಾರದು.

ವೈದ್ಯಕೀಯ ಲೇಖನ ಬರೆಯುವುದು ತಿಳಿದುಕೊಂಡಷ್ಟು ಸುಲಭದ ಮಾತಲ್ಲ. ಅಗ್ಗದ ಜನಪ್ರಿಯತೆಗೆ ಬರೆಯುವಂತಹದೂ ಅಲ್ಲ. ಪ್ರತಿ ಹಂತ

ದಲ್ಲೂ ಅತ್ಯಂತ ಜಾಣ್ಮೆ, ಜಾಗರೂಕತೆಯಿಂದ ಬರೆಯುವಂತಹುದು. ಅದರಲ್ಲೂ ಮುಖ್ಯವಾಗಿ ವೈದ್ಯಸಾಹಿತಿಗಳದ್ದೂ ಇನ್ನು ಒಂದು ಹೆಜ್ಜೆ ಮುಂದಿರಬೇಕು. ಖಚಿತವಾದ ನಿಲುವು ತಿಳಿವಳಿಕೆ ನೀಡುವಂತಹ ಸಾಹಿತ್ಯ ಮಾಧ್ಯಮವಿದು, ಎಚ್ಚರಿಕೆ ಅಗತ್ಯವಲ್ಲವೆ ?

'ಸಾಹಿತ್ಯ' ವೈದ್ಯಕೀಯ ಮತ್ತು ಮಹಿಳೆಯಲ್ಲಿ ದೃಢವಾದ ಸೇತುವೆಯಂತಿರಬೇಕು. ಅಳ್ಳಕವಾಗಿದ್ದರೆ ಅಪಾಯವೇ ಜಾಸ್ತಿ. ಯಾವುದೇ ವಿಜ್ಞಾನ ನಿಂತ ನೀರಲ್ಲ. ಮೂವತ್ತು ವರ್ಷಗಳ ಹಿಂದೆ ಬರೆದ ವೈದ್ಯಕೀಯ ಲೇಖನ ಆಗಿನ ವಸ್ತುಸ್ಥಿತಿಯ ಬಗ್ಗೆ, ಆಗಿನ ವೈಜ್ಞಾನಿಕ ನೆಲೆಗಟ್ಟಿನ ಮೇಲೆ ರಚಿಸಿ, ಅಂದಿನ ದಿನಗಳಲ್ಲಿ ಬಹು ಪ್ರಾಮುಖ್ಯತೆಯನ್ನು ಪಡೆದಿದ್ದಿರಬಹುದು. ಪ್ರಶಸ್ತವೆನ್ನಿಸಿರಲೂಬಹುದು. ಪ್ರತಿದಿನ ಪ್ರತಿಕ್ಷಣ ಹೊಸತನ್ನು ಹುಡುಕಿ ತೆಗೆಯುವಂತಿರಬೇಕಾದ ಇಂದಿನ ದಿನಗಳಲ್ಲಿ, ಲೇಖನ ಮಹತ್ವವನ್ನು ಕಳೆದುಕೊಳ್ಳಲೂಬಹುದು. ಅಂದ ಮಾತ್ರಕ್ಕೆ ಲೇಖಕನ ಮಹತ್ವ ಹೋಗುವುದಿಲ್ಲ. ಅಂದಿಗೂ ಇಂದಿಗೂ 'ಲೇಖಕ' ಮಹತ್ವದವನೆ :

ಹದಿಹರೆಯದ ಹುಡುಗಿಗೆ ಮುಖದ ಮೇಲೆ ಮೊಡವೆಗಳು ಮೂಡಿದಾಗಲೂ ಮೊರೆ ಹೋಗುವುದು ಲೇಖನಗಳನ್ನೇ ಆದರೂ ಸಲಹೆಯ ಮೇರೆಗೆ ಚಿಕಿತ್ಸೆ ತೆಗೆದುಕೊಳ್ಳುವುದರ ಪ್ರಾಮುಖ್ಯತೆ ತಿಳಿಯುವುದು ಮೇಲು. ಇಂತಹ ಮಹತ್ವದ ಪಾತ್ರವಹಿಸುವ ಹಿರಿಮೆ, ಲೇಖಕನದ್ದು ಮತ್ತು ಲೇಖನದ್ದು ಎಂದಾದ ಮೇಲೆ ಜಾಣ್ಮೆಯ ಜೊತೆಗೆ ಜಾಗರೂಕತೆಯೂ ಅವಶ್ಯವೆನ್ನಿಸುತ್ತದೆ.

ಸ್ವಯಂ ಚಿಕಿತ್ಸೆಯನ್ನು ಭೋದಿಸುವ, ವೈದ್ಯಕೀಯ ಲೇಖನಗಳು ನಿಜಕ್ಕೂ ಅಪಾಯಕಾರಿ. ವೈದ್ಯಸಾಹಿತಿ, ತನಗೆ ತಿಳಿದುದ್ದನ್ನೆಲ್ಲವನ್ನು ಒಮ್ಮೆಲೇ ಜನಸಾಮಾನ್ಯರ ಮೇಲೆ ಗೊಂದಲವನ್ನುಂಟು ಮಾಡುವ ಬದಲು, ಜನಸಾಮಾನ್ಯರಿಗೇನು ಬೇಕೆಂಬುದರ ಬಗ್ಗೆ ಯೋಚಿಸಿ ಬರೆಯುವುದು ಉತ್ತಮ. ವೈದ್ಯಕೀಯ ಸಾಹಿತ್ಯ, ಆರೋಗ್ಯದ ಬಗ್ಗೆ ಭೀತಿಯನ್ನುಂಟು ಮಾಡುವಂತಿರಬಾರದು. ನವಿರಾದ ಎಚ್ಚರಿಕೆಯೊಂದಿಗೆ, ಸಾಮಾನ್ಯ ತಿಳಿವಳಿಕೆಯನ್ನು ನೀಡಿದ

ರಷ್ಟೇ ಸಾಕು. ವಿನಾಕಾರಣ ಹೆದರಿಕೆಯ ಗೊಂದಲದ ವಾತಾವರಣವನ್ನು ಸೃಷ್ಟಿಸುವ ವೈದ್ಯಕೀಯ ಲೇಖನಗಳನ್ನು ಬರೆಯುವುದಕ್ಕಿಂತ ಸುಮ್ಮನಿರುವುದೇ ವಾಸಿ. ಸ್ವಯಂ ವೈದ್ಯಕೀಯ, ಸ್ವತಃ ವೈದ್ಯನಾದವನಿಗೇ ಸಂಕಟ ತರುವಂತಿರುವಾಗ ಇನ್ನು ಜನಸಾಮಾನ್ಯರ ಪಾಡೇನು ? ಎಂದು ಯೋಚಿಸಬೇಕು.

ಉತ್ತಮವಾದ, ಹಳೆಯದಾದ ವೈದ್ಯಕೀಯ ಸಾಹಿತ್ಯದ ಲೇಖನಗಳನ್ನು ಪರಿಷ್ಕರಣಗೊಳಿಸಿ, ಪುನರ್ರಚಿಸಿ, ಓದುಗರಿಗೆ ನೀಡುವುದು ಸೂಕ್ತ. ಮಧ್ಯಮ ವರ್ಗದ ಮಹಿಳೆಯರು ಹೆಚ್ಚಾಗಿ, ಕಾದಂಬರಿ, ಕತೆಗಳನ್ನೋದುವುದರಿಂದ, ಸಿನಿಮಾ ಟಾಕೀಸುಗಳಿಗಿಂತ, 'ಲೈಬ್ರರಿ'ಗಳ ಮುಂದೆ ಕಾಣಸಿಗುತ್ತಾರೆ ಮನೋರಂಜನೆಗೆಂದೇ ಓದುವ ಮಹಿಳೆ ಆರೋಗ್ಯದ ಬಗ್ಗೆಯೂ ತಿಳಿಯಲು ಉತ್ಸುಕಳಾಗಿರುತ್ತಾಳೆ ಆದುದರಿಂದಲೆ ಯಾವುದೇ ಮದುವೆ ಮುಂಜಿಗಳಿರಲಿ ಉಡುಗೊರೆಯಾಗಿ ಕೆಲವೊಂದು ವೈದ್ಯಕೀಯ ಸಾಹಿತ್ಯದ ಪುಸ್ತಕವನ್ನು ಕೊಟ್ಟ ಅಥವಾ ತೆಗೆದುಕೊಂಡು ತೃಪ್ತಿಪಡುತ್ತಾಳೆ. ಉದಾಹರಣೆಗೆ ನೂತನ ವಧೂವರರಿಗೆ ಅನುಪಮಾ ನಿರಂಜನ ಅವರ 'ವಧುವಿಗೊಂದು ಕಿವಿಮಾತು' 'ದಾಂಪತ್ಯ ಸಮಾಲೋಚನೆ' ಮುಂತಾದುವುಗಳನ್ನು ನೀಡಿದರೆ, ತಾಯಿಯಾಗಿ ಸಂಭ್ರಮಿಸುವ ಗರ್ಭಿಣಿ ಮಹಿಳೆ ಅಂತಹುದೇ ಸಾಹಿತ್ಯವನ್ನೋದುತ್ತಿರುವುದು ಕಂಡು ಬರುತ್ತಿರುವುದು ಆಸಕ್ತಿಯ ದ್ಯೋತಕವಾಗಿದೆ. ಅನುಪಮಾ ಅವರ ಕೃತಿಗಳನ್ನು ಪರಿಷ್ಕರಿಸಿ, ತಿದ್ದುಪಡಿಯಿಂದ ಪುನಃ ಮುದ್ರಿಸಿದರೆ ವೈದ್ಯ ಸಾಹಿತ್ಯಕ್ಕೊಂದು ಉತ್ತಮಕೊಡುಗೆ ಅಲ್ಲದೇ ಮಹತ್ವದ್ದು ಆದೀತು.

ಡಾ|| ಎಂ. ಶಿವರಾಂ (ರಾಶಿ) ಅವರ ವೈದ್ಯಕೀಯ ಬರವಣಿಗೆ : ಒಂದು ಸಮೀಕ್ಷೆ

--ಡಾ|| ಎ. ಎಸ್. ವೇಣುಗೋಪಾಲ ರಾವ್

"ಮರನಂ ಗಾಳಿಯುಂ ದೂಳಿಯುಂ ರಜನಿಯುಂ ನೀರಾಟಮುಂ
ಸುರೆಯುಂ ಸೂಳೆಯುಂ ವಿಟಾಟವಿಕರಂ ಕೊಂಡಾಡಿ ಬೆಂಡಾಗದೀ
ಧರೆಯೊಳ್ ಸರ್ವಜನೋಪಕಾರಮೆನಲ್ ಈ ಮಂತ್ರೌಷಧಿವ್ರಾತಮುಂ
ನಿರುತಂ ಭಾವಿಸಿ ಪೇಳ್ವ ಮಾನವನೆ ತಾಂ ದೇವಂ ಧರಾಚಕ್ರದೊಳ್||"

'ಖಗೇಂದ್ರ ಮಣಿ ದರ್ಪಣಂ' ಎಂಬ ವಿಷವೈದ್ಯ ಗ್ರಂಥವನ್ನು ರಚಿಸಿದ ಮಂಗರಾಜನ ಮಾತು ಇದು. ರಸವತ್ ಕಾವ್ಯವನ್ನು ಕುರಿತ ಅವನ ಟೀಕೆಯನ್ನು ಸಮರ್ಥಿಸುವುದು ನನ್ನ ಉದ್ದೇಶವಲ್ಲ. ಈ ವಾದ ಗ್ರೀಕ್ ದಾರ್ಶನಿಕ ಪ್ಲೇಟೋ ಕಾಲದಿಂದಲೇ ಬೆಳೆದು ಬಂದದ್ದು—ಆತನ ಪ್ರಚಂಡ ಶಿಷ್ಯ ಅರಿಸ್ಟಾಟಲ್‌ನಿಂದಲೇ ಸಮರ್ಥವಾಗಿ ವಿರೋಧಿಸಲ್ಪಟ್ಟದ್ದು. ವಾದದ ವಿವರಗಳು ಇಲ್ಲಿ ಅಪ್ರಕೃತ. ಆದರೆ ಶಾಸ್ತ್ರಗ್ರಂಥಗಳು-ಅದರಲ್ಲೂ ವೈದ್ಯಶಾಸ್ತ್ರ-ಸರ್ವಜನೋಪಕಾರವೆಂದೂ ಮನಸ್ಸು ಕರಗಿಸಿ ರಸಾನಂದವನ್ನುಂಟು ಮಾಡುವ ಕಾವ್ಯದ ಉದ್ದೇಶ ಇದಕ್ಕಿಂತ ಬೇರೆಯಾದುದೆಂದೂ ಪ್ರಾಚೀನರು ಸ್ಪಷ್ಟವಾಗಿ ಮನಗಂಡಿದ್ದರು ಎಂಬುದಂತೂ ನಿಜ. ಸಾಹಿತ್ಯವನ್ನು ಶಾಸ್ತ್ರ-ಕಾವ್ಯ ಎಂದು ಸ್ಪಷ್ಟವಾಗಿ ವಿಭಾಗಿಸಿದುದೂ ಅವರ ವಿವೇಚನೆಗೆ ಸಾಕ್ಷಿಯಾಗಿದೆ. ಶಾಸ್ತ್ರದ ಉದ್ದೇಶ ಜ್ಞಾನ ಪ್ರಸಾರ-ಲೌಕಿಕ ಪ್ರಯೋಜನ-ಅದರ ರೀತಿ ಸರ್ವ

ಸಾಮಾನ್ಯರಿಗೂ ಅರ್ಥವಾಗುವಂತಹ ಸಾಲಂಕೃತವಲ್ಲದ, ವಕ್ರೋಕ್ತಿಯಲ್ಲದ ನೇರ ಮಾರ್ಗ. ಸರಳ–ಸುಲಭ–ದ್ವಂದ್ವಾರ್ಥ ರಹಿತ–ಖಚಿತ–ಭಾಷೆಯಲ್ಲಿ ಅದು ನಿರೂಪಿತವಾಗತಕ್ಕುದು. ಅದೇ ಶಾಸ್ತ್ರ ಸಾಹಿತ್ಯದ ಉನ್ನತ ಆದರ್ಶ. ರಸವತ್ಕಾವ್ಯ ಈ ಒಂದೊಂದು ಅಂಶದಲ್ಲೂ ಮೂಲತಃ ಬೇರೆಯಾದದ್ದು. (ಉದ್ದೇಶ, ರೀತಿ, ಪ್ರಯೋಜನ, ಭಾಷೆ ಎಲ್ಲದರಲ್ಲೂ) ಹೀಗಾಗಿ ರಸವತ್ಕಾವ್ಯದಲ್ಲಿ ಆದರ್ಶವೆನಿಸಿದುದು ಶಾಸ್ತ್ರ ಸಾಹಿತ್ಯಕ್ಕೆ ಅನಗತ್ಯವೂ ಅನಪೇಕ್ಷಣೀಯವೂ ಆಗಿ ಕೆಲವೊಮ್ಮೆ ದೋಷವೇ ಆಗಿ ಪರಿಣಮಿಸಬಹುದು. ಈ ಮೂಲಭೂತ ಸಂಗತಿಯನ್ನು ಖಚಿತಪಡಿಸಿಕೊಂಡಾಗ ವೈದ್ಯಕೀಯ ಸಾಹಿತ್ಯ ಎಂದರೇನು ? ಅದು ಹೇಗಿರಬೇಕು ? ಹೇಗಿರಬಾರದು ? ಎಂಬ ಗೊಂದಲಗಳು ಮಾಯವಾಗಬಹುದು.

ಈ ವಿಷಯವನ್ನು ಇಷ್ಟು ವಿವರದಲ್ಲಿ ಪ್ರಸ್ತಾಪಿಸಿದುದರ ಉದ್ದೇಶ ಇಷ್ಟೆ. ಹಿಂದಿನ ಕೆಲವು ವಿಚಾರ ಸಂಕಿರಣಗಳಲ್ಲಿ ವೈದ್ಯಕೀಯ ಸಾಹಿತ್ಯ–ವೈದ್ಯ ಸಾಹಿತ್ಯ–ವೈದ್ಯರ ಸಾಹಿತ್ಯ. ಇಂತಹ ಕೆಲವು ಗೊಂದಲಗಳು ವ್ಯಕ್ತವಾದದ್ದನ್ನು ಕಂಡಿದ್ದೇನೆ, ಆದುದರಿಂದ ಮೊದಲು ಈ ಕೆಲವು ಅಂಶಗಳನ್ನು ನನಗಾಗಿ ಖಚಿತಪಡಿಸಿಕೊಳ್ಳುತ್ತೇನೆ.

೧. ವೈದ್ಯರು ಬರೆದದ್ದೆಲ್ಲ ವೈದ್ಯಕೀಯ ಸಾಹಿತ್ಯವಲ್ಲ. ಉಳಿದವರಂತೆ ವೈದ್ಯರೂ ಕತೆ, ಕಾದಂಬರಿ, ಹಾಸ್ಯರಶ್ಮಿಗಳನ್ನೂ ಬರೆದು ಪ್ರಖ್ಯಾತರಾಗಬಹುದು–ಆಗಿದ್ದಾರೆ. ಉದಾಹರಣೆಗೆ ಅನುಪಮಾ ನಿರಂಜನ, ಡಾ॥ ಗಿರಿಜಮ್ಮ, ಡಾ॥ ಅಶೋಕ ಪೈ ಇತ್ಯಾದಿ.

೨. ವೈದ್ಯಕೀಯ ಸಂಗತಿಗಳನ್ನು, ರೋಗ ರುಜಿನ–ರೋಗ ನಿದಾನ–ಇತ್ಯಾದಿಗಳನ್ನು ಆಧಾರವಾಗಿರಿಸಿಕೊಂಡು ರಸವತ್ತಾದ ಕತೆ ಕಾದಂಬರಿಗಳನ್ನು ವೈದ್ಯರಲ್ಲದವರೂ ಬರೆಯಬಹುದು. ಆದರೆ ಇವು ವೈದ್ಯಕೀಯ ಸಾಹಿತ್ಯವಲ್ಲ. ತ್ರಿವೇಣಿಯವರ ಮನೋ ವೈಜ್ಞಾನಿಕ ಎಂದು ಹೇಳಲಾದ ಕತೆ ಕಾದಂಬರಿಗಳಾಗಲೀ ಉಷಾಕಿರಣದಂತಹ ಕಾದಂಬರಿಯಾಗಲೀ ವೈದ್ಯಕೀಯ ಸಾಹಿತ್ಯವಲ್ಲ.

ಆದರೆ ವೃದ್ಧಾಪ್ಯದ ಮನೋವ್ಯಾಧಿಗಳನ್ನು ಕುರಿತ "ಮಾನಸ" (ಡಾ॥ ಅಶೋಕ ಪೈ) ನಿಜಕ್ಕೂ ವೈದ್ಯಕೀಯ ಸಾಹಿತ್ಯ.

೩. ವೈದ್ಯಕೀಯ ಸಂಗತಿಗಳನ್ನು–ರೋಗ–ರೋಗ ನಿದಾನ–ಚಿಕಿತ್ಸೆ–ಪರಿಣಾಮ–ಪ್ರಯೋಗ ಇತ್ಯಾದಿಗಳನ್ನು ಒಂದು ಶಾಸ್ತ್ರೀಯ ಶಿಸ್ತಿನಂತೆ ಪರಿಗಣಿಸಿ, ಈ ಹಿಂದೆ ಸೂಚಿಸಲಾದಂತೆ ಶಾಸ್ತ್ರ ಸಾಹಿತ್ಯದ ಪರಿಭಾಷೆ–ಕ್ರಮ–ದಲ್ಲಿ ರಚಿಸಿದುದೇ ವೈದ್ಯಕೀಯ ಸಾಹಿತ್ಯ. ವೈದ್ಯವಿಜ್ಞಾನದ ಪ್ರಸಾರವೇ ಇದರ ಮುಖ್ಯ ಉದ್ದೇಶ. ಆ ಮೂಲಕ ದೈಹಿಕ–ಮಾನಸಿಕ ರೋಗಗಳನ್ನು ತಡೆಗಟ್ಟುವುದು. ಆರಂಭದ ಹಂತದಲ್ಲೇ ಸೂಕ್ತ ಚಿಕಿತ್ಸೆ ಕೈಗೊಳ್ಳುವಂತೆ ಪ್ರಚೋದಿಸುವುದು ಅಪರಿಹಾರ್ಯವೆನಿಸಿದ ರೋಗ ಸಂದರ್ಭಗಳಲ್ಲಿ ಪರಿಸ್ಥಿತಿಯನ್ನು ಯಥಾವತ್ತಾಗಿ ಸ್ವೀಕರಿಸುವ ಮನಸ್ಸಿನ ಸಿದ್ಧತೆಯನ್ನು ಪಡೆದುಕೊಳ್ಳಲು ನೆರವಾಗುವುದು ; ಮುಖ್ಯವಾಗಿ ರೂಢಮೂಲವಾದ ಕುರುಡು ನಂಬಿಕೆಗಳನ್ನೂ ಅಜ್ಞಾನವನ್ನೂ ದೂರಮಾಡಿ ಸಾಮಾಜಿಕ ಆರೋಗ್ಯವನ್ನು ಸಾಧಿಸುವುದು ವೈದ್ಯಕೀಯ ಸಾಹಿತ್ಯದ ಪ್ರೇರಣೆ ಹಾಗೂ ಪ್ರಯೋಜನ.

ಸಹಜವಾಗಿಯೇ ತೋರುವಂತೆ ವೈದ್ಯಕೀಯ ಕ್ಷೇತ್ರದಲ್ಲಿಯೇ ಇರುವ ವೃತ್ತಿಪರ ವೈದ್ಯರು ಇಂತಹ ಸಾಹಿತ್ಯವನ್ನು ಸೃಷ್ಟಿಸಲು ಅರ್ಹರು. ಅಧ್ಯಯನ ಹಾಗೂ ಅನುಭವ ಅಂತಹ ಸಾಹಿತ್ಯವನ್ನು ಗಟ್ಟಿಗೊಳಿಸುತ್ತಿದೆ. ಆದರೆ ಇವು ಎರಡೂ ಭಾಷೆಯಲ್ಲಿಯೇ ಮೈತಾಳುವುದು ಸಾಹಿತ್ಯದ ಆಗತ್ಯವಾದುದರಿಂದ ಉಲ್ಲೇಖನ ಸಾಮರ್ಥ್ಯವೂ–ಕಾರಯಿತ್ರೀ ಪ್ರತಿಭೆ–ಅಂತಹ ಲೇಖಕರಿಗೆ ಮೂಲಭೂತ ಅಗತ್ಯವಾಗುತ್ತದೆ. ಅಪಾರವಾದ ವೃತ್ತಿಯ ಅನುಭವ ಇನ್ನೂ ವೈದ್ಯಕೀಯ ಸಾಹಿತ್ಯವಾಗಿ ಮೈತಾಳದಿರುವುದು ಪ್ರಾಯಶಃ ಈ ಸಾಮರ್ಥ್ಯದ ಕೊರತೆಯಿಂದ ಎಂದೇ ನಾನು ಪ್ರಾಮಾಣಿಕವಾಗಿ ಭಾವಿಸುತ್ತೇನೆ. ಮೆಡಿಕಲ್–ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಭಾಷೆಯ ವ್ಯಾಸಂಗ ಅನಗತ್ಯ ಎಂಬ ಪೂರ್ವಾಗ್ರಹವನ್ನು ಸರ್ಕಾರ ಹಾಗೂ ಸಮಾಜ ಇನ್ನಾದರೂ ತೊರೆಯುವುದು ಮೇಲು. ಸರಳವಾದ ನೇರವಾದ ಭಾಷಾ ಅಭಿವ್ಯಕ್ತಿ ನಮ್ಮ ವೈದ್ಯರಿಗೂ ಇಂಜನಿಯರುಗಳಿಗೂ ಭೂಷಣಪ್ರಾಯ ಮಾತ್ರವಲ್ಲ ಪ್ರಾಥಮಿಕ ಅಗತ್ಯವೂ ಹೌದು.

ಪ್ರತಿಭಾನ್ವಿತ ಸಾಹಿತಿಗಳು ಈ ಕೊರತೆಯನ್ನು ಯಶಸ್ವಿಯಾಗಿ ತುಂಬ ಬಲ್ಲರು ಎಂದು ಮೊದಲ ನೋಟಕ್ಕೆ ಎನಿಸುತ್ತದೆ. ಆದರೆ ವೈದ್ಯಕೀಯ ವಿಷಯಗಳ ಆಳವಾದ ಅಧ್ಯಯನವಿಲ್ಲದೆ ಇಂತಹ ಸಾಹಿತ್ಯ ಅರ್ಥಹೀನವಾಗುತ್ತದೆ. ವಾಸ್ತವಿಕ ಅನುಭವದ ಕೊರತೆಯಿಂದ ಇಂತಹ ಸಾಹಿತ್ಯಕ್ಕೆ ಅಥೆಂಟಿಸಿಟಿ ಬರುವುದೂ ಸಂದೇಹವೇ. ಅಲ್ಲದೆ ಈಗಾಗಲೇ ಸೂಚಿಸಿದಂತೆ ರಸವತ್ಕಾವ್ಯಕ್ಕೆ ಉಚಿತವೆನಿಸುವ ಸಾಲಂಕೃತವೂ ಧ್ವನಿಯುಕ್ತವೂ ಆದ ಭಾವೋಪಯೋಗಿ ಭಾಷೆ ಖಂಡಿತವಾಗಿಯೂ ಶಾಸ್ತ್ರಸಾಹಿತ್ಯ ನಿರ್ಮಾಣಕ್ಕೆ ಅನುಚಿತವೇ ಆಗುತ್ತದೆ.

ಪ್ರಾಯಶಃ ವೈದ್ಯಕೀಯ ಸಾಹಿತ್ಯದ ಪ್ರಮುಖ ಸಮಸ್ಯೆಯೆಂದರೆ ಇದೇ ಆಗಿದೆ. ಅನುಭವ-ಅಧ್ಯಯನವಿದ್ದಲ್ಲಿ ಅಭಿವ್ಯಕ್ತಿ ಸಾಮರ್ಥ್ಯದ ಕೊರತೆ, ಅಭಿವ್ಯಕ್ತಿ ಸಾಮರ್ಥ್ಯವಿದ್ದಲ್ಲಿ ಅನುಭವ ದ್ರವ್ಯದ ಕೊರತೆ. ವೈದ್ಯಕೀಯ ಸಾಹಿತ್ಯದ ಸೋಲು ಗೆಲುವುಗಳನ್ನು ಅಳೆಯುವ ಮುಖ್ಯ ಮಾನದಂಡವೇ ಇದು.

ಈ ಪ್ರಬಂಧದ ಮೊದಲಲ್ಲಿ ಉಧೃತವಾದ ಪದ್ಯದಲ್ಲಿನ ಆಶಯವನ್ನು ಸರಿಯಾಗಿ ಗಮನಿಸಿದರೆ ವೈದ್ಯಕೀಯ ಸಾಹಿತ್ಯ ಹಿಡಿಯಬೇಕಾದ ಹಾದಿಯು ಸ್ವಲ್ಪ ಮಟ್ಟಿಗೆ ಗೋಚರವಾಗಬಹುದು. ಸರ್ವಜನೋಪಕಾರವಾದ ವಿಷಯವನ್ನು ತಿಳಿಯಹೇಳುವುದು ಅದರ ಗುರಿ-ಗಮ್ಯ. ಪ್ರಾಚೀನ ಕನ್ನಡ ಕಾವ್ಯದಲ್ಲಿಯೂ ಅಂತಹ ಪ್ರಯತ್ನ ನಡೆದೇ ಇದೆ. ಸದ್ಯಕ್ಕೆ ತಿಳಿದು ಬಂದಂತೆ ೧೩೦೦ರಲ್ಲಿ ರಚಿತವಾದ ವೈದ್ಯಶಾಸ್ತ್ರ ಇವುಗಳಲ್ಲಿ ಮೊದಲನೆಯದು. ಅದರ ಸರಳ ಶೈಲಿ ಗಮನಾರ್ಹ.

"ನೇರಲ ಬೀಜಮುಂ ಮೊಲೆವಾಲಲ್ಲಿ ತೇದು ಕಣ್ಗೆ ಎಚ್ಚೆ
ಕಣ್ಣ ಬೇನೆ ಮಾಣ್ಗುಂ । ಅರುಳಿ ಮೊಗರು ಅರಗು ಇವನೆರೆದು
ಹುಳಿಮಜ್ಜಿಗೆಯಲ್ಲಿ ಕದಡಿ ಕುಡಿಯೆ ಸೂತಕಂ ನಿಲುವುದು ।"

ಜ್ವರದ ಆದಿಯೊಳ್ ಉಪವಾಸಂ । ಜ್ವರಮಧ್ಯದೊಳ್ ಗಂಜಿ ।
ಪೇಳ್ವ ಕಷಾಯಂ । ಜ್ವರ ಪಾಕದೊಳ್ । ಅಸ್ತಮಿತ ಜ್ವರದೊಳ್
ಮಲ ಹರಣಂ। ಇನಿತು ಇವು ಆರೋಗ್ಯಕರಂ ॥

ಸುಮಾರು ೩೦ ವೈದ್ಯಗ್ರಂಥಗಳು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ದೊರೆತಿವೆ. ಇವುಗಳಲ್ಲಿ ೧೫ ಸಾಮಾನ್ಯ ವೈದ್ಯವನ್ನು ಕುರಿತದ್ದು. ಕೀರ್ತಿ ಕಾಮನ ಗೋವೈದ್ಯ (೧೧೦೦), ಜಗದ್ದಳ ಸೋಮನಾಥನ ಕಲ್ಯಾಣಕಾರಕ (೧೧೭೫), ಶ್ರೀಧರ ದೇವನ ವೈದ್ಯಾಮೃತ (೧೫೦೦), ಮಂಗರಾಜನ ಖಗೇಂದ್ರ ಮಣಿ ದರ್ಪಣ (೧೩೬೦), ತಿಮ್ಮರಾಜನ ಸ್ತ್ರೀವೈದ್ಯ, ವ್ರಣವೈದ್ಯ, ಬಾಲ ವೈದ್ಯ (೧೭೫೦) ಬಾಚರಸನ ಅಶ್ವವೈದ್ಯ (೧೫೦೦), ಇವು ಕೆಲವು ಪ್ರಮುಖ ಗ್ರಂಥಗಳು. ಆದರೂ ೧೫೦೦ಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ಪ್ರಾಚೀನ ಸಾಹಿತ್ಯವನ್ನು ಗಮನಿಸಿದರೆ ವೈದ್ಯಕೀಯ ಗ್ರಂಥಗಳ ಸಂಖ್ಯೆ ತೀರಾ ಕಡಿಮೆ. ಇವುಗಳಲ್ಲಿ ಮನೋವಿಜ್ಞಾನ ಅಥವಾ ಮನೋವೈದ್ಯವನ್ನು ಕುರಿತ ಕೃತಿ ಒಂದೂ ಇಲ್ಲದಿರುವುದು ಗಮನಾರ್ಹ. ಮನಸ್ಸನ್ನು ಕುರಿತು ಅತ್ಯಂತ ಆಳವಾಗಿ ಚಿಂತಿಸಿದ ಮನನಿಗರು ಪ್ರಾಯಶಃ ಅದನ್ನು ತತ್ವಶಾಸ್ತ್ರದ ಒಂದು ಪರಿಚ್ಛೇದವಾಗಿಯೇ ಭಾವಿಸಿರುವಂತೆ ತೋರುತ್ತದೆ. ಈ ಮಾತಿಗೆ ಆಧುನಿಕ ವಿಜ್ಞಾನವೂ ಹೊರತಲ್ಲ. ತೀರ ಇತ್ತೀಚಿನವರೆಗೂ ಮನಶ್ಶಾಸ್ತ್ರವನ್ನು **Psudo Science** ಎಂದೂ ಮನೋರೋಗ ವೈದ್ಯವನ್ನು ವೈದ್ಯಶಾಸ್ತ್ರ ಕ್ಷೇತ್ರದಲ್ಲಿ ಅನಧಿಕೃತ ಪ್ರವೇಶಮಾಡಿದ ಪುಂಡುಗೂಳಿ ಎಂದು ತೀರಾ ಪ್ರತಿಭಾ ವಂತ ವೈದ್ಯರೇ ಭಾವಿಸಿದ್ದರು ಎಂದು ಕೇಳಿದ್ದೇನೆ. ಮನೋರೋಗ ಚಿಕಿತ್ಸಕ ರನ್ನು "ಹುಚ್ಚು ಡಾಕ್ಟರು" ಎಂದು ವೈದ್ಯರು ಕುಹಕವಾಡಿದರೆ ಅದನ್ನು ಸತ್ಯ ಸಂಗತಿ ಎಂದೇ ಬಹುಮಂದಿ ಸಾಮಾನ್ಯರು ಭಾವಿಸಿರುವುದಂತೂ ನಿಜವೇ! ಇಂತಹ ಪರಿಸರದಲ್ಲಿ ಮನೋದೈಹಿಕ ಬೇನೆಗಳನ್ನು ಕುರಿತ ಅಥವಾ ಮನೋ ವೈದ್ಯವನ್ನು ಕುರಿತ ಕ್ಷೇತ್ರ ಮೊನ್ನೆ ಮೊನ್ನೆಯವರೆಗೂ ಕನ್ನೆನೆಲವೆನಿಸಿದುದು ತೀರಾ ಸಹಜವೇ. ಮನಶ್ಶಾಸ್ತ್ರವನ್ನು ಕುರಿತ ಗ್ರಂಥಗಳೇ ಕಡಿಮೆ. ಮನೋ ರೋಗವನ್ನು ಕುರಿತದ್ದು ಮತ್ತೂ ಕಡಿಮೆ. ಈ ಹಿನ್ನೆಲೆಯಲ್ಲಿ ಕಳೆದ ದಶಕದಲ್ಲಿ ನಡೆದ ಕೃಷಿಯ ಭರಾಟೆ ಬೆರಗುಗೊಳಿಸುತ್ತದೆ. ಪ್ರೊ. ನಾರಾಯಣಶಾಸ್ತ್ರಿಗಳ "ಕನಸುಗಳು" ಎಂಬ ಪುಟ್ಟ ಪುಸ್ತಕ ಪ್ರಕಟವಾದ ತರುಣದಲ್ಲಿ ಉಂಟಾದ ಕುತೂಹಲ, ವಿಸ್ಮಯ ರೋಮಾಂಚನಗಳು ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿದೆ. [ಮೈಸೂರು ವಿ.ವಿ. ಪ್ರಚಾರ ಪುಸ್ತಕ ಮಾಲೆ :]

೦ ೦ ೦

ಈ ಮೇಲಿನ ಪರಿಸರದಲ್ಲಿ ಡಾ|| ಎಂ. ಶಿವರಾಂ ಅವರ ಕೊಡುಗೆಯ ಮಹತ್ವವನ್ನು ಚಿಂತಿಸಬಹುದು. ಅವರ ಆ ಕೃತಿಗಳ ಪರಿಮಿತಿಯನ್ನು ವಿನಯದಿಂದ ಪರಿಶೀಲಿಸಬಹುದು. ಪ್ರಕೃತ ವಿಷಯವನ್ನು ಕುರಿತಂತೆ ನನ್ನ ಗಮನಕ್ಕೆ ಬಂದ ರಾ. ಶಿ. ಯವರ ಗ್ರಂಥಗಳು ಮೂರು :

೧) ಮನೋನಂದನ : ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು

೨) ಮನಮಂಥನ : ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ : ೧೯೭೪

೩) ಮನನ : ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು ೧೯೮೦

ಮೊದಲ ಪುಸ್ತಕ ಲೇಖಕರ ಸಂದೇಹವನ್ನು ಸುಳ್ಳು ಮಾಡಿ ಈಗಾಗಲೇ ಎರಡನೇ ಮುದ್ರಣ ಕಂಡಿದೆ. ಇಂಥ ವಿಷಯದ ಬಗೆಗೆ ಓದುಗರ ಆಸಕ್ತಿಗೆ ಸಾಕ್ಷಿಯಾಗಿದೆ.

ಈ ಎರಡು ಕೃತಿಗಳಲ್ಲೂ ಅನುಸರಿಸಿದ ಕ್ರಮ ಒಂದೇ. ಮೊದಲು ದೃಷ್ಟಾಂತಗಳ ಮಾಲೆ. ಎರಡನೆಯ ಭಾಗದಲ್ಲಿ ಅವುಗಳ ಬಗೆಗೆ ಶಾಸ್ತ್ರೀಯ ಚಿಂತನೆ. ಮನಸ್ಸಿನ ಸ್ವರೂಪ, ದೇಹ ಮನಸ್ಸುಗಳ ಸಂಬಂಧ, ಮನೋದೈಹಿಕ ಬೇನೆಗಳು ಚಿಕಿತ್ಸಾ ಕ್ರಮ....ಇತ್ಯಾದಿ. ಮುಖ್ಯವಾಗಿ ಕಾಣುವುದು ಸರಳ ಭಾಷೆ, ತಿಳಿಹಾಸ್ಯದ ಲೇಪನ, ಕೊರವಂಜಿಯ ರಾಶಿಯನ್ನು ಹೆಜ್ಜೆ ಹೆಜ್ಜೆಗೂ ನೆನಪಿಸುವಂತಹ ಹರಟೆಯ ಲೋಕಾಭಿರಾಮಶೈಲಿ. ಇದರಿಂದ ಆದ ಪ್ರಯೋಜನವೆಂದರೆ ಓದಿಸಿಕೊಂಡು ಹೋಗುವ ಗುಣ. ಆ ಕಾರಣದಿಂದ ಮನೋರೋಗ–ರೋಗನಿದಾನ–ಚಿಕಿತ್ಸೆಗಳ ಬಗೆಗೆ ಸಾಮಾನ್ಯರ ಕುತೂಹಲ ಅಭಿರುಚಿಯನ್ನು ಬೆಳೆಸಿದುದು. ಕನ್ನಡದಲ್ಲಿ ಇಂತಹ ಗ್ರಂಥಗಳೇ ಇಲ್ಲದಿದ್ದ ಕಾಲದಲ್ಲಿ ಇದೇನೂ ಸಣ್ಣ ಉಪಕಾರವಲ್ಲ. ಒಂದು ಅಭಿಜಾತ ವಾಚಕವರ್ಗವನ್ನು ಸಿದ್ಧಪಡಿಸಿ ಇಂದಿನ ವೈದ್ಯಕೀಯ ಸಾಹಿತ್ಯ ರಚನೆಗೆ ಮಾರ್ಗದರ್ಶಕರಾದುದು ರಾ. ಶಿ.ಯವರ ಪ್ರಮುಖ ಸಿದ್ಧಿ ಎಂದು ನಾನು ಭಾವಿಸಿದ್ದೇನೆ.

ಇಂಥ ಶಾಸ್ತ್ರೀಯ ವೈದ್ಯಕೀಯ ಗ್ರಂಥ ರಚನೆಯಲ್ಲಿನ ಮುಖ್ಯ ತೊಡಕುಗಳನ್ನು ರಾ. ಶಿ. ಗುರುತಿಸಿಕೊಂಡಿದ್ದಾರೆ, ಎದುರಿಸಿದ್ದಾರೆ, ಕೊಂಚ ಮಟ್ಟಿಗೆ

ಯಶಸ್ವಿಯಾಗಿದ್ದಾರೆ ಎಂದು ಧಾರಾಳವಾಗಿ ಹೇಳಬಹುದು. ಅವರ ಮಾತುಗಳನ್ನೇ ಕೇಳಿ :

೧. ವಿಷಯವನ್ನು ವಿವರಿಸುವಾಗ ಭಾಷೆಯೂ ನಿಖರವಾಗಿರಬೇಕು. ಆಗ ಸರಳ ಭಾಷೆಯು ನೆರವಾಗುವುದಿಲ್ಲ. ವಿರುದ್ಧವಾದ ಈ ಎರಡೂ ಧ್ಯೇಯಗಳನ್ನು ಸಮನ್ವಯಗೊಳಿಸಲು ಶ್ರಮಿಸಿದ್ದೇನೆ. ತಕ್ಕ ಮಟ್ಟಿಗೆ ಕಷ್ಟವನ್ನೂ ಪಟ್ಟಿದ್ದೇನೆ. ಆಸಕ್ತಿಯಿಂದ ಓದ ಬಯಸುವ ಕೆಲವರಿಗೂ ಕಷ್ಟವಾಗಬಹುದು ಎನ್ನುವುದು ನನಗೆ ತಿಳಿದಿದೆ. ಕಷ್ಟಪಟ್ಟರೆ ಸುಖ ಉಂಟು.

೨. ರೋಗಗಳ ವಿಚಾರಮಾಡಿ ಶ್ರೀಸಾಮಾನ್ಯನಿಗೆ ತಿಳಿಯುವಂತೆ ಯಾವ ಲೇಖನವನ್ನು....ಸರಳವಾಗಿ ಬರೆದರೂ ಓದುಗನ ಮನಸ್ಸಿನಲ್ಲಿ ನನಗೂ ಈ ರೋಗ ಬಂದಿರುವ ಸೂಚನೆಗಳಿವೆಯೋ ಎಂಬ ಅನುಮಾನವು ಸಾಮಾನ್ಯವಾಗಿ ಉಂಟಾಗುತ್ತದೆ. ಆದುದರಿಂದಲೇ ವೈದ್ಯರುಗಳು ರೋಗಿಗಳೊಂದಿಗೆ ಸ್ವಲ್ಪ ಮಗುಮ್ಮಾಗಿ ಇರುವುದು. ಏನನ್ನಾದರೂ ವಿವರಿಸ ಹೋದರೆ ಎಲ್ಲಿ ಅಪಾರ್ಥ ಮಾಡಿಕೊಂಡು ಇನ್ನೂ ಹೆಚ್ಚು ನರಳುತ್ತಾರೋ ಎಂಬ ಸಂಶಯವೂ ಕಾಡುತ್ತದೆ."

ಇಷ್ಟಾದರೂ ಈ ಗ್ರಂಥಗಳನ್ನು ಬರೆಯುವ ಸಾಹಸ ಏಕೆ ?

೩. "ಕ್ಯಾನ್ಸರ್ ಕ್ಷಯ ಇತ್ಯಾದಿಗಳೆಲ್ಲ ಘೋರವಾದ ಕಾಯಿಲೆಗಳೇ. ಉಗ್ರವಾದಾಗ ಪ್ರಾಣಕ್ಕೇ ಸಂಚಕಾರ ತರಬಹುದು. ಆದರೆ ಇವೆಲ್ಲ ಒಬ್ಬ ವ್ಯಕ್ತಿಯನ್ನು ನರಳಿಸುತ್ತವೆ...."ಆದರೆ ಮನೆಯಲ್ಲಿ ಒಬ್ಬನಿಗೆ ಹುಚ್ಚೋ ಬೆಪ್ಪೋ ಶಿವಲೀಲೆಯೋ ಬಡಿದರೆ ಮನೆಯವರೆಲ್ಲರೂ ಮುಳ್ಳಿನ ಮೇಲೆ ಇದ್ದಂತಾಗುತ್ತದೆ, ಎಲ್ಲರ ನೆಮ್ಮದಿಯೂ ಕೆಡುತ್ತದೆ, ಸಂಸಾರಕ್ಕೆ ಸಂಸಾರವೇ ಕುಂಟುವಂತಾಗುತ್ತದೆ.

೪. "....ಈ ವಿಷಯಗಳನ್ನು ಮನೆಯವರು ಸಾಕಷ್ಟು ಮೊದಲು ತಿಳಿದಿದ್ದರೆ ಇವನನ್ನು ಗಮನಿಸುವುದು ಸುಲಭ ಸಾಧ್ಯ. ಆದಕಾರಣ ಜನಸಾಮಾನ್ಯ

ದಲ್ಲಿ ಈ ವಿಷಯದ ಪ್ರಚಾರವನ್ನು ಅಗತ್ಯವಾಗಿ ಮಾಡಬೇಕು. ಅವರಿಗೆ ಅರ್ಥವಾಗುವಂತೆ ಸರಳವಾಗಿ ಹಾಗೂ ಸುಲಭವಾಗಿ ಬರೆಯಬೇಕು."

ಉದಾತ್ತ ಉದ್ದೇಶ, ಎದುರಿಸಬೇಕಾದ ಸಮಸ್ಯೆಗಳು ಪರಿಹಾರ ಮಾರ್ಗ ಈ ಬಗ್ಗೆ ರಾ.ಶಿ.ಯವರ ಚಿಂತನೆ ಎಲ್ಲ ಕಾಲಕ್ಕೂ ವೈದ್ಯಕೀಯ ಸಾಹಿತಿಗಳಿಗೆ ಮಾರ್ಗದರ್ಶಕ ಎಂದು ಭಾವಿಸಿದ್ದೇನೆ.

೫. ಮನೋವಿಜ್ಞಾನದಂತಹ ಶಾಸ್ತ್ರೀಯ ಗ್ರಂಥಗಳು ಸಾಕಷ್ಟು ಪ್ರಕಟವಾಗದಿರುವಾಗ, ಪಾರಿಭಾಷಿಕ ಶಬ್ದಗಳ ಕೊರತೆ ಒಂದು ಸಮಸ್ಯೆಯಾಗಿಯೇ ಲೇಖಕನನ್ನು ಕಾಡುವುದು ಸಹಜ. ಆರಂಭದ ಬರಹಗಾರರ ಜವಾಬ್ದಾರಿ ಈ ವಿಷಯದಲ್ಲಿ ತುಂಬ ಹೆಚ್ಚು. ಅವರು ನೂತನ ಶಬ್ದ ಬ್ರಹ್ಮರೂ ಆಗಬೇಕಾಗುತ್ತದೆ. ಇರುವ ಶಬ್ದಗಳಿಗೆ ಖಚಿತ ಅರ್ಥವನ್ನೂ ಹೇಳಬೇಕಾಗುತ್ತದೆ. ಈ ದಿಸೆಯಲ್ಲಿ ರಾ.ಶಿ.ಯವರ ಕೊಡುಗೆ ಪ್ರಶಂಸನೀಯ. (ನೋಡಿ ಪುಟ ೩ ಮನಮಂಥನ) "ಆತಂಕ, ಕಾತರ, ತವಕ, ತಲ್ಲಣ, ತಳಮಳ ಇವೆಲ್ಲ ವಾಕ್ಕುಗಳು ನಿಘಂಟಿನ ಪ್ರಕಾರ ಒಂದೇ ಅರ್ಥವನ್ನು ಸೂಚಿಸುತ್ತವೆ. Anxiety, Worry-Perturbed ಇವೆಲ್ಲ ಪದಗಳೂ ಸೂಚಿಸುವ ಅರ್ಥ. ಹಾಗಿದ್ದರೂ ಆತಂಕದ ಹಂತವನ್ನು ಸೂಚಿಸಲು ಈ ಮಾತುಗಳನ್ನು ಬಳಕೆಗೆ ತರುವುದು ಒಳ್ಳೆಯದು. ಆತಂಕಕ್ಕಿಂತ ಕಾತರ, ಅದಕ್ಕೂ ಹೆಚ್ಚಾದಾಗ ತವಕ, ಮತ್ತೂ ಹೆಚ್ಚಾದಾಗ ತಳಮಳ ಎಂದು ಬಳಸಿದರೆ ಶಬ್ದ ಭಾಂಡಾರವನ್ನು ಮತ್ತಷ್ಟು ಸ್ಪಷ್ಟಪಡಿಸಿದಂತಾಗುತ್ತದೆ."

ಇದು ಶಾಸ್ತ್ರ ಸಾಹಿತ್ಯ ನಿರ್ಮಾಪಕರು ಅನುಸರಿಸಬೇಕಾದ ಆರೋಗ್ಯಕರವಾದ ಧೋರಣೆ.

ಇಲ್ಲಿಯೇ ಒಂದು ಮಾತು. ಮನೋನಂದನ ಗ್ರಂಥದ ಭಾಗ-೧ನ್ನು "ಪಾಠ ಕಲಿಸಿದ ರೋಗಿಗಳ ಕಥೆಗಳು" ಎಂದು ಕರೆಯುವ ಔದಾರ್ಯವನ್ನು ರಾಶಿ ಪ್ರಕಟಿಸಿದ್ದಾರೆ. ಹಲವಾರು ಮನೋರೋಗದ ಸೂಚನೆಗಳು ಆಕಸ್ಮಿಕವಾಗಿ

ದೊರಕಿದವು, ರೋಗಿಗಳೇ ಕಲಿಸಿಕೊಟ್ಟವು ಎಂಬುದನ್ನು ವಿನಯದಿಂದ ಸೂಚಿಸಿದ್ದಾರೆ. ಪ್ರತಿಕಥೆಯ ಅಂತ್ಯದಲ್ಲಿ 'ಕಲಿತ ಪಾಠ' ಎಂಬ ಅಧ್ಯಾಯವೇ ಉಂಟು. ತಾವು ತಪ್ಪಾಗಿ ಊಹಿಸಿದ ಸಂಗತಿಗಳು, ಇನ್ನೂ ಮೊದಲೇ ಸರಿಯಾದ ಪ್ರಶ್ನೆ ಕೇಳಲಿಲ್ಲ ಎಂಬ ವಿಷಾದ, ಇತ್ಯಾದಿಗಳನ್ನು ಅತ್ಯಂತ ಪ್ರಾಂಜಲ ಮನಸ್ಸಿನಿಂದ ಬರೆಯುತ್ತಾರೆ. ಇಂತಹ ಆತ್ಮಪರೀಕ್ಷೆ ಹಾಗೂ ಶಾಸ್ತ್ರವಿನಯ, ತಪ್ಪೊಪ್ಪಿಗೆಗಳು ಇಂದಿನ ದಿನಗಳಲ್ಲಿ ತೀರಾ ಅಪರೂಪ. ಓಗೆ Egoವನ್ನು ಗೆದ್ದು ನಿಲ್ಲುವುದು ಸಾಮಾನ್ಯವಲ್ಲ.* ಕಾಲೇಜಿನ ವೈದ್ಯ ವಿದ್ಯಾಭ್ಯಾಸ ಅಷ್ಟೇ ಸಾಲದು. ಸ್ವಂತ ಅನುಭವದಿಂದ ಕಲಿಯುತ್ತಲೇ ಇರಬೇಕು. ನಿಸ್ವಾರ್ಥ ಮಾನಸಿಕ ಚಟುವಟಿಕೆಯಾದ ಅನುಕಂಪ ವೈದ್ಯನಿಂದ ಸದಾ ಹೊಮ್ಮುತ್ತಿರಬೇಕು. ಮತ, ಧರ್ಮ, ಪೂಜೆ, ಪುನಸ್ಕಾರಗಳ ನಂಬಿಕೆಗಳು ಚಿಕಿತ್ಸಾಕ್ರಮಕ್ಕೆ ಬಹು ಪ್ರಯೋಜನಕಾರಿಯೇ. ಅವುಗಳನ್ನು ಅವಹೇಳನ ಮಾಡುವಂತಹ ಮಾತುಗಳನ್ನು ಆಡಬಾರದು. 'ನಾನು ಮಾಡಲು ಸಾಧ್ಯವಾದುದನ್ನೆಲ್ಲ ಆತ್ಮವಂಚನೆ ಇಲ್ಲದೆ ಮಾಡಿದ್ದೇವೆ. ಇನ್ನು ರೋಗಿಯು ಗುಣಹೊಂದಬೇಕಾದರೆ ಬೇರೆ ಯಾವುದೋ ಶಕ್ತಿ ಒಲಿಯಬೇಕು ಎಂಬ ಸರಳ ಶ್ರದ್ಧೆ ವೈದ್ಯನ ಮನದಲ್ಲಿ ದೃಢವಾಗಿದ್ದರೆ ಆತನ ಮಾನಸಿಕ ತಾರ್ಕಿಕ ಚಟುವಟಿಕೆಗಳು ಸ್ಫುಟವಾಗಿರಲು ಅನುಕೂಲವಾಗುತ್ತದೆ. ....ಎಂದು ಈ ಮಾನವತಾವಾದಿ ಹಿರಿಯ ಅನುಭವೀ ವೈದ್ಯ ಹಿತ ನುಡಿದಿದ್ದಾರೆ. ಹೀಗಾಗಿ ರಾಶಿಯವರ ವೈದ್ಯಕೀಯ ಸಾಹಿತ್ಯ ರೋಗಿಗಳಿಗೆ ಮಾತ್ರವಲ್ಲ ವೈದ್ಯರಿಗೂ ಮಾರ್ಗದರ್ಶಿ ಎನಿಸುತ್ತದೆ. ತೆರೆದ ಮನಸ್ಸಿನ ಮುಕ್ತ ಚಿಂತನ ಅವರ ಕೃತಿಗಳಲ್ಲಿ ದೊರಕುತ್ತದೆ.

೦ ೦ ೦

ಇದಿಷ್ಟು ಮಾತುಗಳನ್ನು ಗೌರವದಿಂದ ಒಪ್ಪಿಕೊಂಡು ರಾ.ಶಿ.ಯವರ

---

* ಅನೇಕವೇಳೆ ವೈದ್ಯರು ತಮ್ಮ ಅತಿ ಆತುರದ ಯಡವಟ್ಟು ಪ್ರಶ್ನೆಗಳಿಂದ ಮೊದಲೇ ಆತಂಕಗೊಂಡ ರೋಗಿಯನ್ನು ಮತ್ತಷ್ಟು ಕಂಗೆಡಿಸಬಲ್ಲರು ಎಂಬುದನ್ನು 'ಆತಂಕ' ಎಂಬ ಮೊದಲ ಅಧ್ಯಾಯದಲ್ಲಿ ಲೇಖಕರು ಉದಾಹರಿಸುವುದನ್ನು ಗಮನಿಸಬಹುದು.

(ವೈದ್ಯಜನಿತ ಆತಂಕ–ಮನಮಂಥನ–ಪು; ೬೮-೬೫)

* ೧, ೨, ೩, ೪ 'ಮನಮಂಥನ'ದ 'ಬಿನ್ನಹ'ದಲ್ಲಿ ರಾ.ಶಿ.

ವೈದ್ಯಕೀಯ ಸಾಹಿತ್ಯದ ಇತಿ–ಮಿತಿಗಳನ್ನು ವಿನಯದಿಂದಲೇ ಸೂಚಿಸ ಬಯಸುತ್ತೇನೆ :

೧. ಆಧುನಿಕ ಅರ್ಥದಲ್ಲಿ ರಾ.ಶಿ. ಮನೋರೋಗ ತಜ್ಞರಾದ ವೈದ್ಯರಲ್ಲ. ಮನಶ್ಶಾಸ್ತ್ರ ಹಾಗೂ ಮನೋರೋಗ ಚಿಕಿತ್ಸೆ ಅವರ Specialisation ಅಲ್ಲ, ಅವರ ಅನುಭವ–ಸ್ವಂತ ಆಸಕ್ತಿ ಆಳವಾದ ವ್ಯಾಸಂಗ ಡಾ|| ಗೋವಿಂದಸ್ವಾಮಿ ಮುಂತಾದ ತಜ್ಞರ ಸಾಹಚರ್ಯ–ಸಮಾಲೋಚನೆ ಗಳಿಂದ ಸಿದ್ಧವಾದದ್ದು. ಈ ಅಂಶ ರಾಶಿಯವರ ಶಾಸ್ತ್ರೀಯ ಬರಹಕ್ಕೆ ಒಂದು ಮಿತಿಯನ್ನು ಒದಗಿಸುವುದು ಸತ್ಯ. Academic Discipline ಎಂದು ಕರೆಯಬಹುದಾದ ಗುಣದ ಕೊರತೆ ಈ ಜನಪ್ರಿಯ ಕೃತಿ ಗಳಲ್ಲಿ ಎದ್ದು ಕಾಣುತ್ತದೆ.

೨. ರಾಶಿಯವರ ವ್ಯಾಸಂಗದ ಹರವು ಬಹಳ ವಿಸ್ತಾರದ್ದು. ಅದು ವೈದ್ಯಕೀಯ, ಧರ್ಮ, ಅಧ್ಯಾತ್ಮಗಳೆಲ್ಲವನ್ನೂ ಒಳಗೊಂಡಿದೆ. ಒಂದು ಬಗೆಯ ತಾತ್ವಿಕ ಚಿಂತನೆಯ ಛಾಯೆ ಅವರ ಕೃತಿಗಳಲ್ಲಿ ಕಾಣುತ್ತದೆ. ದೈಹಿಕ ಬೇನೆಯಿಂದ ತೈತ್ತರೀಯದ ಆನಂದವಲ್ಲಿಯವರೆಗೆ ಇಲ್ಲಿಯ ವಿವರಣೆ. ಇಂತಹ ವ್ಯಾಸಂಗವಲ್ಲದೆ ದೈವಶ್ರದ್ಧೆ–ಜನ್ಮ ಜನ್ಮಾಂತರಗಳಲ್ಲಿ ನಂಬಿಕೆ–ಬ್ರಹ್ಮಾನಂದದ ನೆಲೆಯ ಅಭೀಪ್ಸೆ–ಇತ್ಯಾದಿಗಳು ಈ ಲೇಖಕರ ಅಪ್ಪಟ ಆಧ್ಯಾತ್ಮಿಕ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿವೆ. ಲೇಖಕರ ವ್ಯಕ್ತಿತ್ವದ ಪರಿಪೂರ್ಣತೆಗೆ ಈ ಬಗೆಯ ಜೀವನ ದೃಷ್ಟಿ ನೆರವಾಗಬಹುದು. ಆದರೆ ವೈದ್ಯಕೀಯ ಶಾಸ್ತ್ರದ ಖಚಿತ ಪರಿಧಿಯನ್ನು ಅದು ಮೀರುವುದಿಲ್ಲವೆ ? ಶಾಸ್ತ್ರಗ್ರಂಥಕ್ಕೆ ಅಂಥ ವೈಯಕ್ತಿಕ ಚಿಂತನೆಯ ನೆರಳು ಕವಿದು ವಿಷಯ ಗೊಂದಲಮಯವಾಗುವುದಿಲ್ಲವೇ ಎಂಬುದನ್ನು ವೈದ್ಯ ಬಂಧುಗಳು ಚಿಂತಿಸಬೇಕು. ಶಾಸ್ತ್ರದ ಶಿಸ್ತನ್ನು ರಾಶಿಯವರು ಮೀರಿಬಿಡುತ್ತಾರೋ ಎಂಬ ಸಂದೇಹ ನನ್ನಂತಹ ಸಾಮಾನ್ಯ ವಾಚಕನಿಗುಂಟು. ವಿಶೇಷವಾಗಿ "ಮನನ"ದಲ್ಲಿ ವೈದ್ಯಕೀಯ ಸಂಗತಿಗಳನ್ನೂ ಭಗವದ್ಗೀತೆ ಉಪನಿಷತ್ತು ಹಾಗೂ ಜ್ಯೋತಿಷ್ಯ, ಜಾನಪದ ನಂಬಿಕೆಗಳನ್ನೂ ಜೊತೆ ಜೊತೆಯಾಗಿ ಚಿಂತಿಸುವ ವಿಧಾನದಲ್ಲಿ ಈ ತೊಡಕನ್ನು ಗುರುತಿಸಬಹುದು. ವ್ಯಾಸಂಗ

ದಲ್ಲಿ, ವೈಯಕ್ತಿಕ ಚಿಂತನದಲ್ಲಿ ತೆರೆದ ಮನಸ್ಸು ಆರೋಗ್ಯಕರ ಎಂಬುದು ನಿಜವಾದರೂ ವೈದ್ಯಕೀಯ ಸಾಹಿತ್ಯ ರಚನೆಯಲ್ಲಿ ಖಚಿತತೆ, ಶಾಸ್ತ್ರ ಶಿಸ್ತು, ಇವುಗಳಿಗೆ ಮೊದಲ ಮನ್ನಣೆ ದೊರಕಬೇಕು.

೩. ಆಗಲೇ ಸೂಚಿಸಿದಂತೆ ರಾಶಿಯವರ ಭಾಷೆ ಹರಟೆಗೆ ಹತ್ತಿರವಾದ ಲೋಕಾಭಿರಾಮ ಶೈಲಿಯದು. ಅಲ್ಲಿಯ ದೃಷ್ಟಾಂತ ವಿಭಾಗದಲ್ಲಿ ಈ ಅಂಶವನ್ನು ಗಮನಿಸಬಹುದು. ಗಣೇಶನ ಹಬ್ಬ, ಕುತ್ತಾಲ ಸೀರೆ, ಕೆಂಡರೊಟ್ಟಿ, ಅರಿಸಿನ ಕುಂಕುಮ, ಉದ್ದಿನವಡೆ, ಹಿಟ್ಟಿನ ಗೊಜ್ಜು ಗೋರಿಕಾಯಿ ಬಾಳಕ. ಸತ್ಯನಾರಾಯಣ ಪ್ರಸಾದ ಇಂಥ ಬೊಜ್ಜು ಬೆಳೆಸುವ ವಿವರಗಳು ಅದ್ದೂರಿಯಾಗಿ ತಲೆಹಾಕುತ್ತವೆ. ರೋಗನಿದಾನದ ವಿವರಗಳಾಗಿ ಅವು ಬರುವುದು ಅಕ್ಷಮ್ಯವಲ್ಲ. ಆದರೆ ಬರಿಯ ರೋಚಕ ವಿವರಗಳಾಗಿ ಬರುವುದು ಅಷ್ಟಾಗಿ ಅಪೇಕ್ಷಣೀಯವಲ್ಲ. ಮನಸ್ಸು ಮಾಡಿದರೆ ರಾಶಿ ಅತ್ಯಂತಶಾಸ್ತ್ರೀಯವಾದ ಖಚಿತ–ಸರಳ ಭಾಷೆಯನ್ನು ಎಷ್ಟು ಚೆನ್ನಾಗಿ ಬಳಸಬಲ್ಲರು !*

---

* ಉದಾಹರಣೆಗೆ ಮೆದುಳಿನ ಕಾರ್ಯವನ್ನೂ ಸ್ವರೂಪವನ್ನೂ ನೇರವಾಗಿ ಅವರು ವಿವರಿಸುವ ಪರಿಯನ್ನು ನೋಡಿ. "ಪ್ರಕೃತಿಯಲ್ಲಿರುವ ಪ್ರಾಣಿಗಳಲ್ಲಿ ನೂರಕ್ಕೆ ೯೫ ರಷ್ಟು ಬೆನ್ನೆಲುಬುಗಳನ್ನು ಹೊಂದಿರುವುದಿಲ್ಲ. ಅಂದರೆ ಬೆನ್ನೆಲುಬು ಇರುವ ಪ್ರಾಣಿಗಳು ನೂರಕ್ಕೆ ೫ ಮಾತ್ರ....ಬೆನ್ನೆಲುಬು ಇರುವ ಪ್ರಾಣಿಗಳಲ್ಲಿ ಬೆನ್ನೆಲುಬಿನಲ್ಲಿ ದೊಡ್ಡನರ ಸುರಕ್ಷಿತವಾಗಿರಿಸಲ್ಪಟ್ಟು, ಶಾಖೆಗಳೆಲ್ಲವೂ ಬೆನ್ನೆಲುಬುಗಳ ಮಧ್ಯದಲ್ಲಿರುವ ಕಂಡಿ ಗಳಿಂದ ದೇಹದೊಳಕ್ಕೆ ಒದಗಿಸಲ್ಪಟ್ಟವು. ಈ ನರವೇ ಸ್ಪೈನಲ್ ಕಾರ್ಡ್. ಪ್ರಗತಿ ಮುಂದುವರೆದಂತೆಲ್ಲ ಸ್ಪೈನಲ್ ಕಾರ್ಡಿನ ತಲೆಯ ತುದಿಯ ಕೆಲವು ನರಕೇಂದ್ರಗಳು ತಲೆಯೊಳಗೆ ಸುರಕ್ಷಿತವಾಗಿಸಲ್ಪಟ್ಟವು. ಮೆದುಳಿನ ಮೂಲವನ್ನೇ ಇಲ್ಲಿ ಕಾಣಬಹುದು. ದೇಹದ ಅಂಗಾಂಗಗಳಿಗೆ ಸಂಪರ್ಕಮಾಡಿಕೊಡುವ ಹಿರಿಯ ಹೊಣೆಯನ್ನು ತಲೆಯಲ್ಲಿ ರುವ ಈ ಕೇಂದ್ರಗಳು ವಹಿಸಿಕೊಂಡವು. ದೇಹದ ಹೊರಗಿನ ವಾತಾವರಣದ ಸುದ್ದಿ ಯನ್ನು ಪಂಚೇಂದ್ರಿಯಗಳ ಮೂಲಕ ಪಡೆದು ದೇಹದಲ್ಲಿ ಅಗತ್ಯವಾದ ಸಿದ್ಧತೆಗಳನ್ನು ಮಾಡಿಸಲು ಈ ಮೆದುಳು ಹೊಣೆ ಹೊತ್ತಿತು ಹಾಗೂ ದೇಹದೊಳಗಿರುವ ಎಂಡೋಕ್ರೈನ್ ಗ್ಲಾಂಡ್ಸ್‌ಗಳ ದ್ರವದಿಂದ ರಾಸಾಯನಿಕ ಸಂಪರ್ಕವನ್ನು ಪಡೆದು ಮೆದುಳು ಸೂಕ್ತಕ್ರಮಗಳನ್ನು ತೆಗೆದುಕೊಳ್ಳುತ್ತಿತ್ತು.....ಇತ್ಯಾದಿ (ಮನೋನಂದನ : ಪು ೧೬೪–೫)

೪. ಮನೋನಂದನ ಹಾಗೂ ಮನಮಂಥನದಲ್ಲಿ ನಿರೂಪಿತವಾದ ಉದಾಹರಣೆಗಳು ಮುಖ್ಯವಾಗಿ ಮನೋ ಬೇನೆಗಳು–ಅವುಗಳ ಪರಿಣಾಮವಾಗಿ ಉಂಟಾದ ದೈಹಿಕ ಏರುಪೇರುಗಳು–ತಲೆತಿರುಗು, ಅಪಸ್ಮಾರ, ಮೊಣಕಾಲು ನೋವು, ಹೊಟ್ಟೆ ಉರಿ, ಇತ್ಯಾದಿ. ಆದರೆ ನರಗಳ ದೌರ್ಬಲ್ಯ, ಮೆದುಳಿನ ನ್ಯೂನತೆ ಇತ್ಯಾದಿ ನೈಜವಾದ ದೈಹಿಕ ಅಂಶಗಳೂ ನೈಜೋಫ್ರಿನಿಯಾ ಪ್ಯಾರನಾಯ್ಡ್ ಮುಂತಾದ ಮನೋದೈಹಿಕ ವ್ಯಾಧಿಗಳಿಗೆ ಕಾರಣವಾಗ ಬಹುದಲ್ಲವೆ? ಅಂಥ ವಿವರಗಳು ಈ ಎರಡೂ ಗ್ರಂಥಗಳಲ್ಲಿ ಹೆಚ್ಚಾಗಿ ದೊರಕುವುದಿಲ್ಲ. ಪ್ರಾಯಶಃ ರಾಶಿ ಮನೋರೋಗ ತಜ್ಞರಲ್ಲವಾದುದರಿಂದ ಆ ಬಗೆಯ ರೋಗಿಗಳು ಚಿಕಿತ್ಸೆಗಾಗಿ ಅವರಲ್ಲಿ ಬಂದಿಲ್ಲದಿರುವ ಸಾಧ್ಯತೆಯನ್ನು ನಾನು ಊಹಿಸುತ್ತೇನೆ. ಹೀಗಾಗಿ ಮನೋದೈಹಿಕ ಬೇನೆಗಳ ವ್ಯಾಖ್ಯಾನದಲ್ಲಿ ಈ ಗ್ರಂಥಗಳು ಅಪೂರ್ಣವಾಗಿಯೇ ಉಳಿಯುತ್ತವೆ.

೫. "ಮನೋ ವಿಜ್ಞಾನಿಗಳು ಇಂದು ಮಾಡುತ್ತಿರುವ ಪ್ರಯೋಗಗಳು, ಬಳಸುತ್ತಿರುವ ವಿಧಾನಗಳು ಇವೆಲ್ಲವನ್ನೂ ಇನ್ನೂ ಹೆಚ್ಚು ಫಲಪ್ರದವಾಗುವಂತೆ ಪುರಾಣ, ಗೀತೆ ಇತ್ಯಾದಿಗಳಲ್ಲಿ ನಮ್ಮ ಹಿರಿಯರು ಸಾಧಿಸುತ್ತಿದ್ದರು. ಇದನ್ನು ಮನಗಂಡ ನಾವು ಆಧುನಿಕ ಮನೋವಿಜ್ಞಾನವು ಯಾವ ರೀತಿ ಮುಂದುವರೆಯಬೇಕು ಎನ್ನುವುದನ್ನು ಯೋಚಿಸಬೇಕು" ಎಂದು ರಾಶಿ ನುಡಿಯುತ್ತಾರೆ. ಅಧ್ಯಾತ್ಮವೆ ಎಂದರೆ ಮೋಕ್ಷವೆ ನಿಶಿತ ಪ್ರಯೋಜನವಾಗಿದ್ದ ಪ್ರಾಚೀನರ ದೃಷ್ಟಿಯನ್ನು–ಆಶಯ ಪ್ರಯೋಗ ಪ್ರಯೋಜನಗಳು ಸಂಪೂರ್ಣವಾಗಿ ವಿಭಿನ್ನವಾಗಿರುವಾಗ ಹೀಗೆ ಸಾರಾಸಗಟಾಗಿ ಒಪ್ಪಿಕೊಳ್ಳಬಹುದೆ? ಲೇಖಕನ ಪ್ರಾಚೀನತೆಯ ಪ್ರೀತಿ ಕೊಂಚ ಹೆಚ್ಚು ಎನಿಸದೆ? ಮನಮಂಥನವನ್ನು ಶುದ್ಧ ಶಾಸ್ತ್ರೀಯ ಗ್ರಂಥವೆಂದು ನೀವು ಸ್ವೀಕರಿಸುವುದಾದರೆ, ಇಲ್ಲಿ ಬರುವ ಭಗವದ್ಗೀತೆಯ ಹಾಗೂ ಪಾತಂಜಲಯೋಗ ಸೂತ್ರದ ವಿಸ್ತಾರವಾದ ವ್ಯಾಖ್ಯಾನ ಪ್ರಸ್ತುತವೆ ಎಂಬುದನ್ನು ತಾವು ಚಿಂತಿಸಬೇಕು.

೬. ಇದೇ ಉಸಿರಿನಲ್ಲಿ ಹರಿಶ್ಚಂದ್ರನ ಉಪಾಖ್ಯಾನವನ್ನು ಅರ್ಥೈಸುತ್ತಾ

"ನಕ್ಷತ್ರಿಕನು ಹರಿಶ್ಚಂದ್ರನ ಮನಸ್ಸಿನಲ್ಲಿ ಮೂಡಿಬಂದ ದೃಢವಾದ ಪ್ಯಾರನಾಯ್ಡ್ ಭ್ರಮೆ. ಅದು ನಿತ್ಯ ಮತ್ತು ಸತ್ಯವೆಂದು ಹರಿಶ್ಚಂದ್ರನಿಗೆ ಅನಿಸಿದುದರಿಂದಲೇ ಅವ ತನ್ನ ಹಟವನ್ನು ಕಡೆಯ ತನಕ ಸಾಧಿಸಿದ. ತನ್ನ ಅಹಂಕಾರವನ್ನು ಕಳೆದುಕೊಂಡ" ಎಂದು ವ್ಯಾಖ್ಯಾನಿಸುವುದಾಗಲೀ "ಈ ದೃಷ್ಟಿಯಿಂದ ನೋಡಿದರೆ ಪ್ಯಾರನಾಯ್ಡ್ ಎಂಬುದು ಅಹಂಕಾರ ನಿರ್ಮೂಲನೆಗೆಂದು ಮನಸ್ಸು ಹೂಡಿದ ಪ್ರತಿಕ್ರಿಯೆ ಎಂದನ್ನುವುದು ತಪ್ಪಲ್ಲ" ಎಂಬ ಧಿಡೀರ್ ತೀರ್ಮಾನಕ್ಕೆ ಬರುವುದು. ಪ್ರಾಚೀನ ಕಾವ್ಯ ಮೌಲ್ಯ ಹಾಗೂ ಪ್ಯಾರನಾಯ್ಡ್‌ನಂತಹ ಮನೋದೈಹಿಕ ಬೇನೆಯ ವ್ಯಾಖ್ಯಾನ ಎರಡಕ್ಕೂ ಮಾಡಿದ ಅನ್ಯಾಯವಲ್ಲವೇ ಯೋಚಿಸಬೇಕು.

೭. ನಮ್ಮ ಸಂಸ್ಕೃತಿಯಲ್ಲಿ ಬೆಳೆದು ಬಂದ ಪೂಜೆ, ವ್ರತ, ಹರಕೆ, ಯಾತ್ರೆ ಇವುಗಳ ಮೇಲಿನ ಶ್ರದ್ಧೆಯನ್ನು ಮನೋವೈದ್ಯ ಬಳಸಿಕೊಳ್ಳಬೇಕು. ಇವೆಲ್ಲ ಶುದ್ಧ ತಿಳಿಗೇಡಿತನ ಎಂದು ಅಲ್ಲಗೆಳೆಯಬಾರದು. ರೋಗಿಯ ರೋಗ–ತಳಮಳ ಕಡಿಮೆಯಾದರೆ ಸರಿ ಎಂದು ರಾಶಿ ವೈದ್ಯರಿಗೆ ಉಪ ದೇಶಮಾಡಿದ್ದಾರೆ. ಆಶಯ ನನಗೆ ಅರ್ಥವಾಗುತ್ತದೆ. ಆದರೆ ಇದು ವೈದ್ಯಕೀಯ ವಿಜ್ಞಾನವನ್ನು ಜನಪ್ರಿಯಗೊಳಿಸುವ ಮಾರ್ಗವೆ ? ಹೇಗಾದರೂ ರೋಗವಾಸಿಯಾದರೆ ಸರಿ ಅಥವಾ ವಾಸಿಯಾದಂತೆ ತೋರಿ ಬಿಟ್ಟರೆ ಸರಿ ಎಂದು ವಾದ ಹಿಡಿದು ಹೊರಟರೆ ರಾತ್ರಿ ತೋಡಿದ ಹಳ್ಳದಲ್ಲಿ ಹಗಲು ಬಿದ್ದಂತಾಗುವುದಿಲ್ಲವೆ ? ರೋಗಿಯನ್ನು ನಾವೇ ಅರಿಯದಂತೆ ಭ್ರಮಾಚಕ್ರದಲ್ಲಿ ಸಿಲುಕಿಸಿದಂತಾಗದೆ ? ಈ ಪ್ರಶ್ನೆಗಳನ್ನು ಮನೋ ವೈದ್ಯರು ಸವಾಲಿನಂತೆ ಸ್ವೀಕರಿಸಬೇಕು. ತಾವು ಮೊದಲು ದ್ವಂದ್ವ ದಿಂದ ಪಾರಾಗಬೇಕು ಎಂದು ನನ್ನ ಕಳಕಳಿಯ ಮನವಿ. ವೈದ್ಯಕೀಯ ಅದರಲ್ಲೂ ಮನೋವೈದ್ಯಕೀಯ ಸಾಹಿತ್ಯದಲ್ಲಿ ಇದೊಂದು ಜಾರುದಾಣ ಎಂದೇ ನನ್ನ ಭಾವನೆ.

೮. ಕೆಲವು ಮನೋದೈಹಿಕ ಬೇನೆಗಳನ್ನು ಕುರಿತು ಬರೆಯುವಾಗ ಇವು ಅಪರಿಹಾರ್ಯ, ಹೇಗಾದರೂ ಹೊಂದಿಕೊಂಡು ಸಮಾಜದಲ್ಲಿ ಜೀವಿಸು ವಂತೆ ರೋಗಿಗಳನ್ನು ಸಿದ್ಧಪಡಿಸುವುದಷ್ಟೇ ಮಾಡಬಹುದಾದ ಕೆಲಸ

ಎಂದು ರಾಶಿಯವರ ತೀರ್ಮಾನ. ಇತ್ತೀಚಿನ ದಶಕದಲ್ಲಿ ಈ ಬಗ್ಗೆ ಆಗಿರುವ ವೈದ್ಯಕೀಯ ಸಂಶೋಧನೆಗಳನ್ನು ಗಮನಕ್ಕೆ ತಂದುಕೊಂಡು, ಈ ಅಭಿಪ್ರಾಯವನ್ನು ಸ್ವಲ್ಪಮಟ್ಟಿಗಾದರೂ ಪರಿಷ್ಕರಿಸಲು ಸಾಧ್ಯವೇ ಎಂಬುದನ್ನು ವೈದ್ಯಬಂಧುಗಳು ಚಿಂತಿಸಬಹುದು.

ಈ ಎಲ್ಲ ಮಾತುಗಳೂ ಇಂದಿನ ನಿಲವಿನಲ್ಲಿ ನಾನು ನಿಂತು ಬೀರಿದ ಹಿನ್ನೋಟ ಮಾತ್ರ. ಮನೋರೋಗವನ್ನು ಮನಶ್ಶಾಸ್ತ್ರವನ್ನು ಕುರಿತ ಬರವಣಿಗೆಗಳೇ ಇಲ್ಲದ ದಿನಗಳಲ್ಲಿ ರಾಶಿಯವರು ಇಟ್ಟ ಮೊದಲ ಹೆಜ್ಜೆ ಗೌರವಾಸ್ಪದ ಪ್ರಶಂಸೆಗೆ ಅರ್ಹ ಎಂಬುದನ್ನು ಆ ಮಹನೀಯ ಬಗೆಗಿನ ಪೂರ್ಣಗೌರವದಿಂದ ಇಲ್ಲಿ ಉಲ್ಲೇಖಿಸ ಬಯಸುತ್ತೇನೆ.

ಲೇಖಕರ ವಿಳಾಸ

ದೊಡ್ಡೇರಿ ವೆಂಕಟಗಿರಿರಾವ್
ದೊಡ್ಡೇರಿ, ಉಳವಿ
ಶಿವಮೊಗ್ಗ–577434

ಡಾ|| ಸಿ. ಆರ್. ಚಂದ್ರಶೇಖರ
ಮನೋವೈದ್ಯರು, ಟೈಪ್–5
ಬ್ಲಾಕ್–೩, ಕ್ವಾರ್ಟರ್ಸ್ ನಂ. 15
ನಿಮ್ಹಾನ್ಸ್ ಕ್ವಾರ್ಟರ್ಸ್
ಬೆಂಗಳೂರು–560 029

ಡಾ|| ಹೆಚ್. ಡಿ. ಚಂದ್ರಪ್ಪಗೌಡ
64, 'ಶ್ರೀನಿವಾಸನಿಲಯ'
ಮಿಷನ್ ಕಾಂಪೌಂಡು
ಶಿವಮೊಗ್ಗ–577201

ಶ್ರೀ ಆರ್. ಎಸ್. ರಾಜಾರಾಮ
ನವಕರ್ನಾಟಕ ಪಬ್ಲಿಕೇಷನ್ಸ್
ನಂ. ೧೧, ಎಂಬೆಸಿ ಸೆಂಟರ್
ಕ್ರೆಸೆಂಟ್ ರೋಡ್
ಬೆಂಗಳೂರು

ಪ್ರೊ|| ಜೆ. ಆರ್. ಲಕ್ಷ್ಮಣರಾವ್
ಮೈತ್ರಿ, 12ನೇ ಮೈನ್,
ಸರಸ್ವತಿಪುರ
ಮೈಸೂರು–570 009

ಡಾ|| ಎಚ್. ಗಿರಿಜಮ್ಮ
ನಂ. ೩೩, ೩ನೇ ಮೈನ್
೭ನೇ ಕ್ರಾಸ್, ಜಯಮಹಲ್ ಬಡಾವಣೆ
ಬೆಂಗಳೂರು–560 046

ಡಾ|| ಪಿ. ಎಸ್. ಶಂಕರ್
ಪ್ರಿನ್ಸಿಪಾಲರು
ಎಂ. ಆರ್. ಮೆಡಿಕಲ್ ಕಾಲೇಜು
ಗುಲಬರ್ಗಾ–585 105

ಡಾ|| ಎ.ಎಸ್. ವೇಣುಗೋಪಾಲರಾವ್
ರೀಡರ್ ಮತ್ತು ಕನ್ನಡ ವಿಭಾಗ ಮುಖ
ಕಮಲಾ ನೆಹರೂ ಕಾಲೇಜು
ಶಿವಮೊಗ್ಗ–577 201

ಸಾಹಿತ್ಯೇತರ ಕ್ಷೇತ್ರಗಳಲ್ಲಿ ಕನ್ನಡದ ಬಳಕೆ ಹೆಚ್ಚಾದಂತೆ ಭಾಷೆಗೂ ಹದ ಬರುತ್ತದೆ; ಭಾಷೆಯನ್ನು ಬಳಸುವ ಮನಸ್ಸಿಗೂ ಮೊನಚು ಮೂಡುತ್ತದೆ. ಆದ್ದರಿಂದ, ಕನ್ನಡದ ಉಪಯೋಗವು ನಮ್ಮ ಭಾವ–ಬುದ್ಧಿಗಳನ್ನು ಬೆರಗುಗೊಳಿಸುವ ಒಂದು ವಿಶಿಷ್ಟ ಪ್ರಕ್ರಿಯೆ. ಕನ್ನಡದ ಮೂಲಕ ನಾವು ವಿವಿಧ ವಿಷಯಗಳನ್ನು ವ್ಯಕ್ತಪಡಿಸುತ್ತ, ಅಭಿವ್ಯಕ್ತ ಪಡಿಸುತ್ತ ಹೋದಂತೆ ಭಾಷೆಯೂ ಬದಲಾಗುತ್ತದೆ; ನಾವೂ ಬದಲಾಗುತ್ತೇವೆ. ವಿಜ್ಞಾನದ ವಿವಿಧ ನೆಲೆಗಳು ಕನ್ನಡದ ಮೂಲಕ ಮಾತು ಪಡೆಯುವುದು ಈ ದೃಷ್ಟಿಯಿಂದ ಮುಖ್ಯವಾದುದು. 'ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯ'ವೆಂಬ ಈ ಕೃತಿಯ ಮಹತ್ವವನ್ನು ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ತಿಳಿಯಬಹುದು.